ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

24 ಜೂನ್ 2015 ಪುಟ 20 ರೂ. 15/-

ಆ್ಯಪಲ್ ಅಜ್ಜ ಮತ್ತು ಸೇಬುಹಣ್ಣು






ರಾಜ್ ಫ್ಯಾಮಿಲಿ ಅತಂತ್ರ ಕುತಂತ್ರ ಷಡ್ಯಂತ್ರ




ಮಂಡ್ಯ ಡಿಸಿಸಿ ಬ್ಯಾಂಕ್: ದುಡ್ಡಿನ ಧಣಿಗಳ ದರ್ಬಾರ್

ಬಾಗಲಕೋಟೆ ಪಾಲಿಕೆಯಲ್ಲಿ 'ರುದ್ರ' ತಾಂಡವ



ಹುಬ್ಬಳ್ಳಿ ಬೆಟ್ಟಿಂಗ್ ಜಾಲದಲ್ಲಿ ಡಿಸಿಪಿ ಫಿಕ್ಸ್





ಶಿರಸಿ ಮುದಿ ಅಂಬಿಕಾನಂದನೂ ಅನಾಹುತಕಾರಿ ರಾಘುನೂ...



ಧರಣಿ ಕೂತಿರುವ ಕನ್ನಡ ಸಿನಿಮಾ ನಿರ್ಮಾಪಕರಿಗೊಂದು ಪ



ಹಾಗೆ ನೋಡಿದರೆ, ಇದನ್ನು ಕೇವಲ ಕನ್ನಡ ಸಿನಿಮಾ ನಿರ್ಮಾಪಕರ ಜೊತೆ ಮಾತ್ರ ಮಾತನಾಡಿ ಪ್ರಯೋಜನವಿಲ್ಲ, ನಟರು, ಅದರಲ್ಲೂ ನಾಯಕ ನಟರು ಇಲ್ಲಿನ ಒಟ್ಟಾರೆ ಒಳಿತು-ಕೆಡಕುಗಳಲ್ಲಿ ತಾವೂ ಪಾಲುದಾರರೇ ಆಗಿದ್ದಾರೆ. ಆದರೆ, ನಾಯಕ ನಟರನ್ನೂ ಗುರಿಯಾಗಿಸಿಕೊಂಡು ನಿರ್ಮಾಪಕರು ಕಳೆದ 9 ದಿನಗಳಿಂದ ಧರಣಿ ಕುಳಿತಿದ್ದಾರೆ. ಈ ಲೇಖನ ಬರೆಯುವ ಹೊತ್ತಿಗೆ ಅದು ಬಗೆಹರಿಯುವ ಸೂಚನೆ ಇಲ್ಲ; ಬಿಗಡಾಯಿಸುವ ಸಾಧ್ಯತೆಯೂ ಕಡಿಮೆ. ಏಕೆಂದರೆ, ಸಮಸ್ಯೆ ಉದ್ದಿಮೆಯು ನಡೆಯುತ್ತಿರುವ ತರ್ಕಕ್ಕೆ ತಕ್ಕಂತೆಯೇ ಇದೆ. ಇದೊಂಥರ ತಾವೇ ಒಂದು ಸಮಸ್ಯೆಯನ್ನು ವರ್ಷಗಟ್ಟಲೆ ಶ್ರಮದಿಂದ ಹುಟ್ಟು ಹಾಕಿ, ನಂತರ ತಾವೇ ಅದರ ವಿರುದ್ಧ ಚಳವಳಿ ಮಾಡಿದಂತೆ.

ಇನ್ನೂ ಒಂದು ಉದಾಹರಣೆ ಮೂಲಕ ನೋಡುವುದಾದರೆ, ಇತರ ಭಾಷೆಗಳ ಸಿನಿಮಾಗಳನ್ನು ಕನ್ನಡಕ್ಕೆ ಡಬ್ಬಿಂಗ್ ಮಾಡುವುದಕ್ಕೆ ಇಲ್ಲಿ ನಿಷೇಧವಿದೆ. ಅತ್ಯಂತ ಕಡಿಮೆ ಮಾರುಕಟ್ಟೆ ಇರುವ ಮತ್ತು ಆರಂಭ ಕಾಲದಲ್ಲಿ ಮದ್ರಾಸ್ ಕೇಂದ್ರಿತ ತಮಿಳು ಹಾಗೂ ತೆಲುಗು ಸಿನಿಮಾಗಳ ಮೇಲಾಧಿಪತ್ಯದಲ್ಲಿ ನಲುಗಿ ಬಾಲಗ್ರಹ ಪೀಡೆಯನ್ನೂ ಅನುಭವಿಸಿರುವ ಕನ್ನಡ ಚಿತ್ರರಂಗದಿಂದ ಈ ಕೂಗು ಏಳುವುದಕ್ಕೆ ಕೆಲವು ಸಕಾರಣಗಳೂ ಇವೆ. ಆದರೆ, ಕನ್ನಡ ಚಿತ್ರರಂಗ ಡಬ್ಬಿಂಗ್‌ನಿಂದ ಬೆಳೆಯುವುದಿಲ್ಲ ಎಂದು ಹೇಳಿ ಕೂಗೆಬ್ಬಿಸುವ ನಿರ್ಮಾಪಕರುಗಳೇ ಇತರ ಭಾಷೆಗಳ ಸಿನಿಮಾಗಳ ವಿತರಕರೂ ಆಗಿರುತ್ತಾರೆ. ಆ ಕುರಿತು ಅವರಿಗೆ ಕನಿಷ್ಠ ಪ್ರಶ್ನೆಗಳೂ ಏಳುವುದಿಲ್ಲ! ಅದೇ ಸಮಯದಲ್ಲಿ ಕನ್ನಡ ಸಿನಿಮಾ ನಿರ್ಮಿಸಿದ ಇತರ ನಿರ್ಮಾಪಕರಿಗೆ ಥಿಯೇಟರ್ ಸಿಗದಷ್ಟು ಭರ್ಜರಿಯಾಗಿ, ಕನ್ನಡ ನಿರ್ಮಾಪಕರೇ ಥಿಯೇಟರ್‌ಗಳನ್ನು ಹಿಡಿದಿದ್ದರು. ಆಗ ಅವರಿಗೆ ಇತರ ಕನ್ನಡ ನಿರ್ಮಾಪಕರ ಕಷ್ಟ ಅರ್ಥವಾಗಲಿಲ್ಲ, ಅಂತಹ ನಿರ್ಮಾಪಕ-ವಿತರಕರು ಬಹುಶಃ ಈಗಲೂ 'ಚಳವಳಿ'ಯಲ್ಲಿ ಮುಂದೆ ಕೂತುಕೊಂಡಿಲ್ಲ, ನಿರ್ಮಾಪಕರ ಸಂಘದ ಅಧ್ಯಕ್ಷರಾಗಿರುವ ಕಾರಣದಿಂದ ಮುನಿರತ್ನ ಕಾಟಾಚಾರಕ್ಕೆ ಭಾಗವಹಿಸಿರುವುದನ್ನು ಬಿಟ್ಟರೆ!

ಇದು ಕೇವಲ ವ್ಯಕ್ತಿಗತ ನೈತಿಕತೆಯ ಪ್ರಶ್ನೆ ಮಾತ್ರವಲ್ಲದೇ ಒಂದು ಸ್ವತಂತ್ರ ಕಲಾ ಉದ್ದಿಮೆ ಬೆಳೆಯುವ ಸಾಧ್ಯಾಸಾಧ್ಯತೆಗಳ ಪ್ರಶ್ನೆಯೂ ಅಡಗಿರುವುದರಿಂದ ಇದಕ್ಕಿಂತ ಕೆಲವು ಮುಖ್ಯ ಪ್ರಶ್ನೆಗಳನ್ನು ಈ ಸಂದರ್ಭದಲ್ಲಿ ಚರ್ಚಿಸುವ ಅಗತ್ಯವಿದೆ. ಮೊದಲಿಗೆ, ಧರಣಿ ಕುಳಿತಿರುವ ನಿರ್ಮಾಪಕರ ಬೇಡಿಕೆಗಳೇನು?

ಕನ್ನಡ ಚಿತ್ರರಂಗದ ನಾಯಕ ನಟರು ರಿಯಾಲಿಟಿ ಷೋಗಳಲ್ಲಿ ಭಾಗವಹಿಸಬಾರದು; ಶನಿವಾರ, ಭಾನುವಾರಗಳಂದು ಈ ಷೋಗಳು ನಡೆಯುವುದರಿಂದ ಅದೇ ಸಂದರ್ಭದಲ್ಲಿ ಚಿತ್ರಮಂದಿರಗಳಿಗೆ ಪ್ರೇಕ್ಷಕರು ಬರುತ್ತಿಲ್ಲ; ಆ ನಾಯಕ ನಟರ ಸಿನಿಮಾಗಳನ್ನು ಆಯಾ ವಾಹಿನಿಯವರು ಖರೀದಿಸುತ್ತಿಲ್ಲ, ಇದು ತಪ್ಪಬೇಕು ಎಂಬುದು ಪ್ರಮುಖ ಬೇಡಿಕೆಗಳಲ್ಲೊಂದು. ವಿವರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇದು ಭಾಗಶಃ ಸತ್ಯ ಮಾತ್ರ ಎಂಬುದು ಎದ್ದು ಕಾಣುತ್ತದೆ.

ಎಲ್ಲಾ ಚಿತ್ರಮಂದಿರಗಳ ಮಾಲೀಕರೂ ಪರ್ಸಂಟೇಜ್ ರೀತಿಯಲ್ಲೇ ಚಿತ್ರಗಳನ್ನು ಬಿಡುಗಡೆ ಮಾಡಬೇಕು; ಸಹ. ಕಲಾವಿದರ ಕ್ಯಾರವಾನ್ ಕೇಳುತ್ತಿರುವುದರಿಂದ ನಿರ್ಮಾಪಕರಿಗೆ ಕಷ್ಟವಾಗುತ್ತಿದೆ, ಅದನ್ನು ತಪ್ಪಿಸಬೇಕು; ನಾಯಕ, ಪೋಷಕ ಕಲಾವಿದರ ಸಹಾಯಕರಿಗೆ ದುಬಾರಿ ಭತ್ಯೆ ಕೇಳಬಾರದು; ಪೋಷಕ ಕಲಾವಿದರು ದಿನಕ್ಕೆ ಲಕ್ಷಾಂತರ ರೂಪಾಯಿ ಕೇಳುವ ಬದಲು ಚಿತ್ರಕ್ಕೆ ಇಷ್ಟು ಎಂದು ಸಂಭಾವನೆ ಪಡೆದುಕೊಳ್ಳಬೇಕು; ನಾಯಕ ನಟರು ಹೆಚ್ಚು ಚಿತ್ರಗಳಿಗೆ ಕಾಲ್‌ಶೀಟ್ ಕೊಡಬಾರದು; ಯುಎಫ್‌ಓ ಮತ್ತು ಕ್ಯೂಬ್ ಸಂಸ್ಥೆಗಳನ್ನು ಬಗ್ಗು ಬಡಿಯಬೇಕು ಇಲ್ಲವೇ ಸಿನಿಮಾ ಪ್ರದರ್ಶನ ವೇಳೆ ಅವು ಪ್ರದರ್ಶಿಸುವ ಜಾಹೀರಾತುಗಳಲ್ಲಿ ನಿರ್ಮಾಪಕರಿಗೆ ಪಾಲು ಕೊಡಬೇಕು. ಟಿವಿ ಚಾನೆಲ್‌ಗಳು ಸಿನಿಮಾಗಳ ಸ್ಯಾಟಲೈಟ್ ಹಕ್ಕುಗಳನ್ನು ಖರೀದಿಸಬೇಕೆಂದು ಒತ್ತಡ ಹಾಕಬೇಕು.

ಇವೆಲ್ಲಾ 'ಕುಣಿಯಲಾರದವರಿಗೆ ನೆಲ ಡೊಂಕು' ಎಂಬಂತೆ ಕಾಣಬಹುದು. ಸೀಮಿತ ಮಾರುಕಟ್ಟೆಯ ಒಂದು ಚಿತ್ರರಂಗದಲ್ಲಿ ಇಂತಹ ಸಮಸ್ಯೆಗಳು ನಿಜಕ್ಕೂ ಸಮಸ್ಯೆಗಳೇ ಆಗಿರುತ್ತವೆ. ನಮಗೆ ಕನ್ನಡ ಚಿತ್ರರಂಗದಲ್ಲಿ ದರಿದ್ರ ಸಿನಿಮಾಗಳೇ ಹೆಚ್ಚಿವೆ ಎನಿಸುತ್ತದೆ. ಆದರೆ ತಮಿಳು ಮತ್ತು ತೆಲುಗು ಚಿತ್ರರಂಗದಲ್ಲೂ ದರಿದ್ರ ಸಿನಿಮಾಗಳು ಸಾಕಷ್ಟು ಬರುತ್ತವೆ. ದೊಡ್ಡ ಮಾರುಕಟ್ಟೆ ಅವುಗಳಿಗೆ ಇರುವುದರಿಂದ ಇನ್ನೂ ದೊಡ್ಡ ಸಂಖ್ಯೆಯ ಸಿನಿಮಾಗಳೂ ಬರುತ್ತವೆ, ಹೊಸ ಪ್ರಯೋಗಗಳಿಗೂ ದಾರಿಯಾಗುತ್ತಿವೆ. ಕನ್ನಡ ಚಿತ್ರರಂಗದ ಮಾರುಕಟ್ಟೆಯ ಸಮಸ್ಯೆಗಳನ್ನು ಇತರ ದಕ್ಷಿಣ ಭಾರತದ ಚಿತ್ರರಂಗಗಳಿಗೆ ಹೋಲಿಸಲಾಗದು. ಶೇ.68ರಷ್ಟು ಮಾತ್ರ ಕನ್ನಡ ಭಾಷಿಕರನ್ನು ಹೊಂದಿರುವ ಈ ರಾಜ್ಯದಲ್ಲಿ ನೆರೆಯ ಭಾಷೆಯ ಸಿನಿಮಾಗಳು ಸಾಕಷ್ಟು ಹಣ ಮಾಡಲು ಕಾರಣವಿದೆ. ಕರ್ನಾಟಕಕ್ಕಿಂತ ದೊಡ್ಡದಾದ ತಮಿಳುನಾಡು ಮತ್ತು ಆಂಧ್ರ-ತೆಲಂಗಾಣಗಳಲ್ಲಿ ಆಯಾ ಭಾಷೆಯನ್ನಾಡು ವವರು ಇದಕ್ಕಿಂತ ದೊಡ್ಡ ಪ್ರಮಾಣದಲ್ಲಿದ್ದಾರೆ ಮಾತ್ರವಲ್ಲ, ಜಗತ್ತಿನಾದ್ಯಂತ ಹರಡಿಹೋಗಿದ್ದಾರೆ. ಹೀಗಾಗಿಯೇ ಡಬ್ಬಿಂಗ್ ಬೇಡ ಎಂದಾಗ, ಅದಕ್ಕಿರುವ ಈ ಆಯಾಮದ ಕಾರಣದಿಂದ ಹಲವರು ಸಹಾನುಭೂತಿ ವ್ಯಕ್ತಪಡಿಸಿದ್ದರು.

ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಬೇಕಾದ ಸ್ಪಷ್ಟತೆ ಕನ್ನಡ ಚಿತ್ರರಂಗಕ್ಕೆ ಇದ್ದಂತಿಲ್ಲ, ಸಮಸ್ಯೆ ಇರುವುದು ಅಲ್ಲಿ, ಧರಣಿ ಕೂತವರಿಗೆ ಈ ಬೇಡಿಕೆಗಳನ್ನು ಯಾರ ಮುಂದಿಡಬೇಕು, ಯಾರು ಅದಕ್ಕೆ ಉತ್ತರಿಸಬೇಕು ಎಂಬ ಕುರಿತೂ ಮೊದಮೊದಲು ಸ್ಪಷ್ಟತೆಯಿರಲಿಲ್ಲ, ನಿಧಾನಕ್ಕೆ ನಿರ್ಮಾಪಕರ ಜೊತೆ ಸಂಪೂರ್ಣ ಸಹಮತ ಹೊಂದಿರುವ ಚಲನಚಿತ್ರ ವಾಣಿಜ್ಯ ಮಂಡಳಿಯ ಮಧ್ಯಸ್ಥಿಕೆಯಲ್ಲಿ, ಕಲಾವಿದರ ಸಂಘದ ಅಧ್ಯಕ್ಷರಾಗಿರುವ ಅಂಬರೀಷ್ ಅವರ ಅಧ್ಯಕ್ಷತೆಯಲ್ಲಿ ಕಲಾವಿದರ ಮೇಲೆ ನಿರ್ಬಂಧ ಹೇರಬೇಕು ಮತ್ತು ಥಿಯೇಟರ್ ಮಾಲೀಕರು ಕೆಲವು ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು ಹಾಗೂ ಹೇಗಾದರೂ ಮಾಡಿ ಟಿವಿ ಚಾನೆಲ್‌ಗಳ ಮೇಲೂ ಒತ್ತಡ ಹಾಕಬೇಕು ಎಂಬುದು ಕಡೆಯಲ್ಲಿ ತೇಲಿದಂತಿದೆ.

ಕನ್ನಡ ಚಿತ್ರರಂಗಕ್ಕೆ ಬೇಕಾದ ಸುರಕ್ಷಾ ಕ್ರಮಗಳನ್ನು **(protective measures)** ಒಂದಷ್ಟು ಒದಗಿಸಬೇಕು ಎಂದು ಸರ್ಕಾರವನ್ನೂ, ಒಟ್ಟಾರೆ ಚಿತ್ರ ಜಗತ್ತಿನ ಇತರ ವಿಭಾಗಗಳ ಮೇಲೂ (ಥಿಯೇಟರ್ ಮಾಲೀಕರು ಇತ್ಯಾದಿ) ಒತ್ತಡ ಹಾಕುವುದು ನ್ಯಾಯಯುತ ಎಂದೇ ಬೆಂಬಲಿಸೋಣ. ಆದರೆ, ಮೇಲೆ ಹೇಳಿದಂತೆ ನಿರ್ಮಾಪಕರೊಳಗೇ ಇರುವ ಶಕ್ತಿಗಳದ್ದೂ ಕನ್ನಡ ಚಿತ್ರರಂಗವನ್ನು ಹಾಳುಗೆಡವುದರಲ್ಲಿ ಇರುವ ಪಾತ್ರವನ್ನು ನಿರ್ಲಕ್ಷ್ಯ ಮಾಡಲಾದೀತೇ? ಸಿನಿಮಾ ಎಂಬುದು ಇಲ್ಲಿನ ನಿರ್ಮಾಪಕರಲ್ಲಿ ಹೆಚ್ಚಿನವರಿಗೆ ಆತ್ಮ ಸಂಗಾತದ ಸಂಗತಿಯಾಗಿಲ್ಲ, ಆ ದೃಷ್ಟಿಯಲ್ಲಿ ನೋಡಿದರೆ ರವಿಚಂದ್ರನ್ ಥರದವರು ಉಳಿದವರಿಗಿಂತ ಎಷ್ಟೋ ಪಾಲು ಉತ್ತಮ. ಕೆಟ್ಟ ಸಿನಿಮಾಗಳನ್ನು ಸಾಕಷ್ಟು ಮಾಡಿದ್ದಾರಾದರೂ, ಅವರ ಮಟ್ಟಿಗೆ ಸಿನಿಮಾ ಅವರ ವ್ಯಕ್ತಿತ್ವದ ಭಾಗವಾಗಿದೆ. ಹಲವವರಿಗೆ ಬೇರೆಲ್ಲೋ, ಯಾವ್ಯಾವುದೋ ಮಾರ್ಗದಲ್ಲಿ ದುಡಿದದ್ದನ್ನು ತಂದು ಇಲ್ಲಿ ಹಾಕುವುದು ಅಥವಾ ದುಡ್ಡು ದುಡಿದುಕೊಳ್ಳಲು ಇನ್ನೂ ಹಲವು ಮಾರ್ಗಗಳಿದ್ದೂ ಇದೂ ಒಂದು ದಾರಿಯಷ್ಟೇ ಆಗಿದೆ. ಇಂತಹ ಕೆಲವು ಭಾರೀ ನಿರ್ಮಾಪಕರ ಮೇಲಾಳ್ವಿಕೆಯ ಕುರಿತು ಸಣ್ಣ-ಪುಟ್ಟವರು ಪ್ರಶ್ನೆಯೆತ್ತುವ ಧೈರ್ಯವನ್ನೂ ಹೊಂದಿಲ್ಲ.

ಇಂದು ನಾಯಕನಟರ ಸಂಭಾವನೆ ಬಗ್ಗೆ ತಮ್ಮ ತಕರಾರನ್ನು ಇವರುಗಳು ಮುಂದಿಡುತ್ತಿದ್ದಾರೆ. ನಾಯಕ ನಟರನ್ನು ಈ ರೀತಿಯಾಗಿ ಬೆಳೆಸಿರುವುದು ಯಾರು? ಮೊನ್ನಿನ 'ಮಹತ್ವದ' ಸಂಧಾನಸಭೆಯ ಸಂಗತಿಯನ್ನೇ ನೋಡಿ. ಸಭೆಯನ್ನು ಕರೆದಿದ್ದ ಅಂಬರೀಷ್ 4 ಗಂಟೆಗೆ ಬರಬೇಕಿದ್ದವರು 6.30ಕ್ಕೆ ಬಂದರು. 4ಕ್ಕೇ ಬಂದಿದ್ದ ಶಿವರಾಜ್‌ಕುಮಾರ್ ಕಾದು ಕಾದು ವಾಪಸ್ಸು ಹೋಗಿದ್ದರೆ, ಉಳಿದ ಸ್ಟಾರ್ ನಟರುಗಳು ಪತ್ತೆಯೇ ಇರಲಿಲ್ಲ, ಇಂಥವರನ್ನು ಇಂಥ ಜಾಗದಲ್ಲಿ ಕೂರಿಸಿದ್ದು



ಇದೇ ನಿರ್ಮಾಪಕರು. ಹೊಸಬರ ಸಿನಿಮಾಗಳು ಸಾಕಷ್ಟು ಗೆದ್ದಿದ್ದರೂ, ಮೊದಲನೇ ಸಿನಿಮಾದಲ್ಲೇ ಭಾರೀ ಯಶಸ್ಸನ್ನು ತಂದುಕೊಟ್ಟಿದ್ದರೂ ಹೊಸ ಪ್ರಯೋಗಗಳಿಗೆ ನಿರ್ಮಾಪಕರು ಮುಂದಾಗುವುದಿಲ್ಲ, ಗೆದ್ದಿರುವ, 'ಸ್ಟಾರ್' ವ್ಯಾಲ್ಯೂ ಹೊಂದಿರುವ ನಟರ ಹಿಂದೆ ಸಾಲುಗಟ್ಟಿ ನಿಂತುಕೊಳ್ಳುವ ಚಾಳಿ ಇವರದ್ದು. ಕನ್ನಡದ ಇಂದಿನ ಭಾರೀ ಸ್ಟಾರ್ ಸುದೀಪ್‌ರದ್ದೇ ಒಂದು ಉದಾಹರಣೆ ತೆಗೆದುಕೊಳ್ಳಿ. ತೆಲುಗಿನ ಭಾರೀ ಸ್ಟಾರ್‌ಗಳ ಪಟ್ಟಿ ಮಾಡಿದರೆ, ಅದರಲ್ಲಿ ಮೊದಲ 10ರಲ್ಲೂ ಸ್ಥಾನ ಹೊಂದಿರದ ಸುದೀಪ್‌ರನ್ನು ವಿಲನ್ ಮಾಡಿ, ನೊಣವೊಂದನ್ನು ಹೀರೋ ಮಾಡಿ, ಮೊದಲ 3-4 ಸ್ಥಾನದಲ್ಲೂ ಇರದ ನಾಯಕಿಯೊಬ್ಬಳನ್ನು ಹಾಕಿಕೊಂಡು ತಯಾರಿಸಿದ 'ಈಗ' ಸಿನಿಮಾದ ಉದಾಹರಣೆ ಏನನ್ನು ಹೇಳುತ್ತದೆ?

ಅತ್ತಾರಿಂಟಿಕಿ ದಾರೇದಿ ಎಂಬ (ಈಗಾಗಲೇ ವಿವಿಧ ರೂಪಗಳಲ್ಲಿ 4-5 ಸಾರಿ ಬಂದುಹೋಗಿರುವ ಕಥೆಯನ್ನೇ ಅದ್ದೂರಿಯಾಗಿ ಮರುರೂಪಿಸಿದ ಒಂದು ಮಾಮೂಲಿ ಸಿನಿಮಾ) ತೆಲುಗಿನ ಸಿನಿಮಾವನ್ನು ಕನ್ನಡದಲ್ಲಿ ಕೆಟ್ಟದಾಗಿ ರಿಮೇಕ್ ಮಾಡಲಾಗಿದೆ. ಕೇವಲ ಅದ್ದೂರಿತನದ ಮಾತ್ರಕ್ಕೇ ಈ 'ರನ್ನ'ವನ್ನು ಕನ್ನಡದ ವಿಮರ್ಶಕರೂ ಮೆಚ್ಚಿಕೊಂಡಿದ್ದಾರೆ ಮತ್ತು ಪ್ರೇಕ್ಷಕರಿಗೂ ಬೇರೆ ದಾರಿಯಿಲ್ಲವಾಗಿದೆ. ಈ ಸದ್ಯ ನಮ್ಮ ದಕ್ಷಿಣ ಭಾರತ ಸಿನಿಮಾಗಳಲ್ಲಿ ಮಾಮೂಲಾಗಿರುವ ಚೇಷ್ಟೆಗಳನ್ನೇ ಅತ್ತಾರಿಂಟಿಕಿ...ಯಲ್ಲಿ ಮಾಡಿದ್ದ ಬ್ರಹ್ಮಾನಂದಂ ಪ್ರೇಕ್ಷಕರನ್ನು ಸಾಕಷ್ಟು ನಗಿಸಿದ್ದರು. ಅದನ್ನು ಎಷ್ಟು ಕೆಟ್ಟದಾಗಿ ಸಾಧುಕೋಕಿಲರ ಮೂಲಕ ಮಾಡಿಸಲಾಗಿದೆಯೆಂದರೆ, ಕನ್ನಡದ ಪ್ರೇಕ್ಷಕರ ಅಭಿರುಚಿಯನ್ನೂ ಅದು ಹೀಯಾಳಿಸಿದೆ. ತೆಲುಗು, ತಮಿಳು ಸಿನಿಮಾಗಳ ರಿಮೇಕ್ ಮಾಡುವಾಗ ಕನಿಷ್ಠ ಅದನ್ನು ಕನ್ನಡದ ಜಾಯಮಾನಕ್ಕೆ ಒಗ್ಗಿಸುವ ಕೆಲಸವೂ ಇಲ್ಲಿ ನಡೆಯುವುದಿಲ್ಲ, ಇಷ್ಟು ವೃತ್ತಿಪರತೆಯ ಕೊರತೆ ಈ ಚಿತ್ರರಂಗದಲ್ಲೇಕಿದೆ?

ಇಂದು ಹಿಂದಿ ಚಿತ್ರರಂಗದಲ್ಲಿ ಚಿತ್ರಕಥೆಯನ್ನು ಸರಿಯಾಗಿ ಹೆಣೆದು ಹೊಸ ರೀತಿಯಲ್ಲಿ ಹೇಳುತ್ತಿರುವ ಕಾರಣದಿಂದ ಹಲವು ಸಿನಿಮಾಗಳು ಯಶಸ್ವಿಯಾಗುತ್ತಿವೆ. ಆದರ ಜೊತೆಗೇ ಬಹಳ ಪರಿಣಾಮಕಾರಿಯಾಗಿ ಮತ್ತು ಸೂಕ್ಷ್ಮವಾಗಿ, ಕೆಲವೊಮ್ಮೆ ವಾಚ್ಯವಾಗಿ ಸಮಾಜದ ಸಮಕಾಲೀನ ಸಂಗತಿಗಳನ್ನೂ ಅವು ಕೈಗೆತ್ತಿಕೊಳ್ಳುತ್ತಿವೆ, ಜೋಯಾ ಅಖ್ತರ್‌ರ ದಿಲ್ ಧಡಕ್ನೇ ದೋ, ರಾಜ್‌ಕುಮಾರ್ ಹಿರಾನಿಯವರ ಪಿಕೆ, ತನು ವೆಡ್ಸ್ ಮನು ರಿಟರ್ನ್ಸ್ ಇವೆಲ್ಲಾ ಅದಕ್ಕೆ ಉದಾಹರಣೆಗಳು.

ಹಿಂದಿಯ ಇಂಗ್ಲಿಷ್ ವಿಂಗ್ಲಿಷ್, ಲಂಚ್‌ಬಾ[illegible] ಮತ್ತು ಮಲೆಯಾಳಂನ 'ಹೌ ಓಲ್ಡ್ ಆರ್ [illegible] ಮೂರೂ ಸಹ ಯೌವ್ವನವನ್ನು ದಾಟಿದ ಮಹಿ[illegible] ಈ ಹೊಸಕಾಲದಲ್ಲಿ ಎದುರಿಸುತ್ತಿರುವ ಸಮಸ್ಯೆ[illegible] ಕುರಿತಾಗಿ ಬಂದಿರುವ ಉತ್ತಮ ಚಿತ್ರಗಳು. ಈ[illegible] ಮೂರೂ ಚಿತ್ರಗಳು ಅಂತಿಮವಾಗಿ ಪ್ರತಿಪಾದಿ[illegible] ಮೌಲ್ಯಗಳು, ಯಶಸ್ಸೆಂದು, ಯಾವುದನ್ನು ಮುಂದಿಡಲಾಗುತ್ತದೆ ಎಂಬಿತ್ಯಾದಿ ಅಂಶಗಳ ಕು[illegible] ನಮಗೆ ತಕರಾರಿರಬಹುದು. ಆದರೆ ಈ ಶತಮಾ[illegible] ಮೊದಲ ದಶಕದ ನಂತರ 35 ದಾಟಿದ ಮಧ್ಯಮವರ್ಗದ ಮಹಿಳೆಯರು ಎದುರಿಸುತ್ತಿರ[illegible] ಸಮಸ್ಯೆಗಳೂ ಹೊಸ ರೀತಿಯದ್ದಾಗಿವೆ ಎಂಬು[illegible] ಈ ಚಿತ್ರರಂಗಗಳು ಗುರುತಿಸಿವೆ ಮತ್ತು ಅದನ್[illegible] ಸೃಜನಶೀಲವಾಗಿ ಎದುರುಗೊಳ್ಳುವ ಪ್ರಯತ್ನ ಮಾಡಿವೆ. ಪಿಕೆ ಮತ್ತು ತನು ವೆಡ್ಸ್ ಮನು ರಿ[illegible] ಸಿನಿಮಾಗಳಲ್ಲಿ ಉತ್ತರ ಭಾರತದ ವಿವಿಧ ಭಾಷ[illegible] ಬಳಸಿರುವ ರೀತಿಯೇ ಬಹಳ ಚೇತೋಹಾರಿಯ[illegible] ಮತ್ತು ಹಿಂದಿಯ ಕುರಿತ ಸಾಮಾನ್ಯ ನಂಬಿಕೆಯ[illegible] ಬುಡಮೇಲು ಮಾಡುತ್ತವೆ ಹಾಗೂ ಭೋಜ್‌ಪ[illegible] ಹರ್ಯಾಣ್ವೀಗಳ ಸೊಗಡನ್ನು ನಮಗೆ ಪರಿಚಯಿಸು[illegible] ಅರೇ, ಇದೇ ದೇಶದಲ್ಲೇ ಇಂಥವು ಎಷ್ಟೆಲ್ಲಾ ನಡೆಯುತ್ತಿವೆ...

ಕನ್ನಡದಲ್ಲಿ ಏನೂ ನಡೆಯುತ್ತಿಲ್ಲ ಎಂದರೆ ತಪ್ಪಾಗುತ್ತದೆ. ಲೂಸಿಯಾ, 6-5=2, ಇಂಥ ಕ[illegible] ಹೊಸ ಪ್ರಯೋಗಗಳು ನಡೆದಿವೆ. ಅಭಿಮನ್ಯು, ಇವುಗಳೂ ಮೆಚ್ಚುಗೆಗೆ ಅರ್ಹವಾದ ಪ್ರಯೋಗ[illegible] ಮೈನಾ, ಮೈತ್ರಿ, ಸಿಂಪಲ್ಲಾಗ್ ಒಂದು ಲವ್ [illegible] ಸಹ ತಮ್ಮದೇ ರೀತಿಯಲ್ಲಿ ಭಿನ್ನ ಪ್ರಯತ್ನಗಳು. ಇವನ್ನು ನಿರ್ದೇಶಿಸಿದವರಿಗೆ ವಿಶೇಷ ಪ್ರೋತ್ಸಾಹವೇನೂ ನಿರ್ಮಾಪಕರುಗಳಿಂದ ದಕ್ಕ[illegible] ಯೂಟ್ಯೂಬ್‌ನಲ್ಲಿ ನೀವು ಒಮ್ಮೆ ಹೊಸಬಗೆಯ[illegible] ಕಿರುಚಿತ್ರಗಳನ್ನು ಹುಡುಕಿ ನೋಡಿದರೆ ಆಶ್ಚರ್ಯ[illegible] ಕಾದಿದೆ. ಚಿಕ್ಕಚಿಕ್ಕ ಚಿತ್ರಗಳನ್ನು ಅತ್ಯುತ್ತಮವಾಗಿ ನಿರ್ಮಿಸಿ, ನಿರ್ದೇಶಿಸಿರುವ ಎಷ್ಟೊಂದು ಜನರಿ[illegible] ಆದರೆ, ಅಲ್ಲೂ ಕನ್ನಡದವರು ಕಡಿಮೆ.

ಈ ಬಗ್ಗೆ ಕನ್ನಡ ಚಿತ್ರರಂಗದ ಎಲ್ಲಾ ಶಕ್ತಿಗ[illegible] ಒಟ್ಟಾಗಿ ಕೂತು ಆಲೋಚನೆ ಮಾಡಬಾರದೇಕೆ[illegible] ಸಾಧ್ಯತೆ ಇಲ್ಲವೇ ಇಲ್ಲ, ಸದ್ಯ ಒಂದು ನೆಮ್ಮದಿಯೆಂದರೆ, ಇವರುಗಳ ಸ್ವಂತ ಹಿತಾಸಕ್ತಿ[illegible] ಕೇಂದ್ರಿತ ಹೋರಾಟವನ್ನು 'ಕನ್ನಡದ ಹೋರಾಟ[illegible] ಎಂದು ನಿರ್ಮಾಪಕರು ಹೇಳುತ್ತಿಲ್ಲ, ಅದೇ ದ[illegible] ಟಿವಿ ನೋಡ್ತಾರೆ, ಆದಕ್ಕೇ ನೀವು ಟಿವಿಗೆ ಹೋ[illegible] ಶೋ ನಡೆಸಬೇಡಿ ಎನ್ನುವ ನಿರ್ಮಾಪಕರಿಗೆ ಐ[illegible] ಕ್ರಿಕೆಟ್ ಬಗ್ಗೆಯೂ ಆತಂಕವಂತೆ. ಒಂದು ವೇಳೆ ಕ್ರಿಕೆಟ್ಟನ್ನೂ ಕರ್ನಾಟಕದಲ್ಲಿ ನಿಷೇಧಿಸಬೇಕು ಎಂ[illegible] ಕೂಗು ಹಾಕಿದರೆ ಜನರು ಏನೆಂದಾರು?


ಅದೇ ರೀತಿ ಕನ್ನಡ ಚಿತ್ರರಂಗವನ್ನು ಬೆಳೆಸ[illegible] ವಿಚಾರದಲ್ಲಿ ತಲೆ ಕೆಡಿಸಿಕೊಳ್ಳುವ ಜವಾಬ್ದಾರಿಗ[illegible] ತಮಗೂ ಸಂಬಂಧವೇ ಇಲ್ಲ ಎಂಬಂತೆ ಇರು[illegible] 'ಸ್ಟಾರ್'ಗಳನ್ನೂ ಪ್ರಶ್ನಿಸುವ ಅಗತ್ಯ ಖಂಡಿತಾ [illegible] ರಾಜ್‌ಕುಮಾರ್ ಸ್ವಂತ ಸ್ಟುಡಿಯೋ ಕಟ್ಟಲಿಲ್ಲ, ಹೊಸ ತಂತ್ರಜ್ಞಾನಗಳು ಬಂದಾಗ ಅವು ಕನ್ನಡ ಚಿತ್ರರಂಗಕ್ಕೆ ಲಭ್ಯವಾಗುವಂತೆ ಮಾಡಲು ನಿರಂ[illegible] ಪ್ರಯತ್ನ ಮಾಡಲಿಲ್ಲ, ಅದೂ ಇದೂ.. ಹಲವು ಆರೋಪಗಳನ್ನು ಹೊರಿಸಬಹುದು. ಆದರೆ ಈ ಚಿತ್ರರಂಗಕ್ಕೆ ಬೇಕಾದ ಮಾರುಕಟ್ಟೆಯನ್ನು ನಿರ್ಮಿಸಿಕೊಡುವಲ್ಲಿ, ದೊಡ್ಡ ಸ್ಟಾರ್‌ಗಿರಿ ಲಭ್ಯವ[illegible] ನಂತರವೂ ನಿರ್ಮಾಪಕರು ಬಯಸುವ ಮೌಲ್ಯ[illegible] ಪಾಲಿಸಿದ ವಿಚಾರದಲ್ಲಿ ಅವರ ಪಾತ್ರದ ಬಗ್ಗೆ [illegible] ತಕರಾರು ತೆಗೆಯಲಾರರು. ಈಗಿನ ಎಷ್ಟು ನಟ[illegible] ಅಂತಹ ಮಾತುಗಳನ್ನಾಡಬಹುದು?


ಬದುಕಿನ ಮೌಲ್ಯಗಳು, ನೆಲದ ಬಗ್ಗೆ-ಭಾಷ[illegible] ಬಗ್ಗೆ ತೀವ್ರ ಅಭಿಮಾನ, ಕಲೆಯ ಬಗ್ಗೆ passi[illegible] ಹೊಸ ತಂತ್ರಜ್ಞಾನದ ಪ್ರಯೋಗಗಳು ಇರದೇ ಚಿತ್ರರಂಗದಂತಹ ಒಂದು ಕಲಾ ಉದ್ದಿಮೆ ಬೆಳ[illegible] ಸಾಧ್ಯವಿಲ್ಲ, ಅದಕ್ಕೆ ನಿರ್ಮಾಪಕರು, ಕನ್ನಡದ ಪ್ರಜ್ಞಾವಂತ ಸಮೂಹ, ನಟರು, ಸರ್ಕಾರ ಎಲ್ಲ[illegible] ಕೈಜೋಡಿಸುವ ಅಗತ್ಯವಿದೆ. ಎಲ್ಲಕ್ಕಿಂತ ಮುಖ್ಯ[illegible] ಜನಮುಖಿಯಾಗಿ ಹೊಸಕಾಲದ ತಲ್ಲಣಗಳನ್ನು ಸೃಜನಶೀಲವಾಗಿ ಎದುರುಗೊಳ್ಳದ ಕಲೆ ಬೆಳೆಯುವುದು ಅಸಾಧ್ಯ.

ಮೋದಿಯ ಯೋಗವೂ, ಸೋಂಭೇರಿಗಳ ಶವಾಸನವೂ!

ಜೂನ್ 21ರಂದು ನರೇಂದ್ರ ಮೋದಿ ಒಂದು ವಿಶ್ವದಾಖಲೆ ಬರೆಯಲು ಸಜ್ಜಾಗಿದ್ದಾನೆ. ಅದೇನೆಂದರೆ ಸ್ವತಃ ತಾನೇ ಮುಂದಾಳತ್ವ ವಹಿಸಿ, ದೆಹಲಿಯ ಇಂಡಿಯಾ ಗೇಟ್ ಹತ್ತಿರ ಲಕ್ಷಾಂತರ ಜನರೊಂದಿಗೆ ಯೋಗಾಸನಗಳನ್ನು ಮಾಡುವ ಮೂಲಕ ಒಮ್ಮೆಗೆ ಅತಿಹೆಚ್ಚು ಜನರು ಯೋಗ ಮಾಡಿದ ವಿಶ್ವದಾಖಲೆ. ಅಷ್ಟೇ ಅಲ್ಲ, ಅದೇ ಹೊತ್ತಿಗೆ ರಾಷ್ಟ್ರದಾದ್ಯಂತವೂ ಕೋಟಿಗಳ ಲೆಕ್ಕದಲ್ಲಿ ಜನ ಯೋಗ ಮಾಡಿದರು ಎಂಬ ಇನ್ನೊಂದು ದಾಖಲೆಯೂ ಸೇರಲಿದೆ. ಆ ನಿಟ್ಟಿನಲ್ಲಿ ಈಗಾಗಲೇ ಎಲ್ಲಾ ರಾಜ್ಯಗಳ ಶಾಲೆ ಮತ್ತು ಕಾಲೇಜುಗಳಿಗೆ ನೋಟಿಸ್ ಬಂದಿದೆಯಲ್ಲದೆ ಸದ್ಯದಲ್ಲೇ ಎಲ್ಲಾ ಸರ್ಕಾರಿ ನೌಕರರೂ ಆ ದಿನ (ಜೂನ್ 21 ಭಾನುವಾರವಾದರೂ) ಕಚೇರಿಗಳಿಗೆ ಬಂದು ಯೋಗದಲ್ಲಿ ಭಾಗವಹಿಸಬೇಕೆಂಬ ಫತ್ವಾ ಕೂಡ ಹೊರಬೀಳಲಿದೆ.

ಚುನಾವಣೆ ಮುನ್ನ ದೇಶದ ಜನರಿಗೆ ಕೊಟ್ಟ ಯಾವ ಭರವಸೆಯನ್ನೂ ಇಲ್ಲಿಯತನಕ ಈಡೇರಿಸದಿದ್ದರೂ ಇಂತಹ ನಾಟಕಗಳನ್ನು ಆಡುವುದು ಮೋದಿಯ ಹುಚ್ಚು ಹವ್ಯಾಸವಾಗಿದೆ. ಮೋದಿ ಅಧಿಕಾರದಲ್ಲಿ ಯಾಕೆ ಯೋಗಕ್ಕೆ ಇಷ್ಟು ಒತ್ತು ಕೊಡಲಾಗುತ್ತಿದೆ ಎಂದು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ.





ದೇಹದ ಆರೋಗ್ಯಕ್ಕೆ ಯೋಗ ಒಳ್ಳೆಯ ವ್ಯಾಯಾಮ, ನಿಜ. ಆ ಕಾರಣಕ್ಕೇ ಅದು ಇವತ್ತು ದೇಶ, ಧರ್ಮಗಳ ಹಂಗನ್ನೂ ಮೀರಿ ವಿಶ್ವದಾದ್ಯಂತ ಜನಪ್ರಿಯವಾಗಿದೆ. ಆರಂಭದಲ್ಲಿ ಬಿ.ಕೆ.ಎಸ್.ಐಯ್ಯಂಗಾರ್ ತರಹದವರು ಯೋಗವನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಜನಪ್ರಿಯಗೊಳಿಸಿದರು. ಆಮೇಲೆ ಅದು ವಿವಿಧ ಜನರ ಶ್ರಮದಿಂದಾಗಿ ಎಲ್ಲೆಡೆ ಹಬ್ಬಿತು. ಹಿಂದೊಮ್ಮೆ ಲಡಾಸ್ ಸೈಕಲ್ ತುಳಿಯುತ್ತಿದ್ದ ಯೋಗ ಗುರು ರಾಮ್‌ದೇವ್ ಇವತ್ತು ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಸುತ್ತಿದ್ದಾನಲ್ಲದೆ, ಹಲವು ದ್ವೀಪಗಳ ಒಡೆಯನೂ ಆಗಿದ್ದಾನೆ. ಹಾಗೆಯೇ ಒಂದೆರಡು ದಶಕಗಳಲ್ಲೇ ವಯ್ಯಾರಿ ರವಿಶಂಕರ್, ಒಂದೆರಡು ಆಸನಗಳನ್ನೇ ಬಂಡವಾಳವಾಗಿಸಿಕೊಂಡು ದೊಡ್ಡ ಸಾಮ್ರಾಜ್ಯವನ್ನೇ ನಿರ್ಮಿಸಿದ್ದಾನೆ. ಅಮೆರಿಕದಲ್ಲಂತೂ ಯೋಗ ಶಿಬಿರಗಳನ್ನು ನಡೆಸುವುದೇ ಒಂದು ದೊಡ್ಡ ದಂಧೆಯಾಗಿದೆ. ಒಂದು ಅಂದಾಜಿನ ಪ್ರಕಾರ ಇವತ್ತು ಜಗತ್ತಿನಾದ್ಯಂತ ಯೋಗ ಎಂಬ ಉದ್ಯಮ ನೂರು ಬಿಲಿಯನ್ ಡಾಲರ್‌ಗಳ ವಹಿವಾಟನ್ನು ಹೊಂದಿದೆ.

ಆದರೀಗ ಯೋಗಕ್ಕೆ ಮೋದಿ ಮತ್ತು ಆತನ ಚೆಡ್ಡಿ ಬೆಟಾಲಿಯಂ ಹಿಂದೂ ಧರ್ಮದ ಲೇಪನ ಹಚ್ಚಲು ಸಜ್ಜಾಗಿದ್ದಾರೆ. ಅದಕ್ಕೆ ತಕ್ಕದಾಗಿ ಕೆಲ ತಲೆಕೆಟ್ಟ ಮುಸಲ್ಮಾನ ಸಂಘಟನೆಗಳೂ ಯೋಗ ಹಿಂದೂ ಧರ್ಮದ್ದಾಗಿದ್ದರಿಂದ ಅದನ್ನು ವಿರೋಧಿಸುವುದಾಗಿ ಧಮಕಿ ಹಾಕಿದ್ದಾವೆ. ಹೀಗೆ ಒಂದೆಡೆ ಹುಚ್ಚು ಹಿಂದೂಗಳು ಮತ್ತು ಇನ್ನೊಂದೆಡೆ ತಿಕ್ಕಲು ಮುಸಲ್ಮಾನರು ಯೋಗ ಸುತ್ತ ಅನಗತ್ಯ ವಿವಾದವನ್ನು ಸೃಷ್ಟಿಸಿದ್ದಾರೆ.

ನಮ್ಮ ದೇಶದಲ್ಲಿ ಹಿಂದೂಗಳಲ್ಲದೆ, ಅದೆಷ್ಟೋ ಜನ ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರೂ ಪ್ರತಿದಿನ ಯೋಗಾಸನಗಳನ್ನು ಮಾಡುತ್ತಾರೆ. ಅದಕ್ಕೆ ಕಾರಣ ಅದು ಉತ್ತಮ ವ್ಯಾಯಾಮ ಎಂಬುದೇ ಹೊರತು ಅದರ ಮೂಲ ಹಿಂದೂ ಧರ್ಮದಲ್ಲಿದೆ; ಆ ಕಾರಣಕ್ಕೇ ಅದು ಶ್ರೇಷ್ಠವಾದದ್ದು ಎಂಬುದಲ್ಲ. ಹಿರಿಯ ಪತ್ರಕರ್ತ ಹುಸನ್ ಸುರೂರ್ ಅವರು ತಮ್ಮ ಲೇಖನದಲ್ಲಿ ಹೀಗೆ ಬರೆದಿದ್ದಾರೆ: "ನಾನು ಮಾತನಾಡಿಸಿದ ಮುಸಲ್ಮಾನರಲ್ಲಿ ಯಾರೂ ಯೋಗವನ್ನು ಸ್ವಯಂಪ್ರೇರಿತರಾಗಿ ಅಭ್ಯಾಸ ಮಾಡುವುದನ್ನು ವಿರೋಧಿಸಲಿಲ್ಲ. ಖೈಫ್ ಮೊಹಮ್ಮದ್ ಎಂಬ ನನ್ನ ಗೆಳೆಯ ಹತ್ತು ವರ್ಷಗಳಿಂದ ಯೋಗ ಮಾಡುತ್ತಿದ್ದಾನೆ. ನನ್ನ ಜಿಮ್‌ನ ಮುಖ್ಯ ಆಯಾಮಗಳಲ್ಲಿ ಯೋಗ ಕೂಡ ಒಂದು. ಪ್ರತಿದಿನ ಸೂರ್ಯ ನಮಸ್ಕಾರ ಮಾಡುವ ಬಗ್ಗೆ ನನಗೆ ಯಾವ ಅಭ್ಯಂತರವೂ ಇಲ್ಲ, ದೇವರಿಗೆ ನಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ಮುಖ್ಯವೇ ಹೊರತು ನಮ್ಮ ತಲೆ ಯಾವ ದಿಕ್ಕಿನಲ್ಲಿ ಬಾಗಿದೆ ಎಂಬುದಲ್ಲ' ಎಂದು ಖೈಫ್ ಹೇಳಿದ."

ಹಾಗೆಯೇ ನ್ಯೂ ಏಜ್ ಇಸ್ಲಾಮ್ ಎಂಬ ವೆಬ್‌ಸೈಟಿನ ಸಂಪಾದಕರಾದ ಸುಲ್ತಾನ್ ಶಹೀನ್ ಎಂಬುವವರು "ಸೂರ್ಯನಿಗೆ ಕೃತಜ್ಞತೆ ಸಲ್ಲಿಸುವುದರಲ್ಲಿ ನನಗೆ ಯಾವ ತಪ್ಪೂ ಕಾಣಿಸುವುದಿಲ್ಲ, ನಾವು ಕೃತಘ್ನರೇನಲ್ಲ, ನಾವು ದೇವರು ಮತ್ತು ಆತನ ಸೃಷ್ಟಿಗಳ ಬಗ್ಗೆ ಧನ್ಯತಾಭಾವವನ್ನು ಹೊಂದಿದ್ದೇವೆ. ಇಸ್ಲಾಮ್‌ನಲ್ಲಿ ಕೃತಘ್ನರನ್ನು ಕಾಫಿರ್‌ಗಳೆಂದು ಪರಿಗಣಿಸಲಾಗಿದೆ" ಎಂದಿದ್ದಾರೆ. ಇನ್ನು ಹಾಸ್ಯ ಪ್ರವೃತ್ತಿಯ ಮುಸಲ್ಮಾನರು ಸಾಮಾಜಿಕ ಜಾಲತಾಣಗಳಲ್ಲಿ "ಅಯ್ಯೋ, ನಾವು ಪ್ರತಿ ಬಾರಿ ನಮಾಜು ಮಾಡುವಾಗ ಸೂರ್ಯನಿಗೆ ನಮಸ್ಕಾರ ಹೇಳುತ್ತೇವಲ್ಲ, ಈಗ್ಯಾಕೆ ಅದರ ಬಗ್ಗೆ ಇಷ್ಟೊಂದು ಚರ್ಚೆ" ಎಂದು ತಮಾಷೆ ಮಾಡುತ್ತಿದ್ದಾರೆ!

ಮೋದಿ ಮತ್ತಾತನ ದೇಶದ್ರೋಹಿ ಸಂಘಿಗಳು ಅದೇನೇ ಮಾಡಿದರೂ ಅದರ ಹಿಂದೆ ಒಂದು ಹಿಡನ್ ಕೇಸರಿ ಅಜೆಂಡಾ ಇದ್ದೇ ಇರುತ್ತದೆ. ಈಗ ಜೂನ್ 21 ರಂದು ವಿಶ್ವಸಂಸ್ಥೆ ಘೋಷಿಸಿರುವ 'ಅಂತರರಾಷ್ಟ್ರೀಯ ಯೋಗ ದಿನ'ವನ್ನು ಆಚರಿಸುವುದರಲ್ಲೂ ಅವರ ಕೇಸರಿ ಅಜೆಂಡಾ ಅಡಗಿದೆ. ಹೇಗೆ ಎನ್ನುತ್ತೀರಾ?

ಅಜಾಜ್ ಅಶ್ರಫ್ ಎಂಬ ಪತ್ರಕರ್ತರು ಗುರುತಿಸಿರುವಂತೆ ಅದು ಅಡಗಿರುವುದು ಜೂನ್ 21 ನೇ ತಾರೀಖಿನಲ್ಲೇ!

ಹೇಳಿಕೇಳಿ ಜೂನ್ 21 ಕರ್ಕಾಟಕ ಸಂಕ್ರಾಂತಿಯ ದಿನ. ಅದು ಸೂರ್ಯನ ದಕ್ಷಿಣಾಯನ ಸಂಕ್ರಮಣದ ದಿನ. ಹಿಂದೂ ಪುರಾಣಗಳ ಪ್ರಕಾರ ಕರ್ಕಾಟಕ ಸಂಕ್ರಾಂತಿಯ ದಿನದಂದೇ ಶಿವ ಆದಿಯೋಗಿಯಾದದ್ದು. ತನ್ನನ್ನು ಸದ್ಗುರು ಎಂದು ಕರೆದುಕೊಳ್ಳುವ ಜಗ್ಗಿ ವಾಸುದೇವ್ ಎಂಬಾತ ಬರೆದಿರುವ ಲೇಖನದ ಸಾರಾಂಶ ಹೀಗಿದೆ: "ಕರ್ಕಾಟಕ ಸಂಕ್ರಾಂತಿಯ ದಿನ ಶಿವ ಹುಚ್ಚೆದ್ದು ಕುಣಿಯಲಾರಂಭಿಸಿದ. ಆತ ಅದೆಷ್ಟು ಭಾವೋದ್ರೇಕನಾಗಿ ಕುಣಿಯುತ್ತಿದ್ದನೆಂದರೆ ಆತನ ನೃತ್ಯ ಯಾರಿಗೂ ಅರ್ಥವಾಗಲಿಲ್ಲ. ಶಿವ ಬಹುಕಾಲ ಕುಣಿಯುತ್ತಲೇ ಇದ್ದದ್ದರಿಂದ ಬಹಳಷ್ಟು ಜನ ಹೊರಟುಹೋದರು. ಕೇವಲ ಏಳು ಜನ ಮಾತ್ರ ಆತ ಅರೆಪ್ರಜ್ಞಾವಸ್ಥೆಯಿಂದ ಹೊರಬರುವ ತನಕ ಕಾದಿದ್ದರು. ಶಿವನ ತಾಂಡವ ನಿಂತ ನಂತರ ಅವನಿಗೆ ಗೊತ್ತಿದ್ದ ಗೌಪ್ಯಜ್ಞಾನವನ್ನು ತಮಗೂ ಹೇಳಿಕೊಡುವಂತೆ ಆ ಏಳು ಜನ ಬೇಡಿಕೊಂಡರು. ಆದರೆ ಶಿವ ಅವರ ಅಹವಾಲನ್ನು ತಿರಸ್ಕರಿಸಿದನಲ್ಲದೆ "ನೀವು ಎಂದೆಂದಿಗೂ ಅದನ್ನು ಅರಿಯಲು ಸಾಧ್ಯವಿಲ್ಲ, ಇದು ಮನರಂಜನೆ ಅಲ್ಲ, ಅದನ್ನು ಕಲಿಯಬೇಕೆಂದರೆ ನೀವು ತುಂಬಾ ಶ್ರಮ ಹಾಕಬೇಕು' ಎಂದು ಉತ್ತರಿಸಿದ. ಆ ಏಳು ಜನರು ಆನಂತರ 84 ವರ್ಷಗಳ ಕಾಲ ಅಪಾರ ಶ್ರಮ ಹಾಕಿ ಸಾಧನೆ ಮಾಡಿದರು. ಅದನ್ನು ಗಮನಿಸಿದ ಶಿವ ಕೊನೆಗೂ ಗುರು ಪೂರ್ಣಿಮೆಯ ದಿನ ಅವರಿಗೆ ಗುರುವಾಗಲು ಒಪ್ಪಿಕೊಂಡ."

ಈಗ ಯೋಗ ದೇಶ ಮತ್ತು ಧರ್ಮದ ಹಂಗನ್ನು ಕಳಚಿಕೊಂಡಿದ್ದರೂ ಅದನ್ನು ಮತ್ತೆ ಹಿಂದೂ ಧಾರ್ಮಿಕ ನಂಬಿಕೆಯಲ್ಲಿ ಬಂಧಿಸಿಡುವುದೇ ಜೂನ್ 21ನ್ನು ಅಂತರರಾಷ್ಟ್ರೀಯ ಯೋಗದಿನವಾಗಿ ಆಚರಿಸುವುದರ ಹಿಂದಿರುವ ಹುನ್ನಾರ ಎಂಬುದು ಅಜಾಜ್ ಅಶ್ರಫ್ ಅವರ ತರ್ಕ. ವಿಶ್ವಸಂಸ್ಥೆಯ ಮುಂದೆ ಜೂನ್ 21ಅನ್ನೇ ಇಟ್ಟದ್ದೂ ಯೋಗದ ಮೂಲ ಇರುವುದು ಹಿಂದೂ ಧರ್ಮದಲ್ಲಿ ಎಂದು ಪ್ರಚಾರ ಮಾಡುವ ಆಶಯದಿಂದಲೇ ಎನ್ನುತ್ತಾರೆ ಅಶ್ರಫ್.

ಅಶ್ರಫ್ ಅವರ ತರ್ಕ ಸರಿಯಾದದ್ದು ಅನ್ನಿಸುತ್ತದೆ. ಯಾಕೆಂದರೆ ಇದೇ ಮೋದಿ ಸರ್ಕಾರ ಮಹಾತ್ಮ ಗಾಂಧಿಯವರ ಜನ್ಮದಿನವನ್ನು 'ಸ್ವಚ್ಛ ಭಾರತ'ದ ದಿನವಾಗಿ ಆಚರಿಸುವ ಮೂಲಕ ಗಾಂಧಿಯವರ ಜಾತ್ಯತೀತತೆ, ಧರ್ಮ ಸಹಿಷ್ಣುತೆ, ಅಹಿಂಸಾವಾದ ಇತ್ಯಾದಿಗಳನ್ನೆಲ್ಲ ಮೂಲೆಗೊತ್ತಿ ಅವರನ್ನು ಕೇವಲ 'ಸ್ವಚ್ಛತೆ'ಗೆ ಸೀಮಿತವಾಗಿಸಲು ಯತ್ನಿಸಿತ್ತು. ಹಾಗೆಯೇ ಕ್ರಿಸ್ಮಸ್ ದಿನವನ್ನೇ 'ಗುಡ್ ಗವರ್ನೆನ್ಸ್' ದಿನವಾಗಿ ಆಚರಿಸುವ ಮೂಲಕ ಕ್ರಿಶ್ಚಿಯನ್ನರ ಪ್ರಮುಖ ಹಬ್ಬದ ಪ್ರಾಮುಖ್ಯತೆಯನ್ನೇ ಕುಗ್ಗಿಸಲು ನೋಡಿತ್ತು. ಈಗ ಯೋಗಕ್ಕೂ ಹಿಂದೂ ಧರ್ಮಕ್ಕೂ ನಂಟು ಹಾಕುವ ಮೂಲಕ ಮತ್ತೊಮ್ಮೆ ಅಂತಹದ್ದೇ ಕಿತಾಪತಿಗೆ ಕೈಹಾಕಿದೆ.


ಎಲ್ಲರಿಗೂ ಗೊತ್ತಿರುವಂತೆ ಹಿಂದೂ ಮೂಲಭೂತವಾದಿಗಳು ಮತ್ತು ಮುಸಲ್ಮಾನ ಮೂಲಭೂತವಾದಿಗಳು ಮೇಲುನೋಟಕ್ಕೆ ಪರಸ್ಪರ ವಿರೋಧಿಗಳಾಗಿದ್ದರೂ ಅಂತರಾಳದಲ್ಲಿ ಪರಸ್ಪರರ ಬೆಳವಣಿಗೆಗೆ ಸೈದ್ಧಾಂತಿಕ ನೀರು ಮತ್ತು ಗೊಬ್ಬರ ಹಾಕುವವರೇ. ಈಗಲೂ ಅಂತಹದ್ದೇ ವಿದ್ಯಮಾನ ಜರುಗುತ್ತಿದೆ. ಯೋಗವನ್ನು ಮೋದಿ ಸರ್ಕಾರ ಬೆಂಬಲಿಸಿದಷ್ಟೂ ಕಟ್ಟರ್ ಮುಸಲ್ಮಾನರು ಅದನ್ನು ವಿರೋಧಿಸುತ್ತಾರೆ. ಮೊನ್ನೆ ಯೋಗಿ ಆದಿತ್ಯನಾಥ್ ಎಂಬ ಚೆಡ್ಡಿ ಸಂಸದ "ಸೂರ್ಯ ನಮಸ್ಕಾರವನ್ನು ವಿರೋಧಿಸುವವರನ್ನೆಲ್ಲ ಸಮುದ್ರದಲ್ಲಿ ಮುಳುಗಿಸಿ" ಎಂದು ಕರೆ ಕೊಟ್ಟಿದ್ದಾನೆ. ಅದಕ್ಕೆ ಪ್ರತ್ಯುತ್ತರವಾಗಿ ಆಲ್ ಇಂಡಿಯಾ ಮುಸ್ಲಿಮ್ ಪರ್ಸನಲ್ ಬೋರ್ಡ್ ಎಂಬ ಸಂಘಟನೆ "ಸೂರ್ಯ ನಮಸ್ಕಾರದ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ಮಾಡುತ್ತೇವಲ್ಲದೆ, ಸುಪ್ರೀಂಕೋರ್ಟ್ ಮೊರೆಯೂ ಹೋಗುತ್ತೇವೆ" ಎಂದಿದೆ.

ಪ್ರಜಾಪ್ರಭುತ್ವದಲ್ಲಿ ಯಾರಿಗೇ ಆಗಲಿ ಎಂತಹ ಆಹಾರ ಸೇವಿಸಬೇಕು, ಯಾವ ತರಹದ ವ್ಯಾಯಾಮ ಮಾಡಬೇಕು, ಎಂತೆಂತಹ ಪುಸ್ತಕಗಳನ್ನು ಓದಬೇಕು ಎಂದು ನಿರ್ಧರಿಸುವ ಸ್ವಾತಂತ್ರ್ಯ ಇದ್ದೇ ಇರಬೇಕು. ಆದರೆ ಮೋದಿ ತರಹದ ಕಿರಾತಕರು ಆಹಾರಕ್ಕೂ, ವ್ಯಾಯಾಮಕ್ಕೂ, ಸಿನಿಮಾ-ಪುಸ್ತಕಗಳಿಗೂ ಧಾರ್ಮಿಕ ನಂಟು ಕಲ್ಪಿಸಿ ಕೋಮುದ್ವೇಷ ಹಬ್ಬಿಸುತ್ತಾರೆ.

ಈ ಹಿಂದೆ ಮುರಳಿ ಮನೋಹರ್ ಜೋಷಿ ಕೇಂದ್ರದಲ್ಲಿ ಮಾನವ ಸಂಪನ್ಮೂಲ ಮಂತ್ರಿಯಾಗಿದ್ದಾಗ ಎಲ್ಲಾ ಶಾಲೆಗಳಲ್ಲೂ ಸರಸ್ವತಿ ವಂದನೆಯನ್ನು ಕಡ್ಡಾಯ ಮಾಡಲು ಮುಂದಾಗಿದ್ದ. ಆಗಲೂ ಅಲ್ಪಸಂಖ್ಯಾತರು ಮತ್ತು ಜಾತ್ಯತೀತರು ಅದನ್ನು ತೀವ್ರವಾಗಿ ವಿರೋಧಿಸಿದ್ದರು. ಸ್ವಲ್ಪ ಕಾಲದನಂತರ ಎಲ್ಲರ ಅಬ್ಬರವೂ ನಿಂತುಹೋಗಿತ್ತು.

ಪ್ರಾಯಶಃ ಜೂನ್ 21ರ ನಂತರ ಯೋಗ ಸುತ್ತಲಿನ ವಿವಾದವೂ ಹಾಗೆಯೇ ಅಂತ್ಯಗೊಳ್ಳಬಹುದು. ಆಗ ಯಾರಿಗೆ ಯಾವ ವ್ಯಾಯಾಮ ಇಷ್ಟವೋ ಅದನ್ನು ಮುಂದುವರೆಸುತ್ತಾರೆ. ಶವಾಸನದಲ್ಲಿ ಮಾತ್ರ ಅಪಾರ ನಂಬಿಕೆ ಹೊಂದಿರುವ ನನ್ನಂತಹವರು ತಪ್ಪದೆ ಅದನ್ನು ಮಾತ್ರ ಪಾಲಿಸುತ್ತೇವೆ ಎಂಬುದಂತೂ ಗ್ಯಾರಂಟಿ! ■


ಕಂಡಹಾಗೆ




• ಗೌರಿ ಲಂಕೇಶ್
editorlankesh@gmail.com

ಸುವರ್ಣ ಬೇಟೆ: ಡಿಸಿಪಿ ಫಿಕ್ಸ್, ಕಮೀಷನರ್ ಮಿಸ್

ಹುಬ್ಬಳ್ಳಿಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ದಂಧೆಗೆ ಪೊಲೀಸರೇ ಕಾವಲುಗಾರರು


ನರೇಂದ್ರ

ರಾಜಧಾನಿ ಬೆಂಗಳೂರು ಕೇಂದ್ರಿತವಾಗಿ ನಡೆಯುತ್ತಿದ್ದ ಅಕ್ರಮ ಒಂದಂಕಿ ಲಾಟರಿ ದಂಧೆಗೆ ಪೊಲೀಸರೇ ಬೆಂಗಾವಲಾಗಿ ನಿಂತಿದ್ದ ವಿದ್ಯಮಾನ ಬಯಲಿಗೆ ಬಂದು ಜನಮಾನಸದಿಂದ ಮಾಸುವ ಮೊದಲೇ ಮತ್ತೊಂದು ಅಂತಹುದೇ ಪ್ರಕರಣ ಹುಬ್ಬಳ್ಳಿಯಲ್ಲಿ ಅನಾವರಣಗೊಂಡಿದೆ. ಕನ್ನಡ ಸುದ್ದಿವಾಹಿನಿಯೊಂದು ನಡೆಸಿದ ಸ್ಟಿಂಗ್ ಆಪರೇಷನ್‌ನಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳೇ ಕ್ರಿಕೆಟ್ ಬೆಟ್ಟಿಂಗ್ ದಂಧೆಕೋರರೊಂದಿಗೆ ಶಾಮೀಲಾಗಿರುವುದು ಬಯಲಾಗಿದ್ದು ನಾಗರಿಕರಲ್ಲಿ ಆತಂಕ ಮೂಡಿಸಿದೆ. ಈ ಕುರಿತು ಒಂದು ತಲಸ್ಪರ್ಶಿ ವರದಿ...


ರವೀಂದ್ರ ಪ್ರಸಾದ್

ಹುಬ್ಬಳ್ಳಿಗೆ ಚೋಟಾ ಬಾಂಬೆ ಎಂಬ ಅನ್ವರ್ಥನಾಮ ಮೊದಲಿನಿಂದಲೂ ಅಂಟಿಕೊಂಡು ಬಂದಿದೆ. ಅದಕ್ಕೆ ಕಾರಣ, ಹುಬ್ಬಳ್ಳಿಯಲ್ಲಿ ನಡೆಯುವ ಬಹುತೇಕ ಚಟುವಟಿಕೆಗಳು ಬಾಂಬೆಯಲ್ಲಿ ನಡೆಯುವ ಚಟುವಟಿಕೆಗಳನ್ನೇ ಹೋಲುತ್ತವೆ. ಅದು ಭೂಗತ ಜಗತ್ತಿನ ಚಟುವಟಿಕೆಗಳಿರಲಿ, ವೇಶ್ಯಾವಾಟಿಕೆ, ಮಟ್ಕಾ, ಖೋಟಾನೋಟು ಚಲಾವಣೆ, ಹವಾಲಾ ಹಗರಣಗಳ ಹರಿದಾಟ, ಅಕ್ರಮ ಎಲ್‌ಪಿಜಿ ಗ್ಯಾಸ್ ಫಿಲ್ಲಿಂಗ್ ದಂಧೆ, ಕೇಬಲ್ ದಂಧೆ, ರಿಯಲ್ ಎಸ್ಟೇಟ್ ದಂಧೆ ಅಥವಾ ಅಕ್ರಮ ಲಿಕ್ಕರ್ ತಯಾರಿಕೆ ಮತ್ತು ಮಾರಾಟಗಳಂತಹ ಅಕ್ರಮ ದಂಧೆಗಳೇ ಇರಲಿ. ಅವೆಲ್ಲಾ ಬಾಂಬೆಯಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದರೆ ಅವೇ ದಂಧೆಗಳು ಹುಬ್ಬಳ್ಳಿಯಲ್ಲಿ ಸ್ವಲ್ಪ ಚಿಕ್ಕ ಪ್ರಮಾಣದಲ್ಲಿ ನಡೆಯುತ್ತವೆ. ಹಾಗಾಗಿಯೇ ಹುಬ್ಬಳ್ಳಿ ಚೋಟಾ ಬಾಂಬೆ ಎಂದೇ ಚಿರಪರಿಚಿತ.

ಆದರೆ ಕ್ರಿಕೆಟ್ ಬೆಟ್ಟಿಂಗ್ ವಿಷಯಕ್ಕೆ ಬಂದರೆ ಬಾಂಬೆಗಿಂತ ಹುಬ್ಬಳ್ಳಿಯೇ ಒಂದು ಕೈ ಮೇಲು. ಈ ವಿಷಯದಲ್ಲಿ ಬಾಂಬೆಯನ್ನೇ ಬೇಕಾದರೂ ಚೋಟಾ ಹುಬ್ಬಳ್ಳಿ ಅಂತ ಕರೆದರೂ ಅಡ್ಡಿಯಿಲ್ಲ. ಈ ಕ್ರಿಕೆಟ್ ಬೆಟ್ಟಿಂಗ್ ದಂಧೆ ಅದೆಷ್ಟು ಹುಲುಸಾಗಿ ಬೆಳೆದಿದೆ ಎಂದರೆ ಅದಕ್ಕೆ ಬಲಿಯಾದ ಮಧ್ಯಮ ವರ್ಗದ ಕುಟುಂಬಗಳಿಗೆ ಲೆಕ್ಕವೇ ಇಲ್ಲ. ಭಾರತ ಕ್ರಿಕೆಟ್ ತಂಡ ಇತರ ಯಾವುದೇ ದೇಶದೊಂದಿಗೆ ಆಟವಾಡಿದರೂ ಅಥವಾ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪಂದ್ಯಾವಳಿಯಲ್ಲಿ ಯಾವುದೇ ತಂಡ ಇನ್ನಾವುದೇ ತಂಡದೊಂದಿಗೆ ಆಟವಾಡಿದರೂ ಹುಬ್ಬಳ್ಳಿಯಲ್ಲಿ ಹಣದ ಹೊಳೆಯೇ ಹರಿಯುತ್ತದೆ. ಒಂದೊಂದು ಪಂದ್ಯ ನಡೆದಾಗಲೂ ಹತ್ತಾರು ಕೋಟಿ ರೂಪಾಯಿ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಂದ ನೇರವಾಗಿ ಬುಕ್ಕಿಗಳ ಜೇಬಿಗೆ ಬೀಳುತ್ತದೆ. ವಿಶ್ವಕಪ್ ಕ್ರಿಕೆಟ್ ನಡೆಯುತ್ತಿದ್ದಾಗಲಂತೂ ಹಣದ ಹೊಳೆ ಇನ್ನಷ್ಟು ರಭಸವಾಗಿ ಹರಿದು ಒಂದೊಂದು ಪಂದ್ಯ ನಡೆದಾಗಲೂ ನೂರಾರು ಕೋಟಿ ರೂಪಾಯಿಗಳನ್ನು ದಾಟುತ್ತದೆ.

ನಂಬುತ್ತೀರೋ ಬಿಡುತ್ತೀರೋ ಗೊತ್ತಿಲ್ಲ, ಹುಬ್ಬಳ್ಳಿಯೊಂದರಲ್ಲೇ ಸುಮಾರು 100ಕ್ಕೂ ಹೆಚ್ಚು ಕ್ರಿಕೆಟ್ ಬೆಟ್ಟಿಂಗ್ ಬುಕ್ಕಿಗಳು ರಾಜಾರೋಷವಾಗಿ ಈ ದಂಧೆಯನ್ನು ನಡೆಸುತ್ತಿದ್ದಾರೆ! ಇಲ್ಲಿನ ಬುಕ್ಕಿಗಳು ನೇರವಾಗಿ ಗುಜರಾತ್‌ನ ಸೂರತ್, ಮಹಾರಾಷ್ಟ್ರದ ಮುಂಬೈ ಮತ್ತು ತಮಿಳುನಾಡಿನ ಚೆನ್ನೈಗಳಂತಹ ಮಹಾನಗರಗಳಲ್ಲಿರುವ ಮಹಾಬುಕ್ಕಿಗಳೊಂದಿಗೆ ನೇರ ಸಂಪರ್ಕದಲ್ಲಿರುತ್ತಾರೆ. ಇವರೆಲ್ಲಾ ಮೊದಮೊದಲು ಕ್ರಿಕೆಟ್ ಆಟಗಾರರನ್ನು ನೇರವಾಗಿ ಸಂಪರ್ಕಿಸಿ ಯಾವ ಮ್ಯಾಚ್‌ನಲ್ಲಿ ಯಾವ ತಂಡ ಸೋಲಬೇಕು, ಯಾವ ತಂಡ ಗೆಲ್ಲಬೇಕು, ಯಾರು ಎಷ್ಟು ರನ್ ಮಾಡಬೇಕು, ಯಾರು ಎಷ್ಟು ವಿಕೆಟ್ ತೆಗೆಯಬೇಕು ಎಂಬುದನ್ನು ಆಟದ ಮೊದಲೇ ನಿರ್ಧರಿಸಿ ಅದಕ್ಕನುಗುಣವಾಗಿ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದರು. ಅದು ಮ್ಯಾಚ್ ಫಿಕ್ಸಿಂಗ್. ಈಗ ಕಾಲ ಬದಲಾಗಿ ಮ್ಯಾಚ್ ಫಿಕ್ಸಿಂಗ್ ಜೊತೆ ಸ್ಪಾಟ್ ಫಿಕ್ಸಿಂಗ್ ಕೂಡ ಸೇರಿಕೊಂಡಿದ್ದು ಇಡೀ ಆಟವನ್ನು ಇನ್ನಷ್ಟು ಹದಗೆಡಿಸಿ ದೇಶದಾದ್ಯಂತ ಬೆಟ್ಟಿಂಗ್ ಮಾಫಿಯಾ ಬೆಳೆಯುವುದಕ್ಕೆ ಕಾರಣವಾಗಿದೆ. ಸ್ಪಾಟ್ ಫಿಕ್ಸಿಂಗ್ ಎಂದರೆ ಮುಂದಿನ ಬಾಲ್‌ನಲ್ಲಿ ಅಥವಾ ಮುಂದಿನ ಓವರ್‌ನಲ್ಲಿ ಏನಾಗುತ್ತದೆ ಎಂಬುದರ ಮೇಲೆ ಬೆಟ್ ಕಟ್ಟುವುದು, ಬುಕ್ಕಿಗಳು ತಮಗನುಕೂಲವಾಗುವಂತೆ ಕ್ರೀಡಾಂಗಣದಲ್ಲಿ ಆಟವಾಡುತ್ತಿರುವ ಆಟಗಾರನಿಗೆ ಸಿಗ್ನಲ್ ಕೊಟ್ಟು ತಮಗಿಷ್ಟಬಂದಂತೆ ಆಡಿಸುವುದು!

ಪೊಲೀಸರೇ ಕಾವಲುಗಾರರು!

ಹುಬ್ಬಳ್ಳಿಯಲ್ಲಿ ಈ ದಂಧೆ ನಿನ್ನೆ ಮೊನ್ನೆ ಶುರುವಾಗಿಲ್ಲ. ಅದಕ್ಕೆ ಏನಿಲ್ಲವೆಂದರೂ ಇಪ್ಪತ್ತು ವರ್ಷಗಳ ಚರಿತ್ರೆಯಿದೆ. ಯಾವುದೇ ದೇಶವಿರಲಿ, ಯಾವುದೇ ನಗರವಿರಲಿ, ಕಾನೂನುಬಾಹಿರ ಅಕ್ರಮ ದಂಧೆಗಳು ಪೊಲೀಸರ ಸಕ್ರಿಯ ಬೆಂಬಲವಿಲ್ಲದೇ ಬಹಳ ಕಾಲ ನಡೆಯುವುದಿಲ್ಲ. ಪೊಲೀಸರು, ರಾಜಕಾರಣಿಗಳು ಮತ್ತು ಅಕ್ರಮ ದಂಧೆ ನಡೆಸುವ ಖದೀಮರು - ಈ ಮೂರೂ ವರ್ಗಗಳು ಪರಸ್ಪರ ಕೈ ಮಿಲಾಯಿಸಿದಾಗ ಮಾತ್ರವೇ ಈ ಕಾನೂನುಬಾಹಿರ ಕೃತ್ಯಗಳು ಹತ್ತಾರು ವರ್ಷಗಳ ಕಾಲ ಮುಂದುವರಿಯುವುದಕ್ಕೆ ಸಾಧ್ಯ. ಈ ಸಾರ್ವತ್ರಿಕ ಸತ್ಯ ಹುಬ್ಬಳ್ಳಿ ನಗರಕ್ಕೆ ಇನ್ನೂ ಹೆಚ್ಚು ಅನ್ವಯಿಸುತ್ತದೆ. ಹುಬ್ಬಳ್ಳಿಯ ಅಕ್ರಮ ದಂಧೆಗಳೂ ಇದಕ್ಕೆ ಹೊರತಲ್ಲ.

ಒಂದು ಉದಾಹರಣೆ ನೋಡಿ. ಮಾನವ ಕಳ್ಳಸಾಗಾಣಿಕೆ ಕುರಿತು ತನಿಖೆ ನಡೆಸುತ್ತಿದ್ದ ಬೆಂಗಳೂರಿನ ಸಿಐಡಿ ಪೊಲೀಸರ ತಂಡವೊಂದು ಈ ಅಕ್ರಮದ ದಂಧೆಕೋರರ ಜಾಲದ ಜಾಡು ಹಿಡಿದು ಒಂದೆರಡು ತಿಂಗಳ ಹಿಂದೆ ಹುಬ್ಬಳ್ಳಿಗೆ ಬಂದಿತ್ತು. ಪ್ರಾಯಶಃ ಹುಬ್ಬಳ್ಳಿ ಪೊಲೀಸರು ಇದರಲ್ಲಿ ಶಾಮೀಲಾಗಿರಬಹುದೆಂಬ ಅನುಮಾನ ಆ ತಂಡಕ್ಕೆ ಬಂದಿತ್ತೋ ಏನೋ, ತಾವು ಬರುವ ವಿಷಯವನ್ನು ಮುಂಚಿತವಾಗಿ ಹುಬ್ಬಳ್ಳಿ ಪೊಲೀಸರಿಗೆ ಹೇಳಿಬಿಟ್ಟರೆ ಪೊಲೀಸರೇ ಮಾನವ ಕಳ್ಳಸಾಗಾಣಿಕೆ ಮಾಡುವ ಅಪರಾಧಿಗಳನ್ನು ರಕ್ಷಿಸಿಬಿಡುತ್ತಾರೆಂಬ ಅನುಮಾನವೋ ಏನೋ, ಒಟ್ಟಿನಲ್ಲಿ ತಾವು ಬರುವ ವಿಷಯವನ್ನು ಹುಬ್ಬಳ್ಳಿ ಪೊಲೀಸರಿಗೆ ಹೇಳಿಯೇ ಇರಲಿಲ್ಲ. ಈ ತಂಡ ನಗರದ ಹೃದಯಭಾಗದಲ್ಲಿರುವ ಎಸಿಪಿ ಕಚೇರಿಯ ಪಕ್ಕದಲ್ಲಿ ಇದ್ದ ಲಕ್ಷ್ಮಿ ಲಾಡ್ಜ್ ಮೇಲೆ ದಾಳಿಮಾಡಿದಾಗಲೇ ಹುಬ್ಬಳ್ಳಿ ಪೊಲೀಸರಿಗೆ ವಿಷಯ ಗೊತ್ತಾಗಿದ್ದು! ಮಾನವ ಕಳ್ಳಸಾಗಾಣಿಕೆಗಳಂತಹ ಗಂಭೀರ ಅಪರಾಧಗಳು ಎಸಿಪಿ ಕಚೇರಿಯ ಪಕ್ಕದ ಲಾಡ್ಜ್‌ನಲ್ಲೇ ನಡೆಯುತ್ತವೆ ಎಂದರೆ ಅವುಗಳಿಗೆ ಹುಬ್ಬಳ್ಳಿ ಪೊಲೀಸರ ಬೆಂಬಲ ಎಷ್ಟಿದ್ದಿರಬಹುದು?


ಓಂ ಪ್ರಕಾಶ್

ಹುಬ್ಬಳ್ಳಿ-ಧಾರವಾಡ ಮಹಾನಗರದ ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್ ಮತ್ತು ಡಿಸಿಪಿ ಹನುಮಂತರಾಯರಂತಹ ಉನ್ನತ ಪೊಲೀಸ್ ಅಧಿಕಾರಿಗಳನ್ನೂ ಒಳಗೊಂಡಂತೆ ಅವಳಿ ಮಹಾನಗರಗಳ ಇಡೀ ಪೊಲೀಸ್ ಇಲಾಖೆಯೇ ಕ್ರಿಕೆಟ್ ಬೆಟ್ಟಿಂಗ್ ದಂಧೆಗೆ ಬೆಂಗಾವಲಾಗಿ ನಿಂತಿರುವುದು ಮೊನ್ನೆ ಸುವರ್ಣ ನ್ಯೂಸ್ ಕನ್ನಡ ಸುದ್ದಿವಾಹಿನಿ ನಡೆಸಿದ ಸ್ಟಿಂಗ್ ಆಪರೇಷನ್‌ನಲ್ಲಿ ಇನ್ನಷ್ಟು ಜಗಜ್ಜಾಹೀರವಾಗಿದೆ.

ಖೆಡ್ಡಾಕ್ಕೆ ಬಿದ್ದಿದ್ದು ಹೀಗೆ...

ಹುಬ್ಬಳ್ಳಿಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ಅನ್ನೂ ಒಳಗೊಂಡಂತೆ ಎಲ್ಲಾ ಅಕ್ರಮ ದೊ ನಂಬರ್ ದಂಧೆಗಳೂ ಪೊಲೀಸರ ಕಣ್ಗಾವಲಿನಲ್ಲೇ ನಡೆಯುತ್ತಿದ್ದುದರ ಬಗ್ಗೆ ಆ ಸುದ್ದಿವಾಹಿನಿಯ ಕೆಲ ವರದಿಗಾರರಿಗೆ ಖಚಿತ ಮಾಹಿತಿ ಇತ್ತು. ಅದರಲ್ಲೂ, ಅವಳಿ ನಗರಗಳ ಅತ್ಯುನ್ನತ ಪೊಲೀಸ್ ಅಧಿಕಾರಿಯಾದ ರವೀಂದ್ರ ಪ್ರಸಾದರೇ ಬರೋಬ್ಬರಿ ಪ್ರಸಾದ ನುಂಗಿ ನೇರವಾಗಿ ಕ್ರಿಕೆಟ್ ಬುಕ್ಕಿಗಳ ರಕ್ಷಣೆಗೆ ನಿಂತಿದ್ದು ಗ್ಯಾರಂಟಿಯಾಗಿತ್ತು. ಆದರೆ, ಸಾಕ್ಷ್ಯಾಧಾರಗಳ ಸಮೇತವಾಗಿ ಅವರನ್ನು ನೇರವಾಗಿ ಖೆಡ್ಡಾಕ್ಕೆ ಉರುಳಿಸುವುದಕ್ಕೆ ಈ ವರದಿಗಾರರ ತಂಡ ವಿಶೇಷ ಕಾರ್ಯಾಚರಣೆಯನ್ನು ರೂಪಿಸಿತು. ಆ ಕೆಲಸಕ್ಕಾಗಿಯೇ ಬೆಂಗಳೂರಿನಿಂದ ವಿಶೇಷ ತಂಡವೊಂದನ್ನು ಆ ವಾಹಿನಿಯು ಕಳಿಸಿಕೊಟ್ಟಿತ್ತು.

ಈ ತಂಡ ಮಾಡಿದ ಮೊದಲ ಕೆಲಸ ಎಂದರೆ, ಎರಡು ಹೊಸ ಮೊಬೈಲ್ ಖರೀದಿಸಿ ಅವುಗಳಿಗೆ ಎರಡು ಹೊಸ ಸಿಮ್ ತುರುಕಿ ಅವು ಕ್ರಿಕೆಟ್ ಬೆಟ್ಟಿಂಗ್ ಬುಕ್ಕಿಗಳ ನಂಬರ್ ಎಂಬಂತೆ ಬಿಂಬಿಸಿ ಅಲ್ಲಲ್ಲಿ ಹರಿಬಿಟ್ಟರು. ಎಷ್ಟೇ ಆಗಲೀ, ಆವರು ಹುಬ್ಬಳ್ಳಿ ಪೊಲೀಸರು. ಈ ದಂಧೆಯಲ್ಲಿ ತೊಡಗಿರುವ ಬುಕ್ಕಿಗಳನ್ನು ಇಪ್ಪತ್ತು ವರ್ಷಗಳಿಂದ ಕಾಯು... ಬೆಳೆಸುತ್ತಾ ಬಂದವರು. ಪೊಲೀಸ್ ಅಧಿಕಾರಿಗ... ಬದಲಾದರೂ, ಹಳಬರು ಹೋಗಿ ಹೊಸಬರು ಬಂದರ... ಒಂದು ಇಲಾಖೆಯಾಗಿ ಬೆಟ್ಟಿಂಗ್ ದಂಧೆಯನ್ನು ರಕ್ಷಿಸು... ಬಂದ ಘನಂದಾರಿ ಪರಂಪರೆಯನ್ನು ಚಾಚೂತಪ್ಪ... ಮುಂದುವರಿಸಿಕೊಂಡು ಬಂದವರು. ಇಂತಿಪ್ಪ ಹುಬ್... ಪೊಲೀಸರಿಗೆ ಈ ಎರಡು ಹೊಸ ನಂಬರುಗಳ... ತಲುಪುವುದಕ್ಕೆ ಬಹಳ ದಿನ ಬೇಕಾಗಲಿಲ್ಲ. ... ನಂಬರುಗಳನ್ನು ಹರಿಬಿಟ್ಟ ಕೆಲವೇ ದಿನಗಳಲ್ಲಿ ಅ... ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್ ಮ... ಡಿಸಿಪಿ ಹನುಮಂತರಾಯರ ಮೊಬೈಲ್‌ಗಳಿಗೂ ಹೊಕ್ಕ...

ನಿಜ ಹೇಳಬೇಕೆಂದರೆ, ಹುಬ್ಬಳ್ಳಿ ಬೆಟ್ಟಿಂಗ್ ಮಾಫಿಯಾ... ಮತ್ತೆರಡು ಬುಕ್ಕಿಗಳು ಸೇರ್ಪಡೆಯಾದರು ಎಂದೇ ಪೊಲೀ... ಅಧಿಕಾರಿಗಳು ಖುಷಿಗೊಂಡರು. ಏಕೆಂದರೆ, ಬುಕ್ಕಿಗ... ಹೆಚ್ಚಾದಷ್ಟು ಪೊಲೀಸರಿಗೆ ಮಾಸಿಕವಾಗಿ, ವಾರ್ಷಿಕವಾ... ಹರಿದುಬರುವ ಹಣವೂ ಜಾಸ್ತಿಯಾಗುತ್ತದೆ.

ನಿರೀಕ್ಷೆಯಂತೆ ಕೆಲವೇ ದಿನಗಳಲ್ಲಿ, ಮೇ 24 ಭಾನುವಾರ, ಆ ನಂಬರಿಗೆ ಪೊಲೀಸ್ ಇಲಾಖೆಯಿಂ... ಕರೆ ಬಂದೇ ಬಿಟ್ಟಿತು. ಆ ಕಡೆಯಿಂದ ಕರೆ ಮಾಡಿದವ... ಕಾನ್ಸ್‌ಟೇಬಲ್ ನರೇಂದ್ರ. 'ಈತ ಡಿಸಿ... ಹನುಮಂತರಾಯಪ್ಪನ ಎಡಗೈ. ಅಂದ್ರೆ, ವೇಶ್ಯಾವಾಟಿ... ದಂಧೆಯಿಂದ ಹಿಡಿದು ಕ್ರಿಕೆಟ್ ಬುಕ್ಕಿಗಳ ತನಕ ಎ... ಅಕ್ರಮ ದಂಧೆಗಳನ್ನು ನಡೆಸುವ ಖದೀಮರಿಂದ ಮಂ... ವಸೂಲಿ ಮಾಡಿ ಡಿಸಿಪಿ ಹನುಮಂತರಾಯಪ್ಪನಿ... ತಲುಪಿಸುವ ಮಹಾಕಾರ್ಯ ಮಾಡುವ ಮನುಷ್ಯನೀ... ಖದೀಮರೊಂದಿಗೆ ಸುತ್ತಿ ಬಳಸಿ ಮಾತನಾಡಿ ಟೈಂ ವೇಸ್ಟ್... ಮಾಡದೇ ನೇರವಾಗಿ ವ್ಯವಹಾರಕ್ಕೆ ಬರುವ ನಿಪುಣ...

ಹೈ-ಪವರ್ ಪೇದೆ

ಈತನ ಹೆಸರು ಬಸವರಾಜ್ ದಾಸ್ಕೋನವರ್. 1994ರ ಬ್ಯಾಚ್‌ನ ಕಾನ್ಸ್‌ಟೇಬಲ್. ಬರೋಬ್ಬರಿ ಇಪ್ಪತ್ತು ವರ್ಷದ 'ಸೇವೆ' ಮುಗಿದಿದೆ. ಈತ ವೃತ್ತಿಯಲ್ಲಿ ಪೇದೆ, ಪ್ರವೃತ್ತಿಯಲ್ಲಿ ವಸೂಲಿಗಾರ. ಕ್ರಿಕೆಟ್ ಬುಕ್ಕಿಗಳಿಂದ, ವೇಶ್ಯಾವಾಟಿಕೆ ದಂಧೆಯ ತಲೆಹಿಡುಕರಿಂದ, ಮಟ್ಕಾ ದಂಧೆಕೋರರು, ಖೋಟಾನೋಟು ಖದೀಮರು, ಸೆಕೆಂಡ್ಸ್ ಲಿಕ್ಕರ್ ಮಾರಾಟಗಾರರು - ಹೀಗೆ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಅಕ್ರಮ ದಂಧೆ ಮಾಡುವ ಕುಳಗಳಿಂದ ಹಫ್ತಾ ಮಂತ್ಲಿ ವಸೂಲಿ ಮಾಡಿ ಪೊಲೀಸ್ ಕಮೀಷನರ್‌ಗೆ ಒಪ್ಪಿಸೋದ್ರಲ್ಲಿ, ಕಮೀಷನರ್ ಪರವಾಗಿ ದೊಡ್ಡ ದೊಡ್ಡ ಡೀಲ್‌ಗಳನ್ನು ಕುದುರಿಸುವುದರಲ್ಲಿ ಇವನು ನಿಸ್ಸೀಮ. ನಿಜ ಹೇಳಬೇಕೆಂದರೆ ಒಂದು ಕಾಲದಲ್ಲಿ ವ್ಯಾಪಾರ-ವಹಿವಾಟುಗಳಿಂದ ಸುಪ್ರಸಿದ್ಧವಾಗಿದ್ದ ಹುಬ್ಬಳ್ಳಿಯಂತಹ ಹುಬ್ಬಳ್ಳಿಯನ್ನು ಹಾಳುಮಾಡಿ ಕಳ್ಳಖದೀಮರ ಸ್ವರ್ಗವನ್ನಾಗಿ ಪರಿವರ್ತಿಸಿದ ಕೆಲವು ಪೊಲೀಸ್ ಮಂದಿಯಲ್ಲಿ ಈತನೂ ಒಬ್ಬ. ಇಪ್ಪತ್ತು ವರ್ಷಗಳ ಹಿಂದೆ ಡ್ಯೂಟಿಗೆ ಸೇರಿದಾಗಿನಿಂದ ಈತ ಚಾಚೂತಪ್ಪದೇ ಮಾಡಿಕೊಂಡುಬಂದಿರುವ ಏಕೈಕ ಮಹಾಕಾರ್ಯ ಇದೊಂದೆ. ಈತನಿಗೆ ಒಂದು ಕಾರ್ಯಕ್ಷೇತ್ರ ಅಂತೇನಿಲ್ಲ, ಇಡೀ ಹುಬ್ಬಳ್ಳಿ-ಧಾರವಾಡ ಮಹಾನಗರ ಈತನ ವ್ಯಾಪ್ತಿಗೆ ಬರುತ್ತದೆ. ಯಾವುದೇ ಅಕ್ರಮ ಅಡ್ಡೆಗೆ ಹೋಗಿ, ವೇಶ್ಯಾವಾಟಿಕೆಯ ಹೋಟೇಲ್‌ಗೆ ಹೋಗಿ ಈತನ ಹೆಸರು ಮತ್ತು ಮೊಬೈಲ್ ನಂಬರ್ ಸಿಗುತ್ತೆ. ಅವರೆಲ್ಲರಿಂದ ಮಂತ್ಲಿ ವಸೂಲಿ ಮಾಡೋದೂ ಇವನೇ, ಅವರಿಗೇನಾದರೂ ದಂಧೆ ನಡೆಸೋಕೆ ತೊಂದರೆಯಾದಾಗ ಹೋಗಿ ಸರಿಮಾಡೋದೂ ಇವನೆ.

ಈತ ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್‌ನ ಭಂಟ ಎಂಬುದು ಬಹುತೇಕ ಎಲ್ಲ ಅಧಿಕಾರಿಗಳಿಗೂ ಗೊತ್ತಿದೆ. ಅಸಲಿಗೆ, ಕಮೀಷನರ್ ಸಾಹೇಬ್ರಿಗೆ ತಲುಪಬೇಕಾದ ಕಪ್ಪ-ಕಾಣಿಕೆಗಳನ್ನು ವಸೂಲಿ ಮಾಡೋದೂ ಇವನೇ ಅಂತ ಚೆನ್ನಾಗಿ ಗೊತ್ತಿದೆ. ಹಾಗಾಗಿ, ಸಬ್‌ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್, ಎಸಿಪಿ, ಡಿಸಿಪಿಗಳು ಈತನ ತಂಟೆಗೆ ಹೋಗೋದಿಲ್ಲ. ಅವರ ಏರಿಯಾದಲ್ಲಿ ಗೂಳಿಯಂತೆ ನುಗ್ಗಿ ವಸೂಲಿ ಮಾಡಿದರೂ ಅವರು ತುಟಿಪಿಟಿಕ್ ಎನ್ನದೇ ಸುಮ್ಮನಿರುತ್ತಾರೆ.

ಆರಂಭದಲ್ಲಿ ಹುಬ್ಬಳ್ಳಿ ಉಪನಗರ ಠಾಣೆಯಲ್ಲಿ ಕಾರ್ಯಾರಂಭ ಮಾಡಿದ ದಾಸ್ಕೋನವರ್ ಹಿರಿಯ ಅಧಿಕಾರಿಗಳ ಕೈಕಾಲು ಹಿಡಿದು, ಸಿಟಿ ಸ್ಪೆಷಲ್ ಬ್ರಾಂಚ್‌ಗೆ ಸೇರಿಕೊಂಡ... ಅಲ್ಲಿಯತನಕ ನಗರದ ಸೂಕ್ಷ್ಮ ವಿಚಾರಗಳ ಮಾಹಿತಿ ಸಂಗ್ರಹಿಸಿ ಹಿರಿಯ ಅಧಿಕಾರಿಗಳಿ... ನೀಡುತ್ತಿದ್ದ ಸಿಟಿ ಸ್ಪೆಷಲ್ ಬ್ರಾಂಚ್ ಟೀಮು ಈತ ಸೇರಿಕೊಂಡ ಮೇಲೆ ಆ ಕೆಲ... ಬಿಟ್ಟು ವಸೂಲಿ ಕಡೆ ಹೆಚ್ಚು ಗಮನ ಕೊಡಲಾರಂಭಿಸಿತು. ಈಗದು ಹಿರಿಯ ಅಧಿಕಾರಿಗಳಿ... ಹಫ್ತಾ ವಸೂಲಿ ಮಾಡಿಕೊಡುವ ದೊಡ್ಡ ಕ್ರಿಮಿನಲ್ ಗ್ಯಾಂಗ್ ಆಗಿ ಪರಿವರ್ತನೆಗೊಂಡಿದ...

ಅವಳಿ ನಗರದ ಕ್ರಿಕೆಟ್ ಬೆಟ್ಟಿಂಗ್ ದಂಧೆಯ ಕಿಂಗ್‌ಪಿನ್‌ಗಳಾದ ವೀರೂ ಕಠಾರ... ಅರ್ಜುನ್ ಶಿರೋಳ್ಕರ್, ಗಜಾನನ ಕಠಾರೆ ಸೇರಿದಂತೆ ಮುಂಬೈನಿಂದ ಆಗಾ... ಬಂದುಹೋಗುವ ಬೆಟ್ಟಿಂಗ್ ಕುಳಗಳನ್ನು ಹಿರಿಯ ಅಧಿಕಾರಿಗಳಿಗೆ ಪರಿಚಯ... ಮಾಡಿಸೋದು ಈತನೇ. ಈತ ಬಳಸೋ ಮೊಬೈಲ್ ಸಂಖ್ಯೆಗಳನ್ನು ಒಮ್ಮೆ... ತನಿಖೆಗೊಳಪಡಿಸಿದರೆ ಸಾಕು, ಈತನಿಗಿರುವ ವಿಸ್ತೃತ ಸಂಪರ್ಕಜಾಲದ ಆಳ-ಅಗಲಗಳ... ಅರಿವಿಗೆ ಬರುತ್ತವೆ.

ಈತ ಹಿರಿಯ ಅಧಿಕಾರಿಗಳಿಗೆ ವಸೂಲಿ ಮಾಡಿಕೊಡುವ ಹಣದಲ್ಲಿ ತಾನೂ ಸ... ಪ್ರಮಾಣದ ಒಂದು ಪಾಲನ್ನು ಇಟ್ಟುಕೊಳ್ಳುತ್ತಾನೆ. ಈಗ ಅದೇ ಕೋಟ್ಯಂತರ ರೂಪಾಯಿ ಆಗಿದ್ದು ಅದನ್ನೆಲ್ಲಾ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿಸಿದ್ದಾನೆಂದು ಹುಬ್ಬಳ್ಳಿಯ ಪೊಲೀಸರೇ ಮಾತಾಡಿಕೊಳ್ಳುತ್ತಿರುವುದು ಸಂಪೂರ್ಣ ಸುಳ್ಳಾಗಿರಲಿಕ್ಕಿಲ್ಲ.

ಇತರ ಪೇದೆಗಳಿಗಿಲ್ಲದ ಒಂದು ವಿಶೇಷತೆ ಇವನಲ್ಲಿದೆ. ಅದೆಂದರೆ ಈ... ಪೇದೆಯಾಗಿದ್ದರೂ ತನ್ನ ಮೇಲಿನ ಅಧಿಕಾರಿಗಳನ್ನೂ ವರ್ಗಾವಣೆ ಮಾಡಿಸುವ ತಾಕತ್ತು ಇವನಿಗಿದೆ! ಹಾಗಂತ ಎಲ್ಲಾ ಅಧಿಕಾರಿಗಳಿಗೂ ಬೆದರಿಕೆಯೊಡ್ಡುವ ಆಸಾಮಿಯಲ್ಲ... ಬೆಟ್ಟಿಂಗ್, ವೇಶ್ಯಾವಾಟಿಕೆ, ಗ್ಯಾಸ್ ಫಿಲ್ಲಿಂಗ್, ಖೋಟಾ ನೋಟು - ಹೀಗೆ ವಸೂಲಿ ಹುಟ್ಟುವ ಅಕ್ರಮ ದಂಧೆಗಳಿಗೆ ಪ್ರತಿರೋಧ ಒಡ್ಡುವ ಪ್ರಾಮಾಣಿಕ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಎತ್ತಂಗಡಿ ಮಾಡಿಸಿಬಿಡುತ್ತಾನೆ!

ಅಂದಹಾಗೆ, ಈ ಸ್ಟಿಂಗ್ ಆಪರೇಷನ್‌ನಲ್ಲಿ ನೇರವಾಗಿ ಈತ ಸಿಕ್ಕಿಬಿದ್ದಿದ್ದರೂ ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್ ಅವನನ್ನು ಇದುವರೆಗೆ ಸಸ್ಪೆಂಡ್ ಮಾಡಿಲ್ಲ... ತನ್ನ ಬಲಗೈ ಭಂಟ ಅನ್ನುವ ಕಾರಣಕ್ಕೋ? ಆತ ಮನೆಗೆ ಹೋದರೆ ತನಗೆ ಹರಿದುಬ... ಆದಾಯ ಬರುವುದು ತಪ್ಪುತ್ತೆ ಅನ್ನುವ ಕಾರಣಕ್ಕೋ ಗೊತ್ತಿಲ್ಲ.

...ನಮ್ಮೂ ಹಾಗೇ ಆಯ್ತು.

"ಹುಬ್ಬಳ್ಳಿಗೆ ಬಂದಿದ್ದೀರಂತೆ, ನಮಗೆ ಗೊತ್ತಿಲ್ಲದಂಗೇ ...ಂಧೆ ಶುರುಮಾಡಿಕೊಂಡಿದ್ದೀರಿ. ಸಿಕ್ಕಿಬಿದ್ರೆ ಭಾಳ ಕಷ್ಟ ...ಗುತ್ತೆ. ನಿಮ್ಮ ಜೊತೆ ಮಾತಾಡಿ ಸರಿಮಾಡ್ಕೊಂಡು ...ಾ. ಒಪ್ಪದಿದ್ದರೆ ಕೇಸು ಜಡಿದು ಒಳಗೆ ಹಾಕೋಣ ...ಂತ ಡಿಸಿಪಿ ಸಾಹೇಬ್ರು ಹೇಳಿದ್ದಾರೆ," ಅಂತ ನೇರವಾಗಿ ...ಷಯಕ್ಕೆ ಬಂದ. ಇತ್ತ ಬುಕ್ಕಿಗಳ ಮಾರುವೇಷದಲ್ಲಿದ್ದ ...ರದಿಗಾರರು "ಭೇಟಿಯಾಗಿ ಮಾತಾಡಿ ಸರಿಮಾಡಿ ...ೊಳ್ಳೋಣ, ಕೇಸುಗೀಸು ಬ್ಯಾಡ," ಅಂತ ನರೇಂದ್ರನ ...ೂಗಿಗೆ ತುಪ್ಪ ಹಚ್ಚಿದ್ದಾರೆ. ತುಪ್ಪ ನೆಕ್ಕುತ್ತಾ ಖುಷಿಯಾಗಿಬಿಟ್ಟ ...ರೇಂದ್ರ. ವಸೂಲಿ ಮಾಡೋಕೆ ಹೊಸ ಗಿರಾಕಿಗಳು ...ಕ್ಕರು ಅಂತ ಪುಳಕಿತನಾಗಿ "ನಾಳೆ ಫೋನ್ ಮಾಡಿ. ...ಲ್ಲಿ ಎಷ್ಟೊತ್ತಿಗೆ ಸಿಗಬೇಕು ಅಂತ ಹೇಳ್ತೀನಿ" ಅಂದ.

ಮಾರನೆಯ ದಿನ ಬುಕ್ಕಿಗಳ ವೇಷದಲ್ಲಿದ್ದ ವರದಿಗಾರರು ...ನ ಮಾಡಿದಾಗ ಇವರನ್ನು ಅಲ್ಲಿ ಇಲ್ಲಿ ಸುತ್ತಿಸಿ ಕೊನೆಗೆ ಹುಬ್ಬಳ್ಳಿ-ಧಾರವಾಡ ನಡುವೆ ಇರುವ ಹುಬ್ಬಳ್ಳಿ ರೆಸಿಡೆನ್ಸಿ ...ಂಬ ಖಾಸಗಿ ಹೊಟೇಲ್‌ಗೆ ಬರುವಂತೆ ಹೇಳಿ ...ರೆಸಿಕೊಂಡ. ಅಲ್ಲಿಯೂ ನೇರವಾಗಿ ಮಾತಿಗಿಳಿದ.

"ನೀವು ಬಹಳ ದಿನಗಳಿಂದ ಬೆಟ್ಟಿಂಗ್ ದಂಧೆ ...ಮಾಡ್ತಿರೋದು ನಂಗೂ ಗೊತ್ತಿದೆ, ನಮ್ಮ ಡಿಸಿಪಿ ...ಸಾಹೇಬ್ರಿಗೂ ಗೊತ್ತಿದೆ. ನಿಮ್ಮನ್ನು ಪತ್ತೆ ಹಚ್ಚಿ ಕೇಸ್ ...ಜಡೀರಿ ಅಂತ ಸಾಹೇಬ್ರು ಬಹಳ ಸಲ ಹೇಳಿದ್ದಾರೆ. ...ನೋಡಿ, ಬಹಳ ಬೇಗ ನಮ್ಮ ಜೊತೆ ವಿಚಾರ ...ಬಗೆಹರಿಸಿಕೊಂಡ್ರೆ ನಿಮಗೆ ಒಳ್ಳೇದು. ಇಲ್ಲದಿದ್ದರೆ ...ಎಫ್‌ಐಆರ್ ಹಾಕಿ ಕಂಬಿ ಹಿಂದೆ ದಬ್ತೀವಿ," ಅಂತ ಸ್ವಲ್ಪ ...ಗಂಭೀರವಾಗಿಯೇ ಮಾತಾಡಿದ. ಅದಕ್ಕೆ ಪ್ರತಿಯಾಗಿ ಟೀವಿ ...ತಂಡ ಕೂಡ ಎಷ್ಟು ಕೊಡಬೇಕು ಅಂತ ಪ್ರಶ್ನಿಸಿದಾಗ, "ಐದು ಲಕ್ಷ ಕೊಡಿ. ಡಿಸಿಪಿ ಸಾಹೇಬ್ರ ಜೊತೆ ಮಾತಾಡಿ ...ಬಗೆಹರಿಸ್ತೀನಿ" ಅಂದ ನರೇಂದ್ರ. ಅದಕ್ಕೆ ಟೀವಿ ತಂಡ ...ಸ್ವಲ್ಪ ಜಾಸ್ತಿಯಾಯ್ತಲ್ಲ ಸಾರ್" ಎಂದಿದ್ದಕ್ಕೆ ಅವನು "ನಿಮ್ಮ ...ಮೇಲೆ ಕೇಸ್ ಜಡಿದು 10 ಲಕ್ಷ ಕೂಡ ವಸೂಲಿ ...ಮಾಡಬಲ್ಲೆವು" ಅಂತ ಆವಾಜ್ ಹಾಕಿದ್ದಾನೆ. ಅಲ್ಲಿಗೆ ...ಸ್ವಲ್ಪ ಹೆದರಿದಂತೆ ನಾಟಕವಾಡಿದ ಟೀವಿ ತಂಡ "ಸ್ವಲ್ಪ ...ಟೈಂ ಕೊಡಿ" ಅಂತ ಕೇಳಿ ಹೊರಬಂದಿದೆ.

ಮತ್ತೆ ಮತ್ತೆ ಕರೆ ಮಾಡಿದ ನರೇಂದ್ರ ಮೇ 27ನೇ ...ತಾರೀಖಿನ ಬೆಳಗಿನ ಜಾವ 1.30ಕ್ಕೆ ಹುಬ್ಬಳ್ಳಿಯ ಹಳೇ ...ಬಸ್‌ಸ್ಟ್ಯಾಂಡ್ ಎದುರಿನ ಹೊಟೇಲ್ ಹತ್ತಿರ ಬರುವಂತೆ ...ಹೇಳಿದ್ದಾನೆ. ಈ ಟೀಮ್ ಅಲ್ಲಿಗೆ ಹೋದಾಗ ಮೃತ್ಯುಂಜಯ ...ಕಾಲವಾಡ ಎಂಬ ಇನ್ನೊಬ್ಬ ಕಾನ್‌ಸ್ಟೇಬಲ್ ನರೇಂದ್ರನ ...ಜೊತೆಗಿದ್ದ. "ಬೇಗ ರೊಕ್ಕ ರೆಡಿ ಮಾಡಿ ತರ್ರಿ. ಇಲ್ಲಾಂದ್ರೆ ...ಭಾಳ ತೊಂದ್ರೆ ಆಗ್ತದೆ," ಅಂತ ಮತ್ತೊಮ್ಮೆ ಹೆದರಿಸಿದ್ದಾರೆ. ...ಹೆದರಿದಂತೆ ತೋರ್ಪಡಿಸಿದ ಬುಕ್ಕಿಗಳಂತೆ ನಟಿಸುತ್ತಿದ್ದ ...ತಂಡ ಒಂದು ದಿನದೊಳಗೆ ರೊಕ್ಕ ತರ್ತೀವಿ ಅಂತ ...ಹೇಳಿಬಂದಿದೆ.

ಕೊಟ್ಟ ಮಾತಿನಂತೆ ಟೀವಿ ತಂಡ ಮರುದಿನ ಒಂದು ...ಲಕ್ಷ ರೂಪಾಯಿ ರೆಡಿಮಾಡಿಕೊಂಡು ನರೇಂದ್ರನಿಗೆ ಕಾಲ್ ...ಮಾಡಿದೆ. ರೊಕ್ಕ ರೆಡಿಯಾಗಿದೆ ಅಂದಿದ್ದೆ ತಡ ನರೇಂದ್ರ ...ಹುಬ್ಬಳ್ಳಿಯ ವಿದ್ಯಾನಗರ ಮುಖ್ಯರಸ್ತೆಯ ಗುರುದತ್ ಭವನ್ ...ಎಂಬ ಹೊಟೆಲ್ ಹತ್ತಿರ ಬರುವುದಕ್ಕೆ ಹೇಳಿದ್ದಾನೆ. ತಂಡ ...ಅಲ್ಲಿಗೆ ಹೋದಾಗ ನರೇಂದ್ರ ಅಲ್ಲಿಗೆ ಬರಲೇ ಇಲ್ಲ. ...ಆದರೆ, ಅವನ ಕಾಲ್ ಬಂತು. "ಒಂದು ಬೊಲೆರೋ ...ಗಾಡಿ ಬರುತ್ತೆ, ಅದ್ರಲ್ಲೇ ಬನ್ನಿ," ಅಂತ ಹೇಳಿದ್ದಾನೆ. ...ಕಾಲ್ ಕಟ್ ಮಾಡುತ್ತಿದ್ದಂತೆಯೇ ಬೊಲೆರೋ ಗಾಡಿ ...ಬುಕ್ಕಿವೇಷದ ವರದಿಗಾರರ ಮುಂದೆ ಪ್ರತ್ಯಕ್ಷವಾಗಿತ್ತು, ಅದರಲ್ಲಿ ...ಬುಕ್ಕಿವೇಷಿಗಳು ಕುಂತಿದ್ದೇ ತಡ ಗಾಡಿ ಹೊರಟು ನೇರವಾಗಿ ...ವಿದ್ಯಾನಗರದ ಚೇತನ್ ಕಾಲೇಜಿನ ಮುಂಭಾಗದ ಕೆರೆಯ ...ಬಳಿ ಬಂದು ನಿಂತಿತು. ಸ್ವಲ್ಪ ಹೊತ್ತಿನಲ್ಲೇ ಅಲ್ಲಿಗೆ ನರೇಂದ್ರ, ...ಕಾಲವಾಡ ಕೂಡ ಬಂದರು.

ರೊಕ್ಕ ಕಿತ್ತುಕೊಂಡು ಪರಾರಿಯಾಗುವುದಕ್ಕೆ ...ನರೇಂದ್ರ-ಕಾಲವಾಡ ಪ್ರಯತ್ನಿಸುತ್ತಿದ್ದರೆ ಕನಿಷ್ಠ ಡಿಸಿಪಿ ...ಹನುಮಂತರಾಯನನ್ನಾದರೂ ಖೆಡ್ಡಾಕ್ಕೆ ಕೆಡವಬೇಕೆಂದು ...ಬುಕ್ಕಿವೇಷದ ವರದಿಗಾರರು ಹವಣಿಸುತ್ತಿದ್ದರು. ಅದಕ್ಕೇನೆ ...ದುಡ್ಡು ಕೊಡಿ, ನಾವು ಡಿಸಿಪಿ ಸಾಹೇಬ್ರಿಗೆ ಕೊಡುತ್ತೇವೆ," ...ಅಂತ ನರೇಂದ್ರ ಹೇಳಿದಾಗ ಬುಕ್ಕಿವೇಷಿ ವರದಿಗಾರರು ...ಷ್ಟೇ ಡಿಸಿಪಿಯವರನ್ನು ಖುದ್ದಾಗಿ ಭೇಟಿ ಮಾಡಿಸುವಂತೆ ...ಪಟ್ಟು ಹಿಡಿದರು. ಮತ್ತೆ ನರೇಂದ್ರನಿಂದ ಡಿಸಿಪಿ ...ಹನುಮಂತರಾಯನಿಗೆ ತಕ್ಷಣ ಫೋನ್. ರೊಕ್ಕ ಕೈಗೆ ...ಬಂದಿದೆ ಅಂತ ಗೊತ್ತಾಗಿದ್ದೆ ತಡ ಹನುಮಂತರಾಯ ಕೂಡ ...ಅಲ್ಲಿಗೆ ಸರ್ಕಾರ ನೀಡಿದ ಇನ್ನೋವಾ ಕಾರಿನಲ್ಲೇ ಕೆರೆಯ ...ಹತ್ತಿರ ಬಂದುಬಿಟ್ಟ.


ಅವನೂ ಅಷ್ಟೇ. ಖಾಲಿ ಕಟಬಿಟ ಮಾತಿಲ್ಲ, ಟೈಂ ...ವೇಸ್ಟ್ ಮಾಡೋದಿಲ್ಲ, ಅದು ಅವನ ಛೇಂಬರ್ ಇರಲಿ ...ರಣ ಸುಡುಸುಡು ಮಧ್ಯಾಹ್ನದ ಸುಡುಬಿಸಿಲಿನಲ್ಲಿ ಕಾದ ...ವ ಕೋಣೆ ಇರಲಿ, ನೇರವಾಗಿ ಡೀಲ್‌ಗೆ ಇಳಿದು ...ದ್ದಾನೆ. ಅವತ್ತು ಕೂಡ ಬುಕ್ಕಿವೇಷಿ ವರದಿಗಾರರೊಂದಿಗೆ ...ಡೀಲ್ ಕುದುರಿಸುವುದಕ್ಕೆ ಪ್ರಾರಂಭಿಸಿಬಿಟ್ಟ. ...ಈಗ ಸದ್ಯಕ್ಕೆ ಎರಡು ಲಕ್ಷ ಕೊಡಿ. ಮಂತ್ಲಿ, ಮಂತ್ಲಿ

ಹುಬ್ಬಳ್ಳಿ ಪೋಲೀಸರ ವಸೂಲಿ ಗ್ಯಾಂಗುಗಳು


ಹುಬ್ಬಳ್ಳಿ-ಧಾರವಾಡ ಮಹಾನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಒಬ್ಬ ಕಮೀಷನರ್, ಇಬ್ಬರು ಡಿಸಿಪಿಗಳು (ಒಬ್ಬ ಕಾನೂನು ಸುವ್ಯವಸ್ಥೆಯ ಡಿಸಿಪಿ, ಇನ್ನೊಬ್ಬ ಅಪರಾಧ ವಿಭಾಗದ ಡಿಸಿಪಿ), ಮೂವರು ಎಸಿಪಿಗಳು (ಹುಬ್ಬಳ್ಳಿಯಲ್ಲಿ ಇಬ್ಬರು, ಧಾರವಾಡದಲ್ಲಿ ಒಬ್ಬರು) ಹಾಗೂ ಇನ್ನೊಬ್ಬ ಟ್ರಾಫಿಕ್ ಎಸಿಪಿ - ಹೀಗೆ ಒಟ್ಟು ಏಳು ಜನ ಉನ್ನತ ಪೊಲೀಸ್ ಅಧಿಕಾರಿಗಳಿದ್ದಾರೆ. ಅವರಲ್ಲಿ ಪ್ರಾಯಶಃ ಟ್ರಾಫಿಕ್ ಎಸಿಪಿಯೊಬ್ಬರನ್ನು ಬಿಟ್ಟು ಉಳಿದೆಲ್ಲಾ ಅಧಿಕಾರಿಗಳು ತಮ್ಮ ಕೈಕೆಳಗೆ ಮೂರ್ನಾಲ್ಕು ಪೊಲೀಸ್ ಪೇದೆಗಳನ್ನೊಳಗೊಂಡ ಒಂದೊಂದು ಸ್ಕ್ವಾಡ್‌ಗಳನ್ನು ರಚಿಸಿಕೊಂಡಿದ್ದಾರೆ. ಈ ಸ್ಕ್ವಾಡ್‌ಗಳಲ್ಲಿರುವ ಪೇದೆಗಳೆಲ್ಲರೂ ಮಫ್ತಿಯಲ್ಲಿದ್ದು ನಗರದಲ್ಲಿ ನಡೆಯುವ ಎಲ್ಲಾ ರೀತಿಯ ವಿದ್ಯಮಾನಗಳ ಮೇಲೆ ಕಣ್ಣಿಟ್ಟಿರುವುದು, ಕಾನೂನು ಸುವ್ಯವಸ್ಥೆಯ ಪರಿಪಾಲನೆಗೆ, ಅಪರಾಧಗಳ ನಿಯಂತ್ರಣಕ್ಕೆ ನೆರವಾಗುವ ಇಂಟಲಿಜೆನ್ಸ್ ಇನ್‌ಪುಟ್‌ಗಳನ್ನು ತಮ್ಮ ತಮ್ಮ ಅಧಿಕಾರಿಗೆ ತಿಳಿಸುವುದು ಅವರ ಮೂಲ ಕರ್ತವ್ಯ. ಕಾನೂನು ಸುವ್ಯವಸ್ಥೆ ಮತ್ತು ಅಪರಾಧಗಳನ್ನು ನಿಯಂತ್ರಿಸುವುದಕ್ಕೆ ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲೂ, ಮಹಾನಗರಗಳಲ್ಲೂ ಉನ್ನತ ಪೊಲೀಸ್ ಅಧಿಕಾರಿಗಳು ಇಂತಹ ವ್ಯವಸ್ಥೆ ಮಾಡಿಕೊಂಡಿರುತ್ತಾರೆ.

ಆದರೆ, ಹುಬ್ಬಳ್ಳಿ-ಧಾರವಾಡ ಕಮೀಷನರೇಟ್ ವ್ಯಾಪ್ತಿಯ ಈ ಸ್ಕ್ವಾಡ್‌ಗಳು ತಮ್ಮ ಮೂಲ ಕರ್ತವ್ಯದಿಂದ ವಿಮುಖವಾಗಿ ದಶಕಗಳೇ ಉರುಳಿವೆ. ಅದರ ಬದಲಿಗೆ ಈ ಸ್ಕ್ವಾಡ್‌ಗಳು ಕ್ರಿಕೆಟ್ ಬುಕ್ಕಿಗಳಿಂದ, ವೇಶ್ಯಾವಾಟಿಕೆ ದಂಧೆ ನಡೆಸೋ ತಲೆಹಿಡುಕರಿಂದ, ಮಟ್ಕಾ ದಂಧೆಕೋರರಿಂದ, ಖೋಟಾನೋಟು ಖದೀಮರಿಂದ, ಅಕ್ರಮ ಲಿಕ್ಕರ್ ಮಾರಾಟಗಾರರಿಂದ ಹಫ್ತಾ, ಮಂತ್ಲಿ ವಸೂಲಿ ಮಾಡುವ, ತಮ್ಮ ತಮ್ಮ ಅಧಿಕಾರಿಗಳ ಪರವಾಗಿ ಡೀಲ್ ಕುದುರಿಸುವ ಅಪ್ಪಟ ಕ್ರಿಮಿನಲ್ ಗ್ಯಾಂಗುಗಳಾಗಿ ಪರಿವರ್ತನೆಗೊಂಡಿವೆ. ಈ ಸ್ಟಿಂಗ್ ಆಪರೇಷನ್‌ನಲ್ಲಿ ಬಲೆಗೆ ಬಿದ್ದ ಬಸವರಾಜ್ ಡಾಸ್ಕೋನವರ್ ಮತ್ತು ಚಂದ್ರಾನಾಯ್ಕ ಎಂಬ ಕಾನ್‌ಸ್ಟೇಬಲ್‌ಗಳು ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್‌ನ ಸ್ಕ್ವಾಡ್‌ನ ನೇತೃತ್ವ ವಹಿಸಿದ್ದವರು. ಹಾಗೆಯೇ, ನರೇಂದ್ರ ಮತ್ತು ಕಾಲವಾಡ ಪೇದೆಗಳು ಡಿಸಿಪಿ ಹನುಮಂತರಾಯನ ಸ್ಕ್ವಾಡ್‌ನಲ್ಲಿದ್ದವರು.

ಈ ದಳಗಳು ಎಷ್ಟು ಬಲಿಷ್ಠವಾಗಿದ್ದವೆಂದರೆ, ಒಂದು ನಿರ್ದಿಷ್ಟ ಏರಿಯಾದಲ್ಲಿ ನಡೆಯುವ ಅಕ್ರಮ ದಂಧೆಗಳಿಗೆ ಅಡ್ಡಿಪಡಿಸುವ ಸಬ್‌ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್‌ಗಳಿದ್ದರೆ ಕೂಡಲೇ ಅವರನ್ನು ಎತ್ತಂಗಡಿ ಮಾಡಿಸಿ ಆ ಜಾಗಕ್ಕೆ ದಂಧೆಗೆ ಅನುಕೂಲ ಮಾಡಿಕೊಡುವ, ಅಡ್ಡ ಬರದವರನ್ನು ಹಾಕಿಸಿಕೊಳ್ಳುತ್ತಿದ್ದರು. ಅಂದಹಾಗೆ, ಈಗ ಮಾನ ಮರ್ಯಾದೆ ಉಳಿಸಿಕೊಳ್ಳುವುದಕ್ಕೆ ಪರದಾಡುತ್ತಿರುವ ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್ ಈಗ ಎಲ್ಲಾ ಸ್ಕ್ವಾಡ್‌ಗಳನ್ನು ವಿಸರ್ಜಿಸಿದ್ದಾರೆ!



ಪೊಲೀಸ್ ಗ್ಯಾಂಗು ಅಲ್ಲಿಂದ ಕಾಲ್ಕಿತ್ತಿದೆ. ಅದರೊಂದಿಗೆ ರವೀಂದ್ರ ಪ್ರಸಾದ್ ಕೂದಲೆಳೆಯ ಅಂತರದಲ್ಲಿ ಮಿಸ್ ಆಗಿಬಿಟ್ಟ!



ಜೂನ್ ತಿಂಗಳ ಎರಡನೇ ತಾರೀಖು, ಮಂಗಳವಾರ, ಬಸವರಾಜ್ ಡಾಸ್ಕೋನವರ್ ಮತ್ತು ಮಂಜುನಾಥ್ ದಲ್ಮಂಜನ್ ಎಂಬಿಬ್ಬರು ಪೊಲೀಸ್ ಕಾನ್‌ಸ್ಟೇಬಲ್‌ಗಳು ಬುಕ್ಕಿವೇಷಿ ವರದಿಗಾರರಿಗೆ ಕಾಲ್ ಮಾಡಿದರು. ಇವರಿಬ್ಬರೂ ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದನ ಎಡಗೈ ಮತ್ತು ಬಲಗೈ ಭಂಟರು. ಕ್ರಿಕೆಟ್ ಬುಕ್ಕಿಗಳಿಂದ, ವೇಶ್ಯಾವಾಟಿಕೆ ದಂಧೆ ನಡೆಸೋ ತಲೆಹಿಡುಕರಿಂದ, ಮಟ್ಕಾ ದಂಧೆಕೋರರಿಂದ, ಖೋಟಾನೋಟು ಖದೀಮರಿಂದ, ಅಕ್ರಮ ಲಿಕ್ಕರ್ ಮಾರಾಟಕಾರರಿಂದ - ಹೀಗೆ ಹುಬ್ಬಳ್ಳಿಯಲ್ಲಿ ತರಹೇವಾರಿ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುವ ಎಲ್ಲಾ ಕಳ್ಳರಿಂದ ಹಫ್ತಾ, ಮಂತ್ಲಿ, ಲಮ್‌ಸಮ್ ವಸೂಲಿ ಮಾಡಿ ರವೀಂದ್ರ ಪ್ರಸಾದ್‌ಗೆ ಒಪ್ಪಿಸುವ ಡ್ಯೂಟಿ ಇವರದು.

ಅವರು ಹೇಳಿದಂತೆ ಬುಕ್ಕಿವೇಷಿಗಳು ಹುಬ್ಬಳ್ಳಿಯ ಚೆನ್ನಮ್ಮ ಸರ್ಕಲ್ ಹತ್ತಿರ ಬಂದಾಗ ಮಂಜುನಾಥ್ ದಲ್ಮಂಜನ್ ಅಲ್ಲಿ ಪ್ರತ್ಯಕ್ಷನಾದ. ತಮ್ಮನ್ನು ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್‌ಗೆ ಭೇಟಿ ಮಾಡಿಸಿ ಪರಿಚಯಿಸಿ ಅಂತ ಬುಕ್ಕಿವೇಷಿಗಳು ಮಂಜುನಾಥ್ ದಲ್ಮಂಜನ್‌ಗೆ ಕೇಳಿದ್ದಾರೆ. ಅದಕ್ಕವನು, "ನಾನೆಲ್ಲಾ ಸರಿಮಾಡ್ತೀನಿ ಬಿಡಿ" ಅಂತ ಭರವಸೆ ಕೊಟ್ಟು ಜಾಗ ಖಾಲಿ ಮಾಡಿದ್ದಾನೆ.

ಮರುದಿನವೇ, ಅಂದರೆ ಬುಧವಾರ, ಮತ್ತೆ ಕಾಲ್ ಮಾಡಿದ ಮಂಜುನಾಥ್ ದಲ್ಮಂಜನ್ ಮಧ್ಯಾಹ್ನದ ಊಟಕ್ಕೆ ಬುಕ್ಕಿವೇಷಿಗಳನ್ನು ಆಹ್ವಾನಿಸಿದ. ಅವನು ಹೇಳಿದ ಪ್ರಕಾರ ಇವರು ಕಾರವಾರ ರಸ್ತೆಯಲ್ಲಿರುವ ಕೊಂಕಣ ಹೊಟೇಲ್‌ಗೆ ಹೋಗಿದ್ದಾರೆ. ಇವರು ಹೋಗೋದ್ರೊಳಗೆ ಅಲ್ಲಿ ದಲ್ಮಂಜನ್ ಕಾದು ನಿಂತಿದ್ದ. "ಕಮೀಷನರ್ ಪರ ಮಾತಾಡೋಕೆ ಬೇರೊಬ್ಬರು ಬರ್ತಾರೆ ಇರಿ" ಅಂತ ದಲ್ಮಂಜನ್ ಇವರನ್ನು ಹೊಟೆಲ್ ಒಳಗೆ ಸ್ವಲ್ಪ ಕಾಯಿಸಿದ್ದಾನೆ.

ಸ್ವಲ್ಪ ಹೊತ್ತಿನ ನಂತರ ಡಿಸಿಪಿ ಹನುಮಂತರಾಯನಿಗೆ ಮಧ್ಯವರ್ತಿಗಳಾಗಿದ್ದ ನರೇಂದ್ರ ಮತ್ತು ಕಾಲವಾಡ ಕಾನ್‌ಸ್ಟೇಬಲ್‌ಗಳು ಅಲ್ಲಿಗೆ ಅವಸರವಸರವಾಗಿ ನುಗ್ಗಿ ಬುಕ್ಕಿವೇಷಿಗಳ ಹತ್ತಿರ ಇದ್ದ ಕ್ಯಾಮರಾದ ಸ್ಪೈನೇಜರ್ ಮೈಕ್, ಮೊಬೈಲ್, ವಾಚ್, ವ್ಯಾಲೆಟ್, ದುಡ್ಡು ಎಲ್ಲಾ ಕಸಿದುಕೊಂಡು "ನಮ್ಮನ್ನೇ ಟ್ರ್ಯಾಪ್ ಮಾಡೋಕೆ ಪ್ರಯತ್ನ ಮಾಡ್ತಿದ್ದೀರಾ, ಪೊಲೀಸ್ರನ್ನೇ ಟ್ರ್ಯಾಪ್ ಮಾಡುವಷ್ಟು ತಾಕತ್ತಿದೆಯಾ?" ಅಂತ ಗದರಿಸಿ, ಹೊಡೆದು ಗಲಾಟೆ ಎಬ್ಬಿಸಿದ್ದಾರೆ. ಕಾರ್ಯಾಚರಣೆಯ ಯಾವುದೇ ಹಂತದಲ್ಲಿ ಇಂತಹದ್ದೊಂದು ಘಟನೆ ನಡೆಯಬಹುದು ಅಂತ ನಿರೀಕ್ಷಿಸಿ ಹೊರಗೆ ಹೊಂಚು ಹಾಕಿ ಕುಳಿತಿದ್ದ ಟೀವಿ ತಂಡದ ಉಳಿದ ಕೆಲವು ಸದಸ್ಯರು ದೊಡ್ಡ ಕ್ಯಾಮರಾಗಳೊಂದಿಗೆ ಹೊಟೇಲ್‌ಗೆ ನುಗ್ಗಿದ್ದೇ ತಡ ನರೇಂದ್ರ-ಕಾಲವಾಡನ

ಏನು ಕೊಡ್ತೀರಿ? ನೀವು ಬಹಳ ದಿನದಿಂದ ಬೆಟ್ಟಿಂಗ್ ದಂಧೆ ನಡೆಸುತ್ತಿರೋದು ನನ್ನ ಗಮನಕ್ಕೆ ಬಂದಿದೆ. ಕದ್ದು ಮುಚ್ಚಿ ವ್ಯವಹಾರ ಮಾಡೋದು ಸರಿಯಲ್ಲ. ನಮ್ಮ ಕೈಗೆ ಸಿಕ್ಕಿಬಿದ್ರೆ ಭಾಳ ಕಷ್ಟ. ಪೊಲೀಸರ ಜೊತೆ ಡೀಲ್ ಕುದುರಿಸಿಕೊಂಡು ದಂಧೆ ಮಾಡೋದು ಕಲೀರಿ," ಅಂತೆಲ್ಲಾ ವ್ಯವಹಾರಿಕ ಬುದ್ಧಿವಾದಗಳನ್ನೆಲ್ಲಾ ಹೇಳಿಬಿಟ್ಟ. ಅದೆಲ್ಲಾ ಕ್ಯಾಮರಾಗಳಲ್ಲಿ, ವಾಯ್ಸ್ ರೆಕಾರ್ಡರ್‌ಗಳಲ್ಲಿ ರೆಕಾರ್ಡ್ ಆಗ್ತಿದೆ ಅನ್ನೋದು ಪಾಪ ಅವನಿಗೆಲ್ಲಿ ಗೊತ್ತಿತ್ತು?

"ಸಾರ್, ಈಗ ಒಂದು ಲಕ್ಷ ಕೊಡ್ತೀವಿ. ಇನ್ನೊಂದು ಲಕ್ಷಕ್ಕೆ ಸ್ವಲ್ಪ ಟೈಂ ಕೊಡಿ," ಅಂತ ಬುಕ್ಕಿವೇಷಿಗಳು ಕೇಳಿಕೊಂಡಿದ್ದಕ್ಕೆ ಡಿಸಿಪಿ ಮಹಾಶಯರು ಅಂತೂ ಒಪ್ಪಿಕೊಂಡು ಕಳಿಸಿಕೊಟ್ಟರು.

ಅಲ್ಲಿಗೆ ಡಿಸಿಪಿ ಹನುಮಂತರಾಯ ಖೆಡ್ಡಾಕ್ಕೆ ಬಿದ್ದಾಗಿತ್ತು!

ರವೀಂದ್ರ ಪ್ರಸಾದ್ ಜಸ್ಟ್ ಮಿಸ್!

ಒಂದು ಎಸ್‌ಪಿ ಕೇಡರ್ ಅಧಿಕಾರಿಯನ್ನು ಯಶಸ್ವಿಯಾಗಿ ಖೆಡ್ಡಾಕ್ಕೆ ಬೀಳಿಸಿದ ಬುಕ್ಕಿವೇಷಿ ವರದಿಗಾರರು ಹುಬ್ಬಳ್ಳಿ-ಧಾರವಾಡ ಮಹಾನಗರದ ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದರ ಬೇಟೆಗೆ ಹೊರಟರು. ಕಮೀಷನರ್ ಅವರನ್ನು ಭೇಟಿ ಮಾಡಿಸುವುದಕ್ಕೂ ಮಧ್ಯವರ್ತಿಯಾಗಿ ಮುಂದೆ ಬಂದವನು ಇದೇ ನರೇಂದ್ರ! "ರೊಕ್ಕ ಬೇಗ ರಡೀ ಮಾಡಿದ್ರೆ, ಬೇಗ ಭೇಟಿಯಾಗಬಹುದು" ಎಂದು ಆಮಿಷ ಮತ್ತು ಆದೇಶಗಳ ಮಿಶ್ರದ ಶೈಲಿಯಲ್ಲಿ ಬುಕ್ಕಿವೇಷಿಗಳಿಗೆ ನರೇಂದ್ರ ಹೇಳಿದ.

ಡಿಸಿಪಿಯನ್ನು ಬೇಟೆಯಾಡಿದ ಮೂರೇ ದಿನಕ್ಕೆ ಅಂದರೆ

ಉತ್ತಮ ಸಮಾಜಕ್ಕಾಗಿ...

ತಾನು ಬಲೆಗೆ ಬಿದ್ದದ್ದು ಸ್ಪಷ್ಟವಾಗಿದ್ದೇ ತಡ ಡಿಸಿಪಿ ಹನುಮಂತರಾಯನ ಚಿಡ್ಡಿ ತಣ್ಣಗಾಗಿಹೋಗಿದೆ. ಅವತ್ತು ಬುಕ್ಕಿವೇಷದ ವರದಿಗಾರರಿಂದ ಕಸಿದುಕೊಂಡಿದ್ದ ಸ್ಟಿಂಗ್ ಆಪರೇಷನ್‌ಗೆ ಬಳಸಲಾಗಿದ್ದ ಹಿಡನ್ ಕ್ಯಾಮರಾ, ವಾಯ್ಸ್ ರೆಕಾರ್ಡಿಂಗ್ ಸಲಕರಣೆಗಳನ್ನೆಲ್ಲಾ ಗುಡ್ಡೆ ಹಾಕಿ 'ಉತ್ತಮ ಸಮಾಜಕ್ಕಾಗಿ' ಕಾರ್ಯನಿರ್ವಹಿಸುತ್ತಿರುವ ನ್ಯೂಸ್ ಚಾನಲ್‌ನ ವರದಿಗಾರರನ್ನು ಕರೆಸಿ ಈ ಸಲಕರಣೆಗಳನ್ನೆಲ್ಲಾ ಏತಕ್ಕೆ ಬಳಸುತ್ತಾರೆ ಅಂತೆಲ್ಲಾ ಕೇಳಿದ್ದಾನೆ. ಆ ವರದಿಗಾರನೂ ಪ್ರಾಮಾಣಿಕವಾಗಿ ಇದ್ದುದನ್ನು ಇದ್ದಂತೆ ಹೇಳಿದ್ದಾನೆ. "ಇವೆಲ್ಲಾ ಹಿಡನ್ ಕ್ಯಾಮರಾ, ವಾಯ್ಸ್ ರೆಕಾರ್ಡಿಂಗ್ ಸಲಕರಣೆಗಳು. ಒಂದು ದಿನದ ಕಾರ್ಯಾಚರಣೆ ಮುಗಿದ ತಕ್ಷಣ ಅದರಲ್ಲಿರುವ ಎಲ್ಲಾ ವಿಸುವಲ್ಸ್, ಆಡಿಯೋ ರೆಕಾರ್ಡಿಂಗ್ ಫೈಲ್‌ಗಳನ್ನು ಕಂಪ್ಯೂಟರಿಗೆ ವರ್ಗಾಯಿಸಿಬಿಡುತ್ತಾರೆ. ಹೀಗಾಗಿ, ಇವುಗಳ ಮೆಮೊರಿ ಕಾರ್ಡಿನಲ್ಲಿ ಕೊಂಕಣ ಹೊಟೇಲ್‌ನಲ್ಲಿ ಕಟ್ಟಕಡೆಗೆ ನಡೆದ ಘಟನಾವಳಿಗಳಷ್ಟೇ ಇವೆ. ಈ ಹಿಂದೆ ನೀವು ಅವರೊಂದಿಗೆ ಮಾತಾಡಿದ್ದರೆ, ಭೇಟಿಯಾಗಿದ್ದರೆ ಅವೆಲ್ಲಾ ಅವರ ಕಂಪ್ಯೂಟರಿನಲ್ಲಿ ಸೇವ್ ಆಗಿರುತ್ತವೆ" ಎಂದು ಹೇಳಿದ ಆ ವರದಿಗಾರ ಡಿಸಿಪಿಗೆ ಇನ್ನಷ್ಟು ಭಯ ಮೂಡಿಸಿದ್ದಾನೆ.

ಸ್ಟಿಂಗ್ ಆಪರೇಷನ್‌ನಲ್ಲಿ ಆದ ಎಡವಟ್ಟು!

ವಾಸ್ತವದಲ್ಲಿ ಕಾರವಾರ ರಸ್ತೆಯ ಕೊಂಕಣ ಹೊಟೇಲ್‌ಗೆ ಬುಕ್ಕಿವೇಷದ ಸುವರ್ಣ ವರದಿಗಾರರನ್ನು ಕರೆಸಿಕೊಳ್ಳುವ ಮೊದಲೇ ಪೊಲೀಸರಿಗೆ ಸ್ವಲ್ಪ ಅನುಮಾನ ಬಂದಿತ್ತು. ಅದಕ್ಕೆ ಪ್ರಧಾನ ಕಾರಣ, ಐಪಿಎಲ್ ಪಂದ್ಯಾವಳಿಗಳೂ ಮುಗಿದಿದ್ದವು, ಭಾರತ ತಂಡದ ಯಾವ ಕ್ರಿಕೆಟ್ ಪಂದ್ಯಗಳೂ ನಡೆಯುತ್ತಿರಲಿಲ್ಲ. ಇಂತಹ ಹೊತ್ತಿನಲ್ಲಿ ಇವರು ಸಕ್ರಿಯರಾಗಿದ್ದಾರಲ್ಲ ಎಂಬ ಅನುಮಾನದ ಹೊಗೆ ಅವರಿಗೆ ಆಗಲೇ ಮೂಡಿತ್ತು. ಅಲ್ಲದೇ, ಕಮೀಷನರ್ ಅವರನ್ನೇ ನೇರವಾಗಿ ಭೇಟಿ ಮಾಡಲು ಬಯಸುತ್ತಿದ್ದಾರೆಂದರೆ ಇವರು ಭಾರಿ ದೊಡ್ಡ ಬುಕ್ಕಿಗಳೇ ಇರಬೇಕು ಎಂದು ಅಂದಾಜಿಸಿದ್ದಾರೆ. ಆದರೆ, ಆ ದೊಡ್ಡ ಬುಕ್ಕಿಗಳಂತೆ ಇವರು ವಾಸ್ತವದಲ್ಲಿ ಕಾಣುತ್ತಿರಲಿಲ್ಲ, ಅದು ಇನ್ನಷ್ಟು ಅನುಮಾನ ಮೂಡಲು ಕಾರಣವಾಗಿದೆ. ಈ ಅನುಮಾನ ನಿವಾರಣೆಗಾಗಿಯೇ ಪೊಲೀಸರು ಈಗಾಗಲೇ ಹುಬ್ಬಳ್ಳಿಯಲ್ಲಿ ದಶಕಗಳಿಂದ ಬೆಟ್ಟಿಂಗ್ ದಂಧೆ ನಡೆಸುತ್ತಿರುವ ಒಂದಿಬ್ಬರು ಬುಕ್ಕಿಗಳನ್ನೂ ಅವತ್ತು ಅದೇ ಹೊಟೇಲ್‌ಗೆ ಕರೆಸಿಕೊಂಡಿದ್ದರು. ಬುಕ್ಕಿವೇಷದಲ್ಲಿದ್ದ ವರದಿಗಾರರನ್ನು ನೋಡಿದ ಆ ಒರಿಜಿನಲ್ ಬುಕ್ಕಿಗಳು "ಇವರು ಹುಬ್ಬಳ್ಳಿಯ ಬುಕ್ಕಿಗಳೇ ಅಲ್ಲ" ಎಂದು ತಲೆ ಅಲ್ಲಾಡಿಸಿಬಿಟ್ಟರು. ಅಲ್ಲಿಗೆ ಪೊಲೀಸರ ಅನುಮಾನ ನಿಜವಾಯ್ತು. ತಕ್ಷಣವೇ ಬುಕ್ಕಿವೇಷಿ ವರದಿಗಾರರ ಮೇಲೆ ಮುಗಿಬಿದ್ದು ಹಲ್ಲೆ ಮಾಡಿದ್ದಾರೆ. ದೊಡ್ಡ ಕ್ಯಾಮರಾಗಳು ಒಳಬರುತ್ತಿದ್ದಂತೆ ಎದ್ದುಬಿದ್ದು ಓಡಿದ್ದಾರೆ. ಅಲ್ಲಿಗೆ, ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್‌ನನ್ನು ಬಲೆಗೆ ಬೀಳಿಸುವ ಯೋಜನೆ ವಿಫಲವಾದರೂ ಡಿಸಿಪಿ ಹನುಮಂತರಾಯ ಮತ್ತು ಐದಾರು ಜನ ಕಾನ್‌ಸ್ಟೇಬಲ್‌ಗಳನ್ನು ಬೇಟೆಯಾಡುವಲ್ಲಿ ಟೀವಿ ತಂಡ ಯಶಸ್ಸು ಕಂಡಿತು.

ವರದಿಗಾರರ ಮೇಲೆ ಪ್ರತಿದೂರು

ಸ್ಟಿಂಗ್ ಆಪರೇಷನ್‌ಗಾಗಿ ಬೆಂಗಳೂರಿನಿಂದ ಹುಬ್ಬಳ್ಳಿಗೆ ಬಂದ ತಂಡ ತಮ್ಮ ಕೆಲಸ ಮುಗಿದ ಮೇಲೆ ಬೆಂಗಳೂರಿಗೆ ಹಿಂತಿರುಗಿ ಜೂನ್ 4ರಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಅವರನ್ನು ಭೇಟಿ ಮಾಡಿ ಹುಬ್ಬಳ್ಳಿ ಕೊಂಕಣ ಹೊಟೇಲ್‌ನಲ್ಲಿ ತಮ್ಮ ಮೇಲೆ ಹಲ್ಲೆ ನಡೆಸಿ, ಕ್ಯಾಮರಾ ಮತ್ತು ವಾಯ್ಸ್ ರೆಕಾರ್ಡಿಂಗ್ ಸಲಕರಣೆಗಳನ್ನು ಕಸಿದುಕೊಂಡು ಹೋದ ನರೇಂದ್ರ ಮತ್ತು

⏭| 07


ರವೀಂದ್ರ ಪ್ರಸಾದ್ ಏನು ಕಡಿಮೆ ಆಸಾಮಿಯಲ್ಲ

ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್‌ನ ನೇತೃತ್ವ ವಹಿಸಿರುವ ಕಮೀಷನರ್ ರವೀಂದ್ರ ಪ್ರಸಾದ್ ಏನು ಕಡಿಮೆ ಆಸಾಮಿಯಲ್ಲ. ಅಕ್ರಮ ದಂಧೆಕೋರರಿಗೂ ಇವರಿಗೂ ಯಾವಾಗಲೂ ಗಳಸ್ಯ-ಕಂಠಸ್ಯ ಸಂಬಂಧ.


ಒಂದು ಉದಾಹರಣೆ ನೋಡಿ. ರವೀಂದ್ರ ಪ್ರಸಾದರು ಈ ಹಿಂದೆ ಚಾಮರಾಜನಗರದ ಎಸ್ಪಿ ಆಗಿದ್ದಾಗ ಕಾನೂನುಬಾಹಿರ ಲಾಟರಿ ಅಡ್ಡೆಯ ಮೇಲೆ ದಾಳಿ ಮಾಡಿ ಅಲ್ಲಿ ಸಿಕ್ಕಿದ್ದ ಲಾಟರಿ ಟಿಕೆಟ್‌ಗಳನ್ನೆಲ್ಲಾ ಪೊಲೀಸ್ ಸ್ಟೇಷನ್‌ಗೆ ಒಯ್ಯೋದು ಬಿಟ್ಟು ತಂದು ಮನೆಯಲ್ಲಿಟ್ಟುಕೊಂಡಿದ್ದರು! ಅವರ ಅದೃಷ್ಟ ಚೆನ್ನಾಗಿತ್ತು ಒಂದು ಟಿಕೆಟ್‌ಗೆ ಲಾಟರಿ ಕೂಡ ಹೊಡೆದುಬಿಟ್ಟಿತು. ಅದನ್ನು ಬೇರೆ ಯಾರದ್ದೋ ಹೆಸರಿನಲ್ಲಿ ಡ್ರಾ ಮಾಡಿಸಿಕೊಂಡರಂತೆ.

ಈಗ ಒಂದಂಕಿ ಲಾಟರಿ ಹಗರಣವನ್ನು ರಾಜ್ಯ ಸರ್ಕಾರ ಸಿಬಿಐಗೆ ವಹಿಸಿದೆ. ತನಿಖೆ ಒಂದಿಷ್ಟು ಆಳವಾಗಿ ನಡೆದರೆ ರವೀಂದ್ರ ಪ್ರಸಾದ್ ಕುತ್ತಿಗೆಗೂ ಕುಣಿಕೆ ಬೀಳುವುದು ಗ್ಯಾರಂಟಿ.

ಅರಳು-ಮರುಳು ಅಂಬಿಕಾನಂದನೂ ಅನಾಹುತಕಾರಿ ರಾಘು ಗ್ಯಾಂಗೂ!



ರಾಮಚಂದ್ರಾಪುರ ಮಠದ ಮಾನಗೇಡಿ ಪೀಠಾಧಿಪತಿ ರಾಘು ಮಾಣಿ ಅನಾಹುತಕಾರಿ ಸುದ್ದಿ-ಸದ್ದು ಸಾಲುಸಾಲಾಗಿ ಮಾಡುತ್ತಲೇ ಇದ್ದಾನೆ. ಅಮಾಯಕ ಗಾಯಕಿ ಪ್ರೇಮಲತಾರ ಮೇಲೆ 'ಆಧ್ಯಾತ್ಮಿಕ ಅತ್ಯಾಚಾರ' ಮಾಡಿ ಲೋಕಪ್ರಸಿದ್ಧನಾಗಿರುವ ರಾಘುನ ದಶಾವತಾರ ಈ ಎಂಟ್ಹತ್ತು ತಿಂಗಳಲ್ಲಿ ಒಂದೊಂದಾಗಿ ಬಯಲಿಗೆ ಬಿದ್ದಿದೆ. ರೇಪ್‌ಕೇಸ್‌ನ ಆರೋಪ ಪಟ್ಟಿ (ಚಾರ್ಜ್‌ಶೀಟ್) ತಯಾರಿಸಿಟ್ಟುಕೊಂಡಿರುವ ಸಿಐಡಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಹಿಂದೆ-ಮುಂದೆ ನೋಡುತ್ತಿರುವುದು ರಾಘುನ ಕಾವಿ-ಕಾಂಚಾಣ-ಕಾಮಿನಿ ಕಾಂಬಿನೇಷನ್ ತಾಕತ್ತಿನ ಪರೋಕ್ಷ ಪ್ರದರ್ಶನದಂತಾಗಿಹೋಗಿದೆ. ಈ ಹೊತ್ತಿನಲ್ಲೇ ಶಿರಸಿಯ ಅಂಬಾಗಿರಿ ಮಠದ ಸಂಸ್ಥಾಪಕ ಸ್ವಾಮಿ ಅಂಬಿಕಾನಂದ ಇದ್ದಕ್ಕಿದ್ದಂತೆ ರಾಘುನ ರೌಡಿ ಪಡೆ ವಿರುದ್ಧ ತಿರುಗಿಬಿದ್ದು ತಳಮಳಿಸುತ್ತಿದ್ದಾರೆ....



ಅಂಬಿಕಾನಂದ ಅವತಾರ

ಅಂಬಿಕಾನಂದ ಎಂಬ ಖಾವಿ ಜೀವಿ ರಾಮಕೃಷ್ಣ ಮಠ ಪರಂಪರೆಯ ಸನ್ಯಾಸಿ. ಶಿರಸಿಯಿಂದ ಆರೆಂಟು ಕಿ.ಮೀ. ದೂರದಲ್ಲಿರುವ ಸಂಪಿಗೆ ಮನೆ ಎಂಬ ಹಳ್ಳಿಯ ಹವ್ಯಕರ ಮನೆ ಮಗನಿಗೆ ಅದೇನು ವೈರಾಗ್ಯವೋ ಏನೋ? ಆತ ಕಾರವಾರದ ರಾಮಕೃಷ್ಣ ಮಠದ ಸ್ವಾಮಿ ಪ್ರಭಾನಂದಜೀ ಮಹಾರಾಜರ ಶಿಷ್ಯತ್ವ ದೀಕ್ಷೆ ಪಡೆದುಕೊಂಡಿದ್ದ. ಈ ಪ್ರಭಾನಂದಜೀ ಶಿರಸಿಯಲ್ಲಿ ಕಾಳಿಕಾ ಮಠವನ್ನು 1963ರಲ್ಲಿ ಸ್ಥಾಪಿಸುತ್ತಾರೆ. ಸರ್ಕಾರ ಸದ್ರಿ ಮಠಕ್ಕೆ 1982ರಲ್ಲಿ ಶಿರಸಿಯ ಗಾಂಧಿನಗರದಲ್ಲಿ 1 ಎಕರೆ 12 ಗುಂಟೆ ಕಂದಾಯ ಪಡ ಭೂಮಿ ಮಂಜೂರಿ ಮಾಡುತ್ತದೆ. ಆ ನಂತರ ಮತ್ತೂ ಒಂದು ಎಕರೆ ಜಮೀನು ಕೊಡಲಾಗುತ್ತದೆ. ಅದೇ ವೇಳೆಗೆ ವೃದ್ಧರಾಗಿದ್ದ ಪ್ರಭಾನಂದಜೀ ದೇಹಾಂತ್ಯವಾಗುತ್ತದೆ.

ಆಗ ಉತ್ತರಾಧಿಕಾರಿಯಾಗಿ ಶಿರಸಿ ಕಾಳಿಕಾಮಠದ ಪೀಠವೇರಿದಾತನೇ ಈ ಅಂಬಿಕಾನಂದ ಸ್ವಾಮೀಜಿ. ಎತ್ತರದ ಆಕರ್ಷಕ ಪ್ರದೇಶದಲ್ಲಿದ್ದ ಮಠದ 2-12-0 ಎಕರೆ ಜಾಗವನ್ನು ಅಂಬಿಕಾನಂದ ಆಧ್ಯಾತ್ಮಿಕ-ಧಾರ್ಮಿಕ-ಸಾಂಸ್ಕೃತಿಕ-ಶೈಕ್ಷಣಿಕ ಕೇಂದ್ರ ಮಾಡಲು ಬಡಿದಾಡುತ್ತಾರೆ. ಸಾಲ-ದಾನ-ದೇಣಿಗೆ ಎಂದೆಲ್ಲಾ ಹಣ ಒಟ್ಟಾಕಿ ಭರ್ಜರಿ ಕಟ್ಟಡಗಳನ್ನೆಬ್ಬಿಸುತ್ತಾರೆ. ನೋಡುನೋಡುತ್ತಿದ್ದಂತೆಯೇ ಇದೊಂದು ಜನಾಕರ್ಷಕ ಧಾರ್ಮಿಕ ಲೇವಾದೇವಿ ತಾಣದಂತಾಗಿಹೋಗುತ್ತದೆ. ಈ ಮಠದ ಪ್ರದೇಶಕ್ಕೆ 'ಅಂಬಾಗಿರಿ' ಎಂಬ ಹೆಸರು ಬರುತ್ತದೆ.

ರಸಿಕ ಸ್ವಾಮಿ

ಹತ್ತೂ ಕಡೆಯಿಂದ ಹಣ-ಜನ ಹರಿದುಬರುತ್ತಿರುವಂತೆ ಅಂಬಿಕಾನಂದನ ಆಧ್ಯಾತ್ಮಿಕ ಗೆಟಪ್ಪು ಬದಲಾಗಿಬಿಡುತ್ತದೆ; ಧಾರ್ಮಿಕೋದ್ಯಮಿಯಾಗಿ ರೂಪಾಂತರವಾಗುವ ಅಂಬಿಕಾನಂದನ ರಸಿಕ ರಗಳೆಗಳೂ ಶುರುವಾಗುತ್ತವೆ. ವೈಭೋಗದ ಜೀವನ-ಒಣಪ್ರತಿಷ್ಠೆಯ ವಸಾಹತುಶಾಹಿ ದುರಾಸೆಯಿಂದ ಬ್ಯಾಂಕ್-ಫೈನಾನ್ಸ್‌ಗಳಲ್ಲೆಲ್ಲ ದೊಡ್ಡ ಸಾಲ ಅಂಬಿಕಾನಂದ ಎತ್ತುವ ದುಃಸ್ಥಿತಿ ಬರುತ್ತದೆ. ಪಶ್ಚಿಮ ಬಂಗಾಳದ ಬದಿಯ ಹೆಂಗಸೊಬ್ಬಳನ್ನು ಕಾಯಂ ಆಗಿ ಮಠದಲ್ಲೇ ಮಡಗಿಕೊಳ್ಳುತ್ತಾರೆ. ಆಕೆ ದೇವರ ಪೂಜೆಯ ಪಾತ್ರೆ-ತೊಳೆಯುವುದು, ಹೂ-ಆರತಿ ಸಿದ್ಧಪಡಿಸುವುದು, ಗುರುಗಳಿಗೆ ಹಣ್ಣು-ಹಂಪಲು ತಂದುಕೊಡುವ ಚಾಕರಿ ಮಾಡುತ್ತಿದ್ದಳು.

ಬರಬರುತ್ತ ಆ ಬಂಗಾಳಿ ಹೆಂಗಸಿನ ಜತೆ ಗುರುಗಳ ಬಾಂಧವ್ಯ 'ಅನ್ಯೋನ್ಯ'ವಾಗಹತ್ತಿತು. 'ಲಿವ್ ಟುಗೆದರ್' ಶೈಲಿಯ ಸಂಸಾರ ಅಂಬಿಕಾನಂದರು ನಾಜೂಕಾಗಿ ನಡೆಸುತ್ತಿದ್ದುದು ಮಠದ ಅನುಯಾಯಿಗಳಿಗೆಲ್ಲ ಗೊತ್ತಾಗೋಕೆ ತಡವೇನಾಗಲಿಲ್ಲ. ಒಂದೆಡೆ ಸ್ತ್ರೀವ್ಯಾಮೋಹ; ಮತ್ತೊಂದೆಡೆ ಸಾಲದ ಶೂಲ. ಅಂಬಿಕಾನಂದರಿಗೆ ಸನ್ಯಾಸ ಸಾಕುಸಾಕೆನಿಸಿಬಿಟ್ಟಿತು. ಮಠ ಮಾರಿ ಆ ಹಣದಲ್ಲಿ ಬಂಗಾಳಿ ಗೆಳತಿ ಜತೆ ಬೆಚ್ಚಗೆ ವೃದ್ಧಾಪ್ಯದ ಬದುಕು ಕಳೆಯಲು ಸ್ಕೆಚ್ ಹಾಕಿದರು. ಆಗಾತನಿಗೆ 60ಕ್ಕೆ ಹತ್ತಿರತ್ತಿರದ ವಯಸ್ಸು. ಕಾರ್ಪೊರೇಷನ್ ಬ್ಯಾಂಕ್, ರಾಜಧಾನಿ ಫೈನಾನ್ಸ್‌ನ ಲಕ್ಷಾಂತರ ಸಾಲದಿಂದ ಬಿಡುಗಡೆಗೆ ಆತ ಮಠ ಖರೀದಿಸುವವರಿಗೆ ಅಧಿಕೃತ ಆಹ್ವಾನ-ಪ್ರಕಟಣೆ ಕೊಡುವ ಪರಿಸ್ಥಿತಿ ಎದುರಾಯ್ತು.

ಹಣಕ್ಕಾಗಿ ಹುಡುಕಾಟ

2003ರಲ್ಲಿ ಅಂಬಿಕಾನಂದ ಸ್ವಾಮಿಗೆ ಆರ್ಥಿಕ ಬಿಕ್ಕಟ್ಟಿನಿಂದ ಬಚಾವಾಗೋದು ಕಷ್ಟವಾಯಿತು. ಹಲವು ಚೆಕ್‌ಬೌನ್ಸ್ ಕೇಸುಗಳು ಬೀಳುವ ಸಂದರ್ಭ ಬಂತು. ಆಗಾತ ಧನಾಢ್ಯ ಮಠಗಳ ಪೀಠಾಧಿಪತಿಗಳ ಸಂಧಿಸಲು ಆರಂಭಿಸಿದರು. ತನ್ನ ಮಠ ವಹಿಸಿಕೊಂಡು ಕೇಸ್-ಸಾಲದಿಂದ ಪಾರು ಮಾಡುವಂತೆ ಆತ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸ್ವಾಮಿ ಪಟಾಲಮನ್ನು ಕೇಳಿಕೊಂಡರು. ಡೀಲ್ ತುಂಬ ಎಳೆದಾಡಿತು. ನಂತರ ಅದ್ಯಾಕೋ ಅಂಬಾಗಿರಿ ಮಠ ವಹಿಸಿಕೊಳ್ಳಲು ಸ್ವರ್ಣವಲ್ಲಿ ಸ್ವಾಮೀ ಸಿದ್ಧರಾಗಲಿಲ್ಲ. ರಾಘುನಂತೆ ಆಸ್ತಿ-ಹಣದ ಹಪಾಹಪಿ ಇಲ್ಲದ ಸ್ವರ್ಣವಲ್ಲಿ ಸ್ವಾಮಿ ಅಂಥ ವ್ಯವಹಾರಸ್ಥರೂ ಅಲ್ಲ. ಹೀಗಾಗಿ ಅಂಬಾಗಿರಿ ಮಠ ಖರೀದಿ ಮಾತುಕತೆ ಮುರಿದು ಬಿತ್ತು.

ಶಿರಸಿ ನಗರದ ಸೊಂಟಕ್ಕೆ ಅಂಟಿಕೊಂಡೇ ಇರುವ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಅಂಬಾಗಿರಿ ಮಠ, ಹಲವು ಬೃಹತ್ ಕಟ್ಟಡಗಳು ಮತ್ತು ಅನಾಮತ್ತು ಎರಡೂ ಕಾಲು ಎಕರೆ ಜಾಗ ಅಂಬಿಕಾನಂದ ಮಾರುವ ಯೋಚನೆಗೆ ಬಿದ್ದಿರುವುದು, ಸ್ವರ್ಣವಲ್ಲಿ ಸ್ವಾಮಿ ಪರಿವಾರದ ಜತೆ ವ್ಯವಹಾರ ನಡೆಯುತ್ತಿರುವುದು ಭೂಮಿ-ಆಸ್ತಿ ವ್ಯಾಮೋಹಿ ರಾಮಚಂದ್ರಾಪುರ ಮಠಾಧೀಶ ರಾಘುನ ಕಿವಿಗೆ ಮುಟ್ಟಿತು. ಪ್ರಸಿದ್ಧ ತಂತ್ರಿ ಕಟ್ಟೆ ಪರಮೇಶ್ವರ ಭಟ್ಟರ ಮಧ್ಯಸ್ಥಿಕೆಯಲ್ಲಿ ಅಂಬಿಕಾನಂದರೊಂದಿಗೆ ಡೀಲ್ ಶುರುವಿಟ್ಟುಕೊಂಡೇ ಬಿಟ್ಟ ರಾಘು!



ಅಂಬಿಕಾನಂದನ ಪಾಪರ್ ಪರಿಸ್ಥಿತಿಯ ಅಸಹಾಯಕತೆಯನ್ನು ದುರುಪಯೋಗಿಸಿಕೊಂಡ ರಾಘು ಮಾಣಿ ತಕ್ಷಣಕ್ಕೆ ಒಂದಿಷ್ಟು ಲಕ್ಷ ಕೊಟ್ಟು ಚೆಕ್ ಬೌನ್ಸ್ ಕೇಸ್‌ನಿಂದ ಆತ ತಪ್ಪಿಸಿಕೊಳ್ಳಲು ನೆರವಾದ. ಅಂಬಿಕಾನಂದನನ್ನು ನಿಧಾನಕ್ಕೆ ಪಳಗಿಸಲು ರಾಘು ಪಟಾಲಮ್ ತಂತ್ರಗಾರಿಕೆ ಮಾಡಿತು; ಆತನ ಸಾಲಗಳನ್ನೆಲ್ಲ ತೀರಿಸುವುದರ ಜತೆಗೆ ಹೊಸ ದಾಂಪತ್ಯ ಜೀವನಕ್ಕೆ ಬೇಕಾಗುವ ಏರ್ಪಾಡು ಮಾಡುವ ಆಮಿಷ ಒಡ್ಡಿತು. ಅಷ್ಟೇ ಅಲ್ಲ ಹತ್ತಾರು ಲಕ್ಷ ಬದುಕಿನ ಭದ್ರತೆಗೆ ಒಂದೇ ಗಂಟಲ್ಲಿ ಕೊಡುವ ಆಸೆ ತೋರಿಸಿತು.

ಗೆಳತಿ ಜತೆ ಪರಾರಿ

ಸನ್ಯಾಸದಿಂದ ಬೇಜಾರು ಬದ್ದಿದ್ದ-ಸಾಲದಿಂದ ಹೈರಾಣಾಗಿ ಹೋಗಿದ್ದ ಅಂಬಿಕಾನಂದನಿಗೆ 'ಸಂಸಾರ ಸುಖ'ದ ತೆವಲು ಜೋರಾಗಿತ್ತು. ಗೆಳತಿ ಬಿಟ್ಟಿರಲಾರದ ವ್ಯಾಮೋಹಕ್ಕೆ ಆತ ಸಿಲುಕಿದ್ದ. ರಾಘು ಗ್ಯಾಂಗು ಬರಿ 25 ಲಕ್ಷಕ್ಕೆ ವ್ಯವಹಾರ ಸೆಟಲ್ ಮಾಡಿಬಿಟ್ಟಿತು. ಅಂಬಾಗಿರಿ ಮಠದ ಏಕಮೇವ ಟ್ರಸ್ಟಿಯಾಗಿದ್ದ ಅಂಬಿಕಾನಂದ ಅವಸರವಸರವಾಗಿ ಜಿಮ್ಮೆದಾರಿಕೆ ರಾಘುಗೆ ವಹಿಸುವ ಒಂದಿಷ್ಟು ಕಾಗದಪತ್ರಕ್ಕೆ ಸಹಿ ಹಾಕಿ ಸಿಕ್ಕಷ್ಟು ಹಣ ಪಡೆದುಕೊಂಡು ಗೆಳತಿ ಜತೆ ಸೀದಾ ಕಲ್ಕತ್ತಾಕ್ಕೆ ಹೋಗಿಬಿಟ್ಟ! ಇತ್ತ ಕಾನೂನುಬದ್ಧವಾಗಿ ಆಸ್ತಿ-ಭೂಮಿಯ ಸ್ವಾಮಿತ್ವ ಪಡೆಯಲಾಗದಿದ್ದರೂ ಮಠ ಭೌತಿಕವಾಗಿ ಕಬ್ಜಾ ಮಾಡಿಕೊಂಡಿತು ರಾಘು ಬಳಗ.

ಗಡಿಬಿಡಿಯಲ್ಲಿ ಅಂಬಿಕಾನಂದ ರಾಮಚಂದ್ರಾಪುರ ಮಠಕ್ಕೆ ಅಂಬಾಗಿರಿ ವಹಿಸಿ ನಾಪತ್ತೆಯಾಗಿದ್ದು ಶಿರಸಿ ಸೀಮೆಯ ಹವ್ಯಕರಲ್ಲಿ ಒಂಥರಾ ಅಸಮಾಧಾನ-ಅಸಹನೆಗೆ ಕಾರಣವಾಯ್ತು; ಸ್ವರ್ಣವಲ್ಲಿ ಸಂಸ್ಥಾನದ ಸರಹದ್ದಿನೊಳಗೇ 'ಎದುರಾಳಿ' ಮಠದ 'ರಾಜ'ನೊಬ್ಬ ವಸಾಹತು ಸ್ಥಾಪಿಸುವುದು ಹವ್ಯಕರಲ್ಲಿ ಎರಡು ಗುಂಪುಗಳಾಗಿಸಿ ಮೇಲಾಟಕ್ಕೆ ಹಚ್ಚಿಬಿಟ್ಟಿತು. ರಾಘು ಶಿರಸಿ ಅಂಬಾಗಿರಿ ಖರೀದಿಸಿದ್ದೇ ಸ್ವರ್ಣವಲ್ಲಿ ಮಠಾಧೀಶರ ಪ್ರಭಾವ ಕುಂದಿಸಿ ತನ್ನ ಸಾಮ್ರಾಜ್ಯ ವಿಸ್ತರಿಸುವ ಒಳ ಹಿಕಮತ್ತಿನಿಂದಾಗಿತ್ತು. ಮಠ ವಹಿಸಿಕೊಂಡದ್ದೇ ತಡ ರಾಘು 'ಅಂಬಾ ಕಥಾ'ದಂಥ ವಿವಿಧ ವಿನೋದಾವಳಿ ಕಾರ್ಯಕ್ರಮ ನಡೆಸಿ ಅನುಯಾಯಿಗಳ ಹೆಚ್ಚಿಸಿಕೊಳ್ಳಲು ಹವಣಿಸಿದ್ದ. ಸಿಎಂ ಆಗಿದ್ದ ಎಚ್.ಡಿ. ಕುಮಾರಸ್ವಾಮಿಯನ್ನು ಅಂಬಾಗಿರಿಗೆ ಕರೆಸಿ ಗದ್ದಲ ಎಬ್ಬಿಸಿ ತಾಕತ್ತೂ ತೋರಿಸಿದ್ದ.

ರಾಘು ರೌಡಿಗಳ ಉಪಟಳ!!


ರಾಮಚಂದ್ರಾಪುರ ಮಠದ ಆಡಳಿತಾಗಾರರು ಅಂಬಾಗಿರಿಯಲ್ಲಿ ಒಂದು ಉಸ್ತುವಾರಿ ಸಮಿತಿ ರಚಿಸಿ ದೈನಂದಿನ ವ್ಯವಹಾರ ನಿಭಾಯಿಸತೊಡಗಿತ್ತು. ರಾಘು ಮಾಣಿ ಗೋವು-ಗೆಳತಿಯರು-ಕನ್ಯಾಸಂಸ್ಕಾರ-ಏಕಾಂತ ದರ್ಶನ ಎನ್ನುತ್ತ ಅಂಬಾಗಿರಿಯತ್ತ ಆಸಕ್ತಿ ಕಳೆದುಕೊಂಡು ಬಿಟ್ಟಿದ್ದ. ಆತನಿಗೆ ಅಂಬಾಗಿರಿ ಮರೆತು ವರ್ಷ ಮೂರು ಕಳೆದಿದೆ. ಹೀಗಾಗಿ ಇಲ್ಲಿಯ ದೇಖರೇಖಿ ಸಮಿತಿಯದೇ ದರ್ಬಾರು. ಇಂಥ ಕಡೆ ಅಂಬಿಕಾನಂದ ಕಲ್ಕತ್ತಾದಿಂದ ಆಗಾಗ ಬಂದು ವಾರಗಟ್ಟಲೆ ಉಳಿದು ಹೋಗುತ್ತಿದ್ದರು.

ಇದೇ ಪ್ರಕಾರ ಕಳೆದ ಕೆಲವು ದಿನಗಳ ಹಿಂದೆ ಆತ ಅಂಬಾಗಿರಿಗೆ ಬಂದಿದ್ದಾರೆ. ಈ ಬಾರಿ ಅಂಬಿಕಾನಂದ ಮತ್ತು ಉಸ್ತುವಾರಿ ತಂಡದ ಮುಖ್ಯಸ್ಥ ಅಲ್ಮನೆ ಹೆಗಡೆ ನಡುವೆ ಸಣ್ಣಸಣ್ಣ ವಿಷಯಕ್ಕೆಲ್ಲ ಮಾತಿಗೆ ಮಾತಾಗಿದೆ. ಮೈ...ಮೈ...ತು...ತು ಆಗಿದೆ. ಹಿಂದೆಲ್ಲ ಎಷ್ಟೇ ಕಡೆಗಣಿಸಿ ತಾತ್ಸಾರ ಮಾಡಿದರೂ ಸಹಿಸಿಕೊಂಡು ದಿನ ಕಳೆದುಹೋಗುತ್ತಿದ್ದ ಅಂಬಿಕಾನಂದ ಈ ಸಲ ಎಗರಾಡಿದ್ದಾರೆ. 75ರ ಅಂಚಿನಲ್ಲಿರುವ ಅಂಬಿಕಾನಂದರ ಅರಳು-ಮರುಳು ಅಂಬಾಗಿರಿ ದೊರೆಗಳ ಕೆರಳಿಸಿದೆ. ಸಂಸ್ಥಾಪಕ-ಸ್ವಾಮಿಯನ್ನು ನಿಕೃಷ್ಟವಾಗಿ ಕಂಡಿದ್ದಾರೆ. ಆತನಿಗೆ ಮಲಗಲು ಕೊಡುತ್ತಿದ್ದ ಮಂಚಕ್ಕೂ ಸಂಚಕಾರ ಕೊಟ್ಟಿದ್ದಾರೆ. ಅಂಬಿಕಾನಂದರ ಚಂಡಿಕಾ ಹೋಮದ ಪ್ಲಾನಿಗೂ ಕಲ್ಲು ಹಾಕಿದ್ದಾರೆ.


ಇದರಿಂದ ವಯೋವೃದ್ಧರೂ ರಕ್ತದೊತ್ತಡ, ಮಧುಮೇಹ ಕಾಯಿಲೆ ಪೀಡಿತರೂ ಆಗಿರುವ ಅಂಬಿಕಾನಂದ ಉದ್ವೇಗಕ್ಕೆ ಒಳಗಾಗಿದ್ದಾರೆ. ಕಿರುಚಾಡಿ ಹಾರಾಡಿದ್ದಾರೆ. ತನ್ನ ಆರಾಧ್ಯ ದೈವವಾದ ಸ್ವಾಮಿ ವಿವೇಕಾನಂದ, ಗುರುಗಳಾದ ಪ್ರಭಾನಂದಜೀಗಳ ಭಾವಚಿತ್ರ ಬಿಸಾಡಲಾಗಿದೆ ಎಂದು ತಕರಾರು ತೆಗೆದಿದ್ದಾರೆ. ಕಾಳಿಕಾದೇವಿಯ ಪೂಜೆ ಇಲ್ಲಿ ಕ್ರಮಬದ್ಧವಾಗಿ ನಡೆಯುತ್ತಿಲ್ಲವೆಂದು ಆಕ್ಷೇಪಿಸಿದ್ದಾರೆ. ಸಿಟ್ಟಿನಿಂದ ಧುಮುಗುಡುತ್ತ 'ಪೂರ್ವಾಶ್ರಮ'ದ ಅನುಯಾಯಿಗಳನ್ನು, ರಕ್ತ ಸಂಬಂಧಿಗಳನ್ನು ಭೇಟಿಯಾಗಿ 'ಅಂಬಾಗಿರಿ'ಗೆ ಬಂದ ದುಃಸ್ಥಿತಿ ಬಗ್ಗೆ ಹೇಳಿ ಗೋಳಾಡಿದ್ದಾರೆ. ಇತ್ತ ಮಠದಲ್ಲಿ ರಾಘುನ ರೌಡಿ ಪಡೆ ಅಂಬಿಕಾನಂದನಿಗೆ ಸತಾಯಿಸಲೆಂದು ತಂತ್ರ ಹೂಡಿದೆ. ಆತನ ರೂಮಿನ ಬೀಗ ಮುರಿದು ಬೇರೆ ಬೀಗ ಜಡಿದಿದೆ. ಅಂಬಿಕಾನಂದನನ್ನು ಅಂಬಾಗಿರಿ ಮಠದಿಂದ ಓಡಿಸುವ ಆಟ ಆಡಿದೆ.

ತಿರುಗಿಬಿದ್ದ ಅಂಬಿಕಾನಂದ!!

ಶಿರಸಿ ಸೀಮೆಯಲ್ಲಿ ರಾಘುಗೆ ಇರುವ ಶಿಷ್ಯ ಸಂಕುಲ ಅಷ್ಟಕ್ಕಷ್ಟೇ. ಇದೇನಿದ್ದರೂ ಸ್ವರ್ಣವಲ್ಲಿ ಮಠದ ಸಂಸ್ಥಾನ. ಸಹಜವಾಗೇ ರಾಘುನ ವಿರೋಧಿಗಳು ಅಂಬಿಕಾನಂದರ ಕೇಸ್ ಕೇಳಿ ಎಚ್ಚೆತ್ತಿದ್ದಾರೆ. ರೇಪ್ ಕೇಸಲ್ಲಿ ಹೈರಾಣಾಗಿರುವ ರಾಘುನ ಹಣಿಯಲು ಇದೇ ಸರಿಯಾದ ಸಮಯವೆಂದು ವಿರೋಧಿಗಳು ಒಂದಾಗಿ ಅಂಬಿಕಾನಂದರ ಬೆನ್ನಿಗೆ ನಿಂತಿದ್ದಾರೆ. ಸಂಘಪರಿವಾರದ ಕಾವಿ ಬ್ರಿಗೇಡ್‌ನ ಧೀರಾಧಿಧೀರರು, ಕಾಂಗ್ರೆಸ್ ಪುಢಾರಿ ಶಾಂತಾರಾಮ ಹೆಗಡೆಯಂಥ ಅಂಬಿಕಾನಂದನ ರಕ್ತ ಸಂಬಂಧಿಗಳು ಲಗುಬಗೆಯಲ್ಲಿ ಓಡಾಡಿದ್ದಾರೆ. ಈ ಶಾಂತಾರಾಮ ಹೆಗಡೆ ಸ್ವರ್ಣವಲ್ಲಿ ಮಠದ ಆಡಳಿತ ಕಮಿಟಿಯ ಮಾಜಿ ಉಪಾಧ್ಯಕ್ಷ; ಹಾಲಿ ಮಹತ್ವದ ಮೆಂಬರ್.



ರಾಘುನ ರೌಡಿ ಪಡೆಯ ಜಾಯಮಾನವೇ ಅಷ್ಟು: ಆ ಪುಂಡ ಪಡೆಯ ಎದುರು ಯಾರೂ ಸ್ವಾಭಿಮಾನದಿಂದ ಮಾತಾಡುವಂತೆಯೇ ಇಲ್ಲ; ಎಲ್ಲರೂ ಗುಲಾಮರಾಗಿ ಇರಬೇಕೆಂಬ ಇಚ್ಛೆ ರಾಘು ಬಳಗದ್ದು. ಇದೇ "ನೀತಿ" ಅಂಬಿಕಾನಂದರ ಮೇಲೂ ಪ್ರಯೋಗವಾಗಿದೆ. ಪದೇ-ಪದೇ ಆತ ಅಂಬಾಗಿರಿಗೆ ಬಂದು ಠಿಕಾಣಿ ಹೂಡುವುದು ರಾಘು ಪಟಾಲಮ್‌ಗೆ ಬೇಡವಾಗಿದೆ. ಆತನ ವೈದ್ಯಕೀಯ ಆರೈಕೆ ಹೊರೆಯಾಗಿ ಕಾಣಿಸಿದೆ. ಇದು ಅಂಬಿಕಾನಂದರ ಅನುಯಾಯಿಗಳಿಗೆ ಅರ್ಥವಾಗಿದೆ. ಇವರೆಲ್ಲ ಸೇರಿ ರಾಮಚಂದ್ರಾಪುರ ಮಠದ ಪುಂಡರ ದಂಡಿಗೆ ಪಾಠ ಕಲಿಸುವ ನಿರ್ಧಾರಕ್ಕೆ ಬಂದಿದ್ದಾರೆ. ಮೇ 31 ರಂದು ಅಂಬಿಕಾನಂದ ಜಿಲ್ಲಾಧಿಕಾರಿಗೆ ಅಂಬಾಗಿರಿ ಮಠದ ಆಡಳಿತ ವ್ಯವಸ್ಥೆ ಅರಾಜಕತೆಯಿಂದ ಅಡ್ಡದಾರಿ ಹಿಡಿದಿದೆ ಎಂದು ಭರ್ಜರಿ ದೂರೊಂದನ್ನು ನೀಡಿದ್ದಾರೆ.



ಜಿಲ್ಲಾಧಿಕಾರಿಗೆ ದೂರು


ಶಿರಸಿ ತಹಸೀಲ್ದಾರ್ ಮೂಲಕ ಜಿಲ್ಲಾಧಿಕಾರಿಗೆ ಅಂಬಿಕಾನಂದ ಕೊಟ್ಟಿರುವ ದೂರು ಪ್ರಳಯಾಂತಕ ರಾಘು ಬಳಗದ ಬಣ್ಣ ಬಯಲಾಗಿಸುವಂತಿದೆ. 2003 ರಲ್ಲಿ ಅಂಬಾಗಿರಿ ಮಠದ ಉತ್ತರದಾಯಿತ್ವ ಹಸ್ತಾಂತರ ಪ್ರಕ್ರಿಯೆ ಕಾನೂನುಬದ್ಧವಾಗಿ ನಡೆದೇ ಇಲ್ಲವೆಂದು ಅಂಬಿಕಾನಂದ ಹೇಳಿದ್ದಾರೆ. ರಾಘು ಆಸ್ತಿ ಜೋಳಿಗೆಗೆ ಹಾಕಿಕೊಂಡನೇ ಹೊರತು ಕಾನೂನಿನಂತೆ ಅಧಿಕಾರ ಹಸ್ತಾಂತರ ಆಗಿಲ್ಲ. 2003-2015 ರ ತನಕ ಅಂಬಾಗಿರಿ ಮಠದ ಆಡಳಿತ ಎಂಬುದು ಕುಸಿದುಬಿದ್ದು ಅರಾಜಕತೆ ತಾಂಡವವಾಡುತ್ತಿದೆ. ಯಾರಿಗೂ ಸಮರ್ಥವಾಗಿ ಜವಾಬ್ದಾರಿ ನಿರ್ವಹಿಸಲು ಆಗುತ್ತಿಲ್ಲ. ರಾಘವೇಶ್ವರ ಭಾರತಿ ಸ್ವಾಮಿಗೆ ಮಠ ವಹಿಸಲಾಗಿದೆಯಾದರೂ ಇಲ್ಲಿಯ ಸಿಬ್ಬಂದಿ ಸೊಕ್ಕಿನಿಂದ ಮೆರೆಯುತ್ತಿದ್ದಾರೆ. ಕಾಳಿಕಾ ದೇವಿಯ ಪೂಜೆ ಸರಿಯಾಗಿ ನಡೆಯುತ್ತಿಲ್ಲ; ಭಕ್ತರೂ ಬೇಸತ್ತು ಮಠದಿಂದ ದೂರಾಗಿದ್ದಾರೆ. ಅಹಿತಕರ ಘಟನೆ ಮಠದಲ್ಲಿ ನಡೆಯುತ್ತಿದ್ದು ಸಾರ್ವಜನಿಕ-ದೇವರ ಸಂಪತ್ತಿನ ದುರುಪಯೋಗ ಆಗುತ್ತಿದೆ. ಸಂಸ್ಥೆಯ ದಾಖಲೆ-ಕಾಗದಪತ್ರ-ಲೆಕ್ಕಪತ್ರ ಮಾಯವಾಗಿದೆ. ಇದು ಅಂಬಿಕಾನಂದರ ದೂರಿನ ಸಾರಾಂಶ.

ತನ್ನ ಸಲಹೆ-ಸೂಚನೆ ನಿರ್ಲಕ್ಷಿಸಲಾಗುತ್ತಿದೆ ಎನ್ನುವ ಅಂಬಿಕಾನಂದರು ಅಂಬಾಗಿರಿ ಮಠ-ಸಂಸ್ಥೆಯನ್ನು ಸರ್ಕಾರ ವಶಪಡಿಸಿಕೊಂಡು ತಕ್ಷಣ ಆಡಳಿತಾಧಿಕಾರಿ ನೇಮಿಸುವಂತೆ ಬೇಡಿಕೆ ಇಟ್ಟಿದ್ದಾರೆ. ಇದು ಸಾರ್ವಜನಿಕ ಆಸ್ತಿಯ ರಕ್ಷಣೆಗೆ ಅನಿವಾರ್ಯ ಎಂದು ಹೇಳಿರುವ ಅಂಬಿಕಾನಂದರ ದೂರಿನ ಸುದ್ದಿ ಊರೆಲ್ಲ ಹರಡುತ್ತಿದ್ದಂತೆ ರಾಘು ಮತ್ತಾತನ ಪಟಾಲಮ್ ಬೆಚ್ಚಿಬಿದ್ದಿದೆ. ಬಚಾವಿಗೆ ಪ್ರತಿ ದೂರೊಂದನ್ನು ಪೊಲೀಸ್ ಠಾಣೆಗೆ ನೀಡಿದೆ. ಅಂಬಿಕಾನಂದ ಅಂಬಾಗಿರಿಗೆ ಬಂದು ಇಲ್ಲೇ ಉಳಿದು ಕಿರಿಕಿರಿ ಮಾಡುತ್ತಿದ್ದಾರೆ. ಈತನ ವಿಚಾರಣೆ ನಡೆಯಬೇಕು ಎಂಬುದು ರಾಘು ಪಡೆಯ ಸೇನಾಧಿಪತಿಯ ದೂರು ಅರ್ಜಿಯ ಒಟ್ಟಾರೆ ಒಕ್ಕಣಿಕೆ.

ಅಪಹರಣ ಆಗಿತ್ತಾ?

ಈ ದೂರು-ಪ್ರತಿದೂರುಗಳ ಗದ್ದಲ-ಗೊಂದಲದ ನಡುವೆಯೇ ಅಂಬಿಕಾನಂದರು ಕಾರವಾರಕ್ಕೆ ಹೋಗುವುದಾಗಿ, ಅಲ್ಲಿ ಖುದ್ದು ಜಿಲ್ಲಾಧಿಕಾರಿಗಳ ಭೇಟಿಯಾಗುವುದಾಗಿ ಹೇಳಿ 2.6.15 ರಂದು ಶಿರಸಿಯಿಂದ ಹೋಗಿದ್ದರು. ಆದರೆ ಮರುದಿನ ಆತ ಎಲ್ಲಿದ್ದರು-ಏನು ಮಾಡಿದರು ಎಂಬುದು ಆತನ ಆತ್ಮೀಯರಿಗೂ ತಿಳಿಯಲಿಲ್ಲ. ಊರೆಲ್ಲ ಅಂಬಿಕಾನಂದನನ್ನು ರಾಘು ರೌಡಿ ದಳ ಕಿಡ್‌ನ್ಯಾಪ್ ಮಾಡಿ ಬಾಯಿ ಮುಚ್ಚಿಸಲು "ದಂಡ" ಬಳಸಿದೆ ಎಂಬ ಪುಕಾರುಗಳು ಎದ್ದವು.

ಆದರೆ 3.6.15 ರಂದು ಅಂಬಿಕಾನಂದರು ತೀವ್ರ ಬಳಲಿದ, ರಕ್ತದೊತ್ತಡ ವಿಪರೀತ ಏರಿದ, ಭಾವೋದ್ವೇಗಕ್ಕೆ ಒಳಗಾದ ಸ್ಥಿತಿಯಲ್ಲಿ ಪ್ರತ್ಯಕ್ಷರಾದರು. ತಕ್ಷಣವೇ ಆತನ ಅನುಯಾಯಿಗಳು ಖಾಸಗಿ ಆಸ್ಪತ್ರೆಗೆ ಸೇರಿಸಿದರು. ಪತ್ರಕರ್ತರು-ಹಿತೈಷಿಗಳು ಕೇಳಿದ ಯಾವ ಪ್ರಶ್ನೆಗೂ ಆತ ಉತ್ತರಿಸಲಿಲ್ಲ. "ನನಗೆ ಯಾರೂ ಅಪಹರಿಸಿಲ್ಲ... ಯಾರಿಂದಲೂ ತೊಂದರೆಯಾಗಿಲ್ಲ... ಎಲ್ಲರೂ ದೇವರಂತೆ



ಅಂಬಾಗಿರಿ ಮಠ-ಶಿರಸಿ

ನೋಡಿಕೊಂಡಿದ್ದಾರೆ... ತಿರುಗಾಟ-ನಿದ್ದೆ ಗೆಟ್ಟಿದ್ದರಿಂದ ಬಳಲಿದ್ದೇನೆ... ಈಗೇನೂ ಕೇಳಬೇಡಿ. 15 ದಿನದ ನಂತರ ಸಂದರ್ಭ ಬಂದರೆ ಎಲ್ಲ ಹೇಳ್ತೇನೆ..." ಎಂದು ಹೇಳಿಹೋದವರು ಶಿರಸಿಯ ಸುಪ್ರಸಿದ್ಧ ಸಾಮ್ರಾಟ್ ಹೋಟೆಲಿನ ರೂಮ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಇದು ತೋಟಗಾರ್ಸ್ ಸೊಸೈಟಿಯ ಹೋಟೆಲು. ಇದರ ಅಧ್ಯಕ್ಷ ಶಾಂತರಾಮ ಹೆಗಡೆ ಅಂಬಿಕಾನಂದರ ಪೂರ್ವಾಶ್ರಮದ ಸಂಬಂಧಿ.

ಹದಿನೈದು ದಿನದ ಗಡುವು

ಅಂಬಿಕಾನಂದ ಒಂದೇ ಒಂದು ದಿನ ಕಣ್ಮರೆಯಾಗಿದ್ದಾಗ ಹಬ್ಬಿದ ಪುಕಾರುಗಳು ರೋಚಕವಾಗಿವೆ. ಒಂದು ಮೂಲದ ಪ್ರಕಾರ ಕಾರವಾರದ ರಾಮಕೃಷ್ಣ ಮಠಕ್ಕೆ ಅಂಬಿಕಾನಂದರು ಬಂದು ಅಲ್ಲಿಂದ ಜಿಲ್ಲಾಧಿಕಾರಿಯನ್ನು ಭೇಟಿಯಾಗಿ ದೂರು ಕೊಡುತ್ತಾರೆಂಬ ಸುಳಿವು ರಾಘುನ ತಾಲಿಬಾನಿ ಟೀಮಿಗೆ ಸಿಕ್ಕಿತಂತೆ. ಆ ಗ್ಯಾಂಗ್‌ನ ಮುಂದಾಳತ್ವ ವಹಿಸಿದಾತ ಗೋಕರ್ಣ ದೇವಸ್ಥಾನ ಪಾರುಪತ್ಯ ವಹಿಸಿರುವ ರಾಘುನ ಪರಮಾಪ್ತ ಪುಂಡ. ಈತನ ತಂಡದಲ್ಲಿ ಪೆಟ್ರೋಲ್ ಮಾಣಿ ಎಂಬ ಅಡ್ಡ ಹೆಸರಿನ ಗೂಂಡಾ ಮತ್ತು ಜೀವವಿಮಾ ದುಡ್ಡಿಗಾಗಿ ತನ್ನದೇ ಮರಣ ಪತ್ರ ತಯಾರಿಸಿ ಸಿಕ್ಕಿಬಿದ್ದಿರುವ ಕುಳ್ಳ ಇದ್ದನಂತೆ. ಈ ಕುಳ್ಳ ರಾಘುನ ಅಶೋಕೆ ಮಠದ ಕಟ್ಟಡ ಕಾಮಗಾರಿ, ಇನ್ನಿತರ ಕೆಲಸದ ಕಿಂಗ್.

ಈ ಗ್ಯಾಂಗ್ ಉಪಾಯವಾಗಿ ಅಂಬಿಕಾನಂದರನ್ನು ಎತ್ತಾಕಿಕೊಂಡು ಗೋಕರ್ಣ ಅಶೋಕೆಗೆ ತಂದಿದ್ದಾರೆ. ಆಗಾಗ ಅಂಬಿಕಾನಂದರು ಬಂದುಹೋಗುವ ಶರ್ಮ ಎಂಬವರ ಮನೆಗೆ ತಂದಿದ್ದಾರೆ. ಈ ಮನೆ ಬಳಿಯೇ ರಾಘುನ ಗೋಕರ್ಣ (ಅಶೋಕೆ) ಮಠವಿದೆ. ಇಲ್ಲಿ ಸಾಮ-ಭೇದದಂಡ ವಯೋವೃದ್ಧ ಅಂಬಿಕಾನಂದರ ಮೇಲೆ ಪ್ರಯೋಗಿಸಿ ಬಾಯಿ ಮುಚ್ಚಿಸಲು ತಂತ್ರ ಮಾಡಲಾಗಿದೆ. ಹದಿನೈದು ದಿನದ ಒಳಗೆ "ಬಾಸ್ ರಾಘು"ನೊಂದಿಗೆ ಚರ್ಚಿಸಿ ಅಂಬಿಕಾನಂದರ "ಕುಂದುಕೊರತೆ" ನೀಗಿಸುವ ಭರವಸೆ ಕೊಡಲಾಗಿದೆ. ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಷಡ್ಯಂತ್ರದ ರಾಘು ಪಟಾಲಮ್ ಅಂಬಿಕಾನಂದನನ್ನು ಹದಿನೈದು ದಿನ ನಿಶ್ಶಸ್ತ್ರನನ್ನಾಗಿ ಮಾಡಿ ಆ ಅವಧಿಯಲ್ಲಿ ಆತನ ಹಣಿಯಲು ಸ್ಕೆಚ್ ರೆಡಿ ಮಾಡುವ ಸಾಧ್ಯತೆಯಿದೆ. ಇದೇ ತಂತ್ರ ಆರೆಸ್ಸೆಸ್ ಘಟಾನುಘಟಿಗಳ ಎದುರು ಪೀಠತ್ಯಾಗದ ಪ್ರಶ್ನೆ ಬಂದಾಗ ರಾಘು ಪ್ರಯೋಗಿಸಿ ನಂತರ ಉಲ್ಟಾ ಹೊಡೆದಿದ್ದ; ಚಾತುರ್ಮಾಸ್ಯ ಮುಗಿವತನಕ ಅವಕಾಶ ಕೊಡಿ ಎಂದ್ವೇಳಿ ಪ್ರೇಮಲತಾ-ದಿವಾಕರ್ ದಂಪತಿಗಳ ಸುಮ್ಮನಾಗಿಸಿ ಆ ಸಂದರ್ಭ ಬಳಸಿಕೊಂಡು ಬ್ಲ್ಯಾಕ್‌ಮೇಲ್ ಕೇಸು ಹಾಕಿದ್ದ ರಾಘು. ನ್ಯಾಯಾಲಯಗಳಲ್ಲೂ ಈ ಸಮಯಸಾಧಕ ತಂತ್ರವನ್ನೇ ರಾಘು ಗ್ಯಾಂಗ್ ಬಳಸಿ ತಲೆ ತಪ್ಪಿಸಿಕೊಂಡಿತ್ತು. ಕೆಕ್ಕಾರ ಮಠಕ್ಕೆ ಸಿಓಡಿ ಪೊಲೀಸು ಹೋದಾಗಲೂ ಚಾತುರ್ಮಾಸ್ಯದ ವ್ರತದ ಬಳಿಕ ವಿಚಾರಣೆಗೆ ಬರುವೆನೆಂದಿದ್ದ ರಾಘು ಹೋಗಿದ್ದು ನ್ಯಾಯಾಲಯಕ್ಕೆ.

ಈಗ ಅಂಬಿಕಾನಂದರ ಕೇಸಲ್ಲೂ ಅಂಥದೇ ಅನಾಹುತ ಆಗುವ ಲಕ್ಷಣ ಕಾಣಿಸುತ್ತಿದೆ. ಅಂಬಿಕಾನಂದ ಹದಿನೈದು ದಿನ ದುಡ್ಡಿನ ಆಸೆ-ವೈದ್ಯಕೀಯ ಶುಶ್ರೂಷೆಯ ಬಯಕೆ ಅಂಬಾಗಿರಿಯಲ್ಲಿ ಒಂದು ಕುಟೀರ ಕಟ್ಟಿಸಿ ಕೊಡುವ ನಿರೀಕ್ಷೆಯಿಂದ ಶಸ್ತ್ರ ಚೆಲ್ಲಿದ್ದಾರೆ. ನಿರಾಯುಧನ ಮೇಲೆ ದಾಳಿಗೆ ರಾಘವ ಪಟಾಲಮ್ ಯೋಜನೆ-ಯೋಚನೆ ಹಾಕುವ ಸಾಧ್ಯತೆಯೇ ಹೆಚ್ಚು. ಎದುರಾಳಿಗಳ ಯಾಮಾರಿಸಿ ಬಲಿ ಪಡೆವ ಕ್ರೌರ್ಯತೆ ರಾಘುಗೆ ಸಿದ್ಧಿಸಿದೆ!

ಹದಿನೈದು ದಿನದಲ್ಲಿ ಅಂಬಿಕಾನಂದನಿಗೆ ಗ್ರಹಚಾರ ಕಾದಿದೆಯಾ? ದೆಸೆ ಖುಲಾಯಿಸಲಿದೆಯಾ? ಹಾಗಂತ ರಾಮಚಂದ್ರಾಪುರ ಮಠದ ಮಹಿಮೆ ಬಲ್ಲವರು ಮಾತಾಡಿಕೊಳ್ಳುತ್ತಿದ್ದಾರೆ. ಯಾವುದಕ್ಕೂ, ಅತಿ ರಕ್ತದೊತ್ತಡದ-ಭಾವೋದ್ವೇಗದ ಜೀವಿ ಅಂಬಿಕಾನಂದರ ಮೇಲೆ ಗೃಹ ಇಲಾಖೆ ಒಂದು ನಿಗಾ ಇಡುವುದು ಒಳ್ಳೆಯದು. ಸ್ಥಳೀಯ ಪೊಲೀಸರು; ಎಸ್ಪಿ ದಿಲೀಪ್‌ರಿಂದ ಈ ಕರ್ತವ್ಯಪಾಲನೆ ನಿರೀಕ್ಷಿಸುವಂತಿಲ್ಲ!!

■ ಶುದ್ಧೋಧನ

ನಮ್ಮ ತಾಕತ್ತೇನು ಅಂತ ಮುಂದೆ ನೋಡಿ...

ಥೂತ್ತೇರಿ

ಯಾಹೂ

ಐನೂರು ಮಂಜುನಾಥ್ ಬಜೆಪಿಯ ಉಪಾಧ್ಯಕ್ಷನಾದ ನಂತಲ್ಲ, ಈ ಅನಂತಕುಮಾರನ ಹಾವಳಿಯಿಂದ ಎಡ್ಯೂರಪ್ಪ ತಳ ಹತ್ತುವುದಿಲ್ಲ, ಪಾರ್ಟಿ ಪವರಿಗೆ ಬರುವುದಿಲ್ಲ ಎಂದು ಖಚಿತಪಡಿಸಿಕೊಂಡು ಮಂಜುನಾಥ್ ಮಲ್ಯನ ಪಾರ್ಟಿಗೆ ಹೋಗಿದ್ದನಂತಲ್ಲ, ಆದರೆ ಅಲ್ಲೂಸಲ್ಲದೆ ಕಾಗೋಡು ತಿಮ್ಮಪ್ಪ ಕರೆದರೆಂದು ಕಾಂಗ್ರೆ ಪಾರ್ಟಿಗೆ ಬಂದು 'ಬಂ' ಎದುರು ಸೋತನಂತಲ್ಲ, ಇನ್ನೇನು ಬಿಜೆಪಿ ಅಧಿಕಾರಕ್ಕೆ ಬರುತ್ತದೆಂದು ತಿಳಿದು ಮತ್ತೆ ಪಾರ್ಟಿ ಸೇರಿದ ಐನೂರು ಇಂತಹ ಜಿಗಿದಾಟ ದಿಂದಲೇ ಬಿಜೆಪಿಯಿಂದ ಹೊರಗೂ ಆಲೋಚಿಸುವುದನ್ನು ಕಲಿತನಂತಲ್ಲಾ, ಎಡ್ಯೂರಪ್ಪ ಈಶ್ವರಪ್ಪನಿಗಿಂತಲೂ ಪರವಾಗಿಲ್ಲ ಅನ್ನಬಹುದಾದ ಆಯನೂರ್ ಬಾಯಿ ಮಾಡಿದ ಅನಾಹುತವೆಂದರೆ ಪೂಜಾಗಾಂಧಿ ಕುಮಾರಣ್ಣನನ್ನ ಬಿಟ್ಟು ರಾಮುಲು ಪಾರ್ಟಿ ಸೇರಿ ಮಹಾ ಅಭಿನೇತ್ರಿ ಎನಿಸಿ ಮನೆ ಸೇರಿದಳಂತಲ್ಲಾ, ಥೂತ್ತೇರಿ!

* * * *

"ಕನ್ನಡದ ರಾಷ್ಟ್ರಕವಿ ಕನ್ನಡ ಭಾಷೆಯಲ್ಲಿ ಹುಡುಕಿದರೂ ಸಿಕ್ಕಲಿಲ್ಲ, ಇನ್ನೆಲ್ಲಾ ನಿಮಗೆ ಬಿಟ್ಟಿದ್ದು" ಎಂಬ ವರದಿಯನ್ನು ರಾಷ್ಟ್ರಕವಿ ಶೋಧನಾ ಸಮಿತಿ ಸಿದ್ದರಾಮಯ್ಯನಿಗೆ ಕೊಟ್ಟು ತೆಪ್ಪಗಿರುವಾಗಲೆ ಸಿದ್ದು ನಿಸ್ಸಾರ್ ಅಹಮದ್ ಎಂಬ ಸೂಟುಧಾರಿ ಕವಿಯ ಕಡೆ ಒಲವು ತೋರಿದ್ದಾರಂತಲ್ಲಾ, "ನನ್ನದು ಜಟಕಾ ಸಾಬಿಯ ಭಾಷೆಯಲ್ಲ, ಶ್ರೇಷ್ಠ ಕನ್ನಡದ ಪದಪುಂಜಗಳ ಭಾಷೆ. ಅದಕ್ಕಾಗಿಯೇ ನಿತ್ಯೋತ್ಸವ ಮೂಡಿಬಂದು ಇಂದಿಗೂ ಕನ್ನಡದ ನಾಡೋತ್ಸವ ಗೀತೆಯಾಗಿದೆ" ಎಂದು ಹೆಮ್ಮೆಯಿಂದಲೇ ಹೇಳುತ್ತ ರಣ ಬಿಸಿಲಲ್ಲೂ ಸೂಟು ಟೈ ಬಿಗಿದುಕೊಂಡಿರುವ ನಿಸ್ಸಾರ್ ರಾಷ್ಟ್ರಕವಿಯಾಗುವುದನ್ನು ಚೆಡ್ಡಿಗಳು ಎಂದೂ ಒಪ್ಪುವುದಿಲ್ಲವಲ್ಲ, "ನಮ್ಮ ದೊಡ್ಡ ರಂಗೇಗೌಡರು ನಿಮಗೆ ಕಾಣಲ್ಲವೆ? ನಾವೇ ಪವರಿನಲ್ಲಿದ್ದರೆ ಗೌಡರನ್ನೆ ಮಾಡಿ ನಿರ್ಮಲಾನಂದರ ನೇತೃತ್ವದಲ್ಲಿ ಅದ್ದೂರಿ ಸನ್ಮಾನ ಮಾಡುತ್ತಿದ್ದೆವು" ಎಂದವಂತಲ್ಲಾ ಚೆಡ್ಡಿಗಳು, ಥೂತ್ತೇರಿ!!

* * * *

ಗ್ರಾಮ ಪಂಚಾಯ್ತಿ ಚುನಾವಣೆ ಮುಗಿದು ಅಧ್ಯಕ್ಷ ಉಪಾಧ್ಯಕ್ಷರ ಪದವಿಯ ಮೀಸಲಿಗಾಗಿ ಕರ್ನಾಟಕ ಕಾಯುತ್ತಿರುವ ಈ ವೇಳೆಯಲ್ಲಿ ವಾಟಿಸ್ಸೆ ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಿದರೆ ರಿಂಗಾಯ್ತು;

"ಹಲೋ ನಮಸ್ಕಾರ ಸಾರ್. ಅಂತೂ ನಮ್ಮ ಲೂಸ್ ರಂಗನಿಗೆ ನಾನು ಮಾಡಿದ ಕಾಮೆಂಟು ತಲುಪ್ಯದೆ ಸಾರ್."

"ಲೂಸ್ ರಂಗ ಯಾರು?"

"ಅದೆ ಸಾರ್, ಟೀವಿಲಿ ಬಂದು ಕೂತಗಂಡು ಕೈಲಿ ಕೂದ್ಲಿಡಕಂಡು ಆಟ ಆಡೋನಂಗೆ ಮಾತಾಡ್ತನಲ್ಲ, ಅವುನಿಗೆ ಲೂಸ್ ರಂಗ ಅಂತ ಹೆಸರಿಟ್ಟಿದ್ದಿನಿ ಅವುನೀಗ ಗಡ್ಡ ಟ್ರೀಂ ಮಾಡಿಕೊಂಡು, ಮುಖ ತೊಳಕಂಡು, ಹಲ್ಲುಜ್ಜಿಕಂಡು ಕಾಣಸಿಗತ್ತನೆ. ಅಂತೂ ಪಬ್ಲಿಕ್ಕೆ ಈ ಮಾಧ್ಯಮದೋರನ್ನ ತಿದ್ದಂಗಾಯ್ತು."

"ನಾವು ನಿನ್ನಷ್ಟು ಕೆಟ್ಟಿಲ್ಲ ವಾಟಿಸ್ಸೆ. ಇನ್ನ ವಸಿ ಉಳಿಸಿಗೊಂಡಿದ್ದಿವಿ. ಪಂಚಾಯ್ತಿ ಚುನಾವಣೆ ಯಂಗಾದೊ ಹೇಳು."

"ಹ್ಯಂಗೆ ಅಂದ್ರೆ ಏನೇಳದು ಸಾರ್. ದುಡ್ಡಿದ್ದೋರು ದುಡ್ಡು ಕೊಟ್ರು, ಇಲ್ದೋರು ಕಾರಮಂಡಕ್ಕಿ ಕೊಟ್ರು."

"ಕಾರ ಮಂಡಕ್ಕಿನೂ ಕೊಟ್ರೆ?"

"ಹೌದು ಸಾರ್, ನಮ್ಮ ಹೊಳಲೂರು ರಾಜಪ್ಪ ಅವನೆದ್ದಿ ನಿಲ್ಲಿಸಿದ್ದ. ಅವನ ಜೇಬಲ್ಲಿ ಬರೋಬ್ಬರಿ ಐದುನೂರು ರೂಪಾಯಿ ಇತ್ತು, ಮುನ್ನರೈವತ್ತು ರೂಪಾಯಿ ಕಾರಮಂಡಕ್ಕಿ ತರಿಸಿದ್ದ, ಉಳದ ದುಡ್ನಲ್ಲಿ ಬೆಲ್ಲ, ಹಾಲು, ಕಾಫಿಪುಡಿ ತರಿಸಿ ಕಾಫಿ ಮಾಡಿ ಕೊಟ್ಟ. ಅಂದ್ರೆ ಕಾರ್ಯಕರ್ತರಿಗೆ. ನಿಜವಾಗ್ಲು ಸಾರ್ ಕರ್ನಾಟಕದ ದಲಿತ್ರು, ಹಿಂದುಳದೋರು, ನಿರ್ಗತಿಕರು ಚುನಾವಣೆ ಯಂಗೆ ನ್ಯಡಿಸಿದ್ರೂ ಅಂದ್ರೆ ಆ ಗಾಂಧಿಮಾತ್ಮನಿಗೂ ಸಂತೋಷ ಆಗಂಗೆ ನ್ಯಡಿಸಿದ್ರು ಸಾರ್."


"ಪಂಚಾಯ್ತಿ ಚುನಾವಣೆ ಅಂಗೆ ಅಲವ ನ್ಯಡಿಬೇಕಾಗಿರದು?"

"ಅಂಗೆ ನ್ಯಡಿಬೇಕು ಸಾರ್. ಅಂಗೂ ನ್ಯಡದೊ. ದುಡ್ಡಿದ್ದೋರು ಯಲ್ಲಮ್ಮನ ಜಾತ್ರೆನೂ ನ್ಯಡಿಸಿದ್ರು. ನಮ್ಮೂರಲ್ಲಿ ಒಂದೇ ಮನಿಂದ ಇಬ್ರು ನಿಂತಿದ್ರು. ಇಬ್ಬರಲ್ಲೊಬ್ಬ ಗೆಲ್ತಿವಿ ಬುಡಿ ಅಂದುಕೊಳ್ಳಿಲ್ಲ, ಅಣ್ಣ ಮೂರು ಲಕ್ಷ ಸುರುದ, ತಮ್ಮ ಆರು ಲಕ್ಷ ಸುರದ, ಕಡಿಗೆ ಅಣ್ಣನೇ ಗೆದ್ದ."

"ಅಣ್ಣ ಯಾವ ಪಾರ್ಟಿ?"

"ದಳ."

"ಮತ್ತೆ ದ್ಯಾವೇಗೌಡ್ರು ನಮ್ಮ ಪಾರ್ಟಿಯೋರು ಹಣ ಖರ್ಚು ಮಾಡಲಿಲ್ಲ ಅಂದ್ರಲ್ಲಾ."



"ಯಲ್ಲಾ ಪಾರ್ಟಿಯೋರು ಹೇಳದೆ ಅಂಗಲ್ಲವಾ ಸಾರ್. ಆದ್ರೆ ಬಾಟಮ್ ಲೆವಲ್ಲಲ್ಲಿ ವರ್ಕು ಮಾಡಿದೋರಿಗೆ ಗೊತ್ತಾಯ್ತದೆ."

"ನಿಮಗೆ ಎಷ್ಟು ಸೇರಿದಂಗಾಯ್ತು?"

"ಕಾಂಗ್ರೆಸ್ ಕ್ಯಾಂಡೀಡೇಟ್ ಒಂದು ಸಾವಿರ ಕೊಟ್ಟ. ದಳದೋನು ಎರಡು ಸಾವಿರ ಕೊಟ್ಟ, ಅಂಗಾಗಿ ಮೂರು ಸಾವಿರ ಸೇರಿದಂಗಾಯ್ತು ಸಾರ್."

"ಓಟ್ಯಾರಿಗಾಕಿದ್ರಿ?"

"ನಾನು ಕಾಂಗ್ರೆಸ್ಸಿಗಾಕಿದೆ. ನನ್ನೆಡ್ತಿ ದಳಕ್ಕಾಕಿದ್ಲು. ಯಾರಿಗೂ ಮೋಸ ಮಾಡಿದಂಗೆ ಆಗಬಾರದಲ್ಲವಾ ಸಾರ್."

"ಒಳ್ಳೆ ತೀರ್ಮಾನ ತಗಂಡಿದ್ರಿ ಬುಡು."

"ಯಾವನ ರುಣಾನೂ ಇಟಗಬಾರ್ದು ಸಾರ್. ಯಾರು ಬಂದ್ರೂ ಮಾಡದು ಅಷ್ಟರಲ್ಲೇ ಅದೆ."

"ಅಂಗರೆ ಪಂಚಾಯ್ತಿಯಿಂದ ಏನೂ ಆಯ್ತಾಯಿಲ್ಲವೆ?"

"ಆಯ್ತಾಯಿದೆ ಸಾರ್. ಗ್ರಾಮೀಣಾಭಿವೃದ್ಧಿಗೆ ಬರೋ ಹಣ ಹಂಚಿಗಂಡು ಮನಿಗೆ ಬತ್ತರೆ. ಅವಿರದೆ ಅದಕ್ಕೆ ಅನ್ನಕಂಡವ್ರೆ. ಅಮ್ಯಾದ್ಮಿ ತರ ಪಾರ್ಟಿ ಬರೊವರಿಗೂ ಈ ಪಂಚಾಯ್ತಿ ಹಣೆಬರನೆ ಇಷ್ಟು."

"ಅಂಗಂತಿಯಾ?"

"ನಿಜ ಸಾರ್. ಈ ಯವಸ್ಥೆ ಯಾರಿಗೂ ಬೇಕಾಗಿಲ್ಲ ಸಾರ್. ಅಬ್ದುಲ್ ನಜೀರ್ ಸಾಬರು ಮಂಡಳಿ ಪಂಚಾಯ್ತಿ ಬಿಲ್ ಪಾಸ್ ಮಾಡುವಾಗ ಕೋರಮ್ಮೆ ಇರಲಿಲ್ಲವಂತೆ. ಅವತ್ತಿನಿಂದ ಇವತ್ತಿಗೂ ಈ ಪಂಚಾಯ್ತಿ ವ್ಯವಸ್ಥೆ ಯಾರಿಗೂ ಬೇಕಾಗಿಲ್ಲ. ಪತ್ರಿಕೆಯೋರಿಗೂ ಬ್ಯಾಡವಾಗಿದೆ ಸಾರ್."

"ಪತ್ರಿಕೆಯೋರು ಪಂಚಾಯ್ತಿ ಸುದ್ದಿ ಬರಿಯಕ್ಲಾಯ್ತದ?"

"ಬರಿಯದು ಬ್ಯಾಡಿ ಸಾರ್, ರಿಸಲ್ಟ್ ಹೇಳಕ್ಕೂ ಚೌಕಾಸಿ ಮಾಡಿದ್ರು. ನಿಮಗೆ ಆಶ್ಚರ್ಯ ಆಗಬಹುದು ಸಾರ್. ರಿಸಲ್ಟ್ ಬಂದ ಮಾರನೆ ದಿನ ಪ್ರಜಾವಾಣಿ ತಗಂಡೆ. ಪಂಚಾಯ್ತಿ ರಿಜಲ್ಟ್ ಸುದ್ದಿನೆ ಇರಲಿಲ್ಲ, ಹೋಗ್ಲಿ ಅಂತ ಟೀವಿ ಹಾಕಿದೆ. 'ಬಿ'ಟಿವಿ ಬ್ರಾಂಬ್ರು ಭರೀ ಬಿಜೆಪಿ ಹೆಚ್ಚು ಸೀಟು ತಗತ್ತಾ ಅದೆ ಅಂತ ಹೇಳಿದ್ರೆ ವರತು ಯಾವ ಪಾರ್ಟಿ ಎಷ್ಟು ತಗಂತು ಅಂತ ಹೇಳಲಿಲ್ಲ."

"ಪಂಚಾಯ್ತಿ ಚುನಾವಣೇಲಿ ಪಾರ್ಟಿ ಸ್ಪರ್ಧೆ ಮಾಡಿರಲಿಲ್ಲ, ಅದ್ಕೆ ಗೆದ್ದ ಪಾರ್ಟಿ ಸಂಖ್ಯೆ ಹೇಳಲಿಲ್ಲ."

"ಇದೇನು ಸಾರ್ ಹಿಂಗಂತೀರಿ? ಸಿದ್ದರಾಮಯ್ಯ ನಾವೇ ಜಾಸ್ತಿ ಬಂದೊ ಅಂತನೆ. ಜೋಷಿ ಕಾಂಗ್ರೆಸ್ಸಿಗೆ ಸರಿಯಾಗಿ ಬುದ್ಧಿ ಕಲಿಸಿದ್ದಿವಿ ಅಂತನೆ. ದೇವೇಗೌಡ್ರು ಬಿಬಿಎಂಪಿ ಚುನಾವಣೆ ಬರ್ಲಿ ನಮ್ಮ ತಾಕತ್ತು ಏನು ಅನ್ನದ ತೋರ್ಸ್ತಿ ಅಂತನೆ. ಇಂತವುರಿಗೆಲ್ಲಾ ಮಾಧ್ಯಮ ಉತ್ತರ ಕೊಡಬೇಕಾಗಿತ್ತಲ್ಲವೆ."

"ಅಸೆಂಬ್ಲಿ ರಿಸಲ್ಟ್ ತರವೆ ಇದೆ ಅಲ್ಲವಾ."

"ಒಂಥರಾ ಅಂಗೆ ಅದೆ. ಆದ್ರು ನಮ್ಮ ದ್ಯಾವೇಗೌಡ್ರ ಮಾತ ಕೇಳಿ ಒಂದ್ ಜೋಕ್ ನೆನಪಿಗೆ ಬತ್ತು ಸಾರ್."

"ಏನ್ ಜೋಕಪ್ಪ ಅದು?"

"ನಮ್ಮ ದ್ಯಾವೇಗೌಡ್ರು ತರನೇ ಒಬ್ಬ ಯಜಮಾನ ನಮ್ಮೂರಲ್ಲಿದ್ದ. ಪಕ್ಕದಲ್ಲಿ ಮನಿಗಿದ್ದ ಹೆಂಡತಿ ಇದ್ಯಾಕೆ ಸುಮ್ಮನಾದ್ರಲ್ಲ ಅಂದಳಂತೆ. ಅದ್ಕೆ ಗೌಡ್ರು ಬೆಳಗಿನ ಜಾಮದಲ್ಲಿ ಎಬ್ಬಿಸು ಅಂದನಂತೆ. ಅಂಗೆ ಇವರ ತಾಕತ್ತು ನೋಡಕ್ಕೆ ಬಿಬಿಎಂಪಿ ಎಲೆಕ್ಷನ್ ಬರಬೇಕು."

"ಗೌಡ್ರ ಅಷ್ಟು ಸುಲಭ ಅನ್ನಕಬ್ಯಾಡ."

"ಅದೇನೋ ನಿಜ ಸಾರ್. ಗೆಲ್ಲಕಾಗದೆಯಿದ್ರು ಸೋಲುಸ್ತರೆ. ಮೈಸೂರಲ್ಲಿ ಆ ವಿಶ್ವನಾಥನ ಕತೆ ಏನು ಮಾಡಿದ್ರು ನೋಡಿ!"

ಥೂತ್ತೇರಿ!!! ■

ಡಿಸಿಪಿ ಫಿಕ್ಸ್, ಕಮೀಷನರ್ ಮಿಸ್

05 ⏮

ಕಾಲವಾಡ ಕಾನ್ಸ್‌ಟೇಬಲ್‌ಗಳ ವಿರುದ್ಧ ದೂರು ಕೊಟ್ಟಿದೆ. ಪೊಲೀಸ್ ಮಹಾನಿರ್ದೇಶಕರು ಆ ದೂರನ್ನು ಮರುದಿನ ಹುಬ್ಬಳ್ಳಿಗೆ ಕಳಿಸಿಕೊಟ್ಟಿದ್ದಾರೆ. ಕೂಡಲೇ ಹಳೇ ಹುಬ್ಬಳ್ಳಿ ಠಾಣೆಯಲ್ಲಿ ನರೇಂದ್ರ ಮತ್ತು ಕಾಲವಾಡರ ವಿರುದ್ಧ ದರೋಡೆ ಪ್ರಕರಣ ಕೂಡ ದಾಖಲಾಗಿದೆ.

ಆದರೆ, ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್ ಅದೆಂಥ ಚಾಲಾಕಿ ಎಂದರೆ ನರೇಂದ್ರ ಮತ್ತು ಕಾಲವಾಡರಿಂದ ದೂರು ಕೊಟ್ಟ, ವರದಿಗಾರರ ಮೇಲೆಯೇ ಪ್ರತಿದೂರು ದಾಖಲಿಸುವಂತೆ ಸೂಚಿಸಿದ್ದಾನೆ. ಆ ಪ್ರಕಾರ ಪೊಲೀಸರ ಮೇಲೆ ಹಲ್ಲೆ ನಡೆಸಿದ ಆರೋಪದಡಿಯಲ್ಲಿ ಅದೇ ಠಾಣೆಯಲ್ಲಿ ವರದಿಗಾರರ ವಿರುದ್ಧವೂ ಪ್ರಕರಣ ದಾಖಲಾಗಿದೆ. ಒಂದು ವೇಳೆ ನಿಜಕ್ಕೂ ಈ ವರದಿಗಾರರು ಪೊಲೀಸ್ ಪೇದೆಗಳ ಮೇಲೆ ಹಲ್ಲೆ ಮಾಡಿದ್ದೇ ನಿಜವಾದರೆ ಹಲ್ಲೆ ನಡೆದ ದಿನವೇ ಅವರು ಯಾಕೆ ದೂರು ಕೊಡಲಿಲ್ಲ? ಬೆಂಗಳೂರಿನಿಂದ ಪೊಲೀಸ್ ಮಹಾನಿರ್ದೇಶಕರು ಈ ಪೊಲೀಸರ ವಿರುದ್ಧ ಪ್ರಕರಣ ದಾಖಲಿಸುವಂತೆ ಸೂಚನೆ ಕೊಟ್ಟ ನಂತರವಷ್ಟೇ ಯಾಕೆ ಪ್ರತಿದೂರು ದಾಖಲಿಸಿದರು? ಈ ಪ್ರಶ್ನೆಗಳಿಗೆ ಪೊಲೀಸರ ಬಳಿ ಉತ್ತರವಿಲ್ಲ.

ಪ್ರತಿದೂರು ದಾಖಲಿಸುವ ಮೂಲಕ ಸ್ಟಿಂಗ್ ಆಪರೇಷನ್ ವರದಿಯನ್ನು ಸುದ್ದಿವಾಹಿನಿಯಲ್ಲಿ ಪ್ರಸಾರ ಮಾಡದಂತೆ ಒತ್ತಡ ಹೇರುವ ಉದ್ದೇಶದಿಂದ ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ ಈ ಪ್ರತಿದೂರು ದಾಖಲಿಸುವ ತಂತ್ರ ಹೂಡಿದರೂ ಅದು ಫಲಕಾರಿಯಾಗಲಿಲ್ಲ, ಸ್ಟಿಂಗ್ ಆಪರೇಷನ್ ಸುದ್ದಿ ಕೊನೆಗೂ ಪ್ರಸಾರ ಆಗಿಯೇಬಿಟ್ಟಿತು.

ಮಾಡಿದ ತಪ್ಪನ್ನು ಒಪ್ಪಿಕೊಂಡು ತಿದ್ದಿಕೊಳ್ಳುವುದನ್ನು ಬಿಟ್ಟು ತಪ್ಪನ್ನು ಬೊಟ್ಟು ಮಾಡಿ ತೋರಿಸಿದವರ ಮೇಲೆಯೇ ಎಗರಿಬೀಳುವ ಹುಬ್ಬಳ್ಳಿ-ಧಾರವಾಡ ಪೊಲೀಸರ ದಾರ್ಷ್ಟ್ಯವನ್ನು ಗೃಹಸಚಿವ ಕೆ.ಜೆ. ಜಾರ್ಜ್ ಮತ್ತು ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಗಂಭೀರವಾಗಿ ಪರಿಗಣಿಸಬೇಕಿದೆ. ಇಲ್ಲದಿದ್ದರೆ ಹುಬ್ಬಳ್ಳಿ ಪೊಲೀಸರು ಅವರ ಕೈಮೀರಿ ಹೋಗುವ ಅಪಾಯವಿದೆ.


ಮೂರು ಮಿಕಗಳು ಬಲಿ

ಕ್ರಿಕೆಟ್ ಬೆಟ್ಟಿಂಗ್ ದಂಧೆಯಲ್ಲಿ ಪೊಲೀಸರು ಹೇಗೆ ಶಾಮೀಲಾಗಿದ್ದಾರೆ ಎಂಬ ಸುದ್ದಿ ಸ್ಟಿಂಗ್ ಆಪರೇಷನ್‌ನಿಂದ ಹೊರಬಿದ್ದಿದ್ದೇ ತಡ ನರೇಂದ್ರ ಮತ್ತು ಕಾಲವಾಡ ಇಬ್ಬರನ್ನೂ ಪೊಲೀಸ್ ಕಮೀಷನರ್ ರವೀಂದ್ರ ಪ್ರಸಾದ್ ಸೇವೆಯಿಂದ ಸಸ್ಪೆಂಡ್ ಮಾಡಿದ್ದಾರೆ. ಡಿಸಿಪಿ ಹನುಮಂತರಾಯನನ್ನು ಸಸ್ಪೆಂಡ್ ಮಾಡುವುದಕ್ಕೆ ಆತನಿಗೆ ಅಧಿಕಾರ ಇಲ್ಲದ ಕಾರಣ ಸರ್ಕಾರಕ್ಕೆ ವರದಿ ನೀಡಿ ಅವರನ್ನು ಸಸ್ಪೆಂಡ್ ಮಾಡುವಂತೆ ಶಿಫಾರಸ್ಸು ಮಾಡಿದ್ದಾರೆ. ಆಗಷ್ಟೇ ಬೆಂಗಳೂರಿನಲ್ಲಿ ಒಂದಂಕಿ ಲಾಟರಿ ದಂಧೆಯ ಕಿಂಗ್‌ಪಿನ್ ಜೊತೆ ಹಿರಿಯ ಪೊಲೀಸ್ ಅಧಿಕಾರಿಗಳೂ ಶಾಮೀಲಾಗಿರುವುದು ಹೊರಬಿದ್ದು ಗೃಹಮಂತ್ರಿ ಜಾರ್ಜ್‌ರ ಪಿತ್ಥ ನೆತ್ತಿಗೇರಿದ್ದು ಇನ್ನೂ ಇಳಿದಿರಲಿಲ್ಲ. ಆಗಲೇ ಇಂತಹುದ್ದೊಂದು ಘಟನೆ ಹುಬ್ಬಳ್ಳಿಯಲ್ಲಿ ನಡೆದ ಬಗ್ಗೆ ಕಮೀಷನರ್ ರವೀಂದ್ರ ಪ್ರಸಾದರ ವರದಿ ಕೈಸೇರಿದ್ದು ಅವರನ್ನು ಮತ್ತಷ್ಟು ಕೆರಳಿಸಿತ್ತು. ಹಾಗಾಗಿ, ವರದಿ ಕೈಸೇರಿದ್ದೇ ತಡ ಡಿಸಿಪಿ ಹನುಮಂತರಾಯನನ್ನೂ ಸಸ್ಪೆಂಡ್ ಮಾಡಿ ಆದೇಶ ಹೊರಡಿಸಿಬಿಟ್ಟರು. ಸದ್ಯ ಮೂವರೂ ಮನೆಯಲ್ಲಿದ್ದಾರೆ.

■ ವರದಿಗಾರ

ಟೆಂಡರೂ ಇಲ್ಲ, ಸಾಮಾಜಿಕ ನ್ಯಾಯವೂ ಇಲ್ಲ

ಬಾಗಲಕೋಟೆ ಪಾಲಿಕೆಯಲ್ಲಿ 'ರುದ್ರ'ತಾಂಡವ


ಡಿ.ಸಿ.ಮೇಘಣ್ಣವರ್

ಬಾಗಲಕೋಟೆ ನಗರಪಾಲಿಕೆಗೆ ಭರ್ಜರಿ ಗ್ರಹಣವೊಂದು ಹಿಡಿದಿದೆ. ಅಸಲಿಗೆ ಹಾನಗಲ್ ತಾಲ್ಲೂಕಿನಲ್ಲಿ ತಹಸೀಲ್ದಾರ್ ಆಗಿದ್ದ ಈ ಗ್ರಹಣವನ್ನು ಎತ್ತಂಗಡಿ ಮಾಡಿಸಿತಂದು ಬಾಗಲಕೋಟೆಗೆ ಬಡಿದಿದ್ದೇ ಇಲ್ಲಿನ ಶಾಸಕ ಹುಲ್ಲಪ್ಪ ಮೇಟಿಯೆಂಬ ಮಾತುಗಳು ಕೇಳಿಬರುತ್ತಿವೆ. ಅದಕ್ಕೆ ತಕ್ಕಂತೆ ಗ್ರಹಣ ಬಡಿದಿರುವ ಪಾಲಿಕೆಯ ವ್ಯವಹಾರಗಳು ಕೂಡಾ ಶಾಸಕನಿಗೆ ನೆರವಾಗುವಂತೆಯೇ ಸರಿದಾಡುತ್ತಿವೆ. ಅಂದಹಾಗೆ, ಬಾಗಲಕೋಟೆ ನಗರಪಾಲಿಕೆಯ ಕಮೀಷನರ್ ಎಸ್.ಎನ್. ರುದ್ರೇಶನೇ ಆ ಗ್ರಹಣ!

ಹಗಲುದರೋಡೆಗೆ ಪರ್ಮಿಟ್ಟು ಪಡೆದವನಂತೆ ಈತ ನಡೆಸುತ್ತಿರುವ ಅಂದಾದುಂಧಿಯಿಂದ ಇಡೀ ಬಾಗಲಕೋಟೆ ನಗರದ ಜನರೇ ಸುಸ್ತೆದ್ದು ಹೋಗಿದ್ದಾರೆ. ಬೀದಿವ್ಯಾಪಾರಿಗಳಿಂದ ಹಿಡಿದು ಸಾಲಸೋಲ ಮಾಡಿ ಮನೆಕಟ್ಟಿಕೊಳ್ಳುತ್ತಿರುವ ಮಧ್ಯಮವರ್ಗದ ಅಮಾಯಕರವರೆಗೆ ಈತನ ಧನದಾಹಿ ತಾಪಕ್ಕೆ ನಲುಗಿಹೋಗುತ್ತಿದ್ದಾರೆ. ರುದ್ರೇಶನ ತಿನ್ನಾಟವನ್ನು ಕಂಡು ಸ್ವತಃ ಪಾಲಿಕೆ ಪೊಲಿಟಿಷಿಯನ್‌ಗಳೇ ಬೇಸ್ತುಬಿದ್ದಿರುವಾಗ ಇನ್ನು ಬಡಪಾಯಿ ಜನಗಳ ಪಾಡು ಹೇಗಿರಬೇಡ. ಹಗಲು ಆಫೀಸಿನಲ್ಲಿ ಫೈಲುಗಳು ಕದಲಾಡುವುದಕ್ಕಿಂತ ರಾತ್ರಿ ಇವನ ಮನೆಯಲ್ಲಿ ಕಡತಗಳು ವಿಲಿವಿಲಿ ಒದ್ದಾಡುವುದೇ ಹೆಚ್ಚು, ಇದಕ್ಕೋಸ್ಕರ ಪಾಲಿಕೆಯಲ್ಲಿ ಸಮಾನ'ಧನ'ಸ್ಕರ ಭ್ರಷ್ಟಕೂಟವೊಂದನ್ನೇ ರಚಿಸಿಕೊಂಡಿದ್ದಾನೆ. ಪ್ರಧಾನ ಇಂಜಿನಿಯರ್ ಕಾಂಬ್ಳೆ, ಜೂನಿಯರ್ ಇಂಜಿನಿಯರ್‌ಗಳಾದ ಕುರಿ, ಪಾಟೀಲ್, ಅಲರವಿ, ಹೆಲ್ತ್ ಇನ್ಸ್‌ಪೆಕ್ಟರ್ ಕಲಾದಗಿ ಹಾಗೂ ಗುತ್ತಿಗೆದಾರರು ಅಂತ ಕರೆದುಕೊಳ್ಳುವ ಸಿಂದಗಿ, ಆಲೋರ, ಶರಬಣ್ಣವರ ಮತ್ತು ಮೇಟಿ ಮೊದಲಾದವರೇ ಈ ಕೂಟದ ಸದಸ್ಯಗಣಗಳು. ಅದರಲ್ಲೂ ಹೆಲ್ತ್ ಇನ್ಸ್‌ಪೆಕ್ಟರ್ ಕಲಾಧಗಿ, ರುದ್ರೇಶನ ಬಲಗೈ ಇದ್ದಂತೆ.

ಬಾಗಲಕೋಟೆಗೆ ವಕ್ಕರಿಸಿದ ಕೆಲ ತಿಂಗಳಲ್ಲೇ ಈತ ಮಾಡಿದ ಘನಂದಾರಿ ಕೆಲಸವೆಂದರೆ ಕಾಟನ್‌ಪೇಟೆಯಲ್ಲಿರುವ ವ್ಯಾಪಾರಿಗಳನ್ನು ಎಕ್ಕಲೆಬ್ಬಿಸಿದ್ದು. ಇದು ನಗರದ ಪ್ರಮುಖ ವ್ಯಾಪಾರಿ ಕೇಂದ್ರ. ಒಂಥರಾ ಬಾಗಲಕೋಟೆ ಆರ್ಥಿಕತೆಯ ಹೃದಯಭಾಗವಿದ್ದಂತೆ. ಮಾರುಕಟ್ಟೆ ಅಂದಮೇಲೆ ಅಲ್ಲೊಂದಷ್ಟು ಅವ್ಯವಸ್ಥೆ ಇದ್ದೇ ಇತ್ತು, ಅದನ್ನು ಸರಿಪಡಿಸಬೇಕೆಂಬುದು ಖುದ್ದು ಅಲ್ಲಿನ ವ್ಯಾಪಾರಿಗಳ ಅಳಲೂ ಆಗಿತ್ತು, ಸಮಸ್ಯೆಯನ್ನು ವ್ಯವಸ್ಥಿತವಾಗಿ ಬಗೆಹರಿಸುವ ಮಾರ್ಗಗಳೂ ಇದ್ದವು. ಆದರೆ ರುದ್ರೇಶ ಅಂತಹ ರಿಸ್ಕುಗಳಿಗೆ ಕೈಹಾಕದೆ ಏಕಾಏಕಿ ಅಲ್ಲಿರುವ ವ್ಯಾಪಾರಿಗಳನ್ನು ಖಾಲಿ ಮಾಡಿಸಿ ಅವರನ್ನೆಲ್ಲ ಬೀದಿಗೆ ತಂದು ನಿಲ್ಲಿಸಿದ. ಅಸಲಿಗೆ, ನಗರವನ್ನು ಶುದ್ಧೀಕರಿಸುವ ಮತ್ತು ಜನರ ಕೂಗುಗಳಿಗೆ ಸ್ಪಂದಿಸುವ ಇರಾದೆ ಆತನಿಗೆ ಇದ್ದಿದ್ದರೆ ಮೊದಲು ದೊಡ್ಡದೊಡ್ಡ ಕಾಂಪ್ಲೆಕ್ಸ್‌ಗಳು, ಹೋಟೆಲ್‌ಗಳು ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಿಂದ ಆಗುತ್ತಿರುವ ಪಾರ್ಕಿಂಗ್ ಕಿರಿಕಿರಿಗೆ ಒಂದು ಬ್ರೇಕ್ ಹಾಕಬೇಕಿತ್ತು. ತಮ್ಮ ವ್ಯಾಪಾರ ವಹಿವಾಟನ್ನಷ್ಟೇ ಗಮನದಲ್ಲಿರಿಸಿಕೊಂಡಿರುವ ಇವರು ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಿಕೊಳ್ಳದೆ ಸಾರ್ವಜನಿಕ ಸ್ಥಳಗಳಲ್ಲಿ, ಫುಟ್‌ಪಾತ್‌ಗಳಲ್ಲಿ, ರಸ್ತೆಯ ಮೇಲೆ ವಾಹನ ನಿಲುಗಡೆ ಮಾಡಿಸಿ ವಿಪರೀತ ಕಿರಿಕಿರಿ ಉಂಟುಮಾಡುತ್ತಿದ್ದಾರೆ. ದೇವಿಪ್ರಸಾದ ಹೋಟೆಲ್ ಅಂತೂ ಆಸ್ಪತ್ರೆಯ ಜಾಗವನ್ನೇ ತಮ್ಮ ಪಾರ್ಕಿಂಗ್ ಅಡ್ಡೆಯನ್ನಾಗಿಸಿಕೊಂಡಿದೆ. ಇವುಗಳ ಕುರಿತು ಪತ್ರಿಕೆಗಳಲ್ಲಿ ಬಂದರೂ ಚಕಾರವೆತ್ತದ ರುದ್ರೇಶ ಬಡಪಾಯಿಗಳ ಮೇಲೆ ಮುಗಿಬಿದ್ದು ತಾನೊಬ್ಬ ಡೈನಾಮಿಕ್ ಅಧಿಕಾರಿ ಅಂತ ಪೋಸು ನೀಡಿದ್ದಾನೆ. ಹಾಗೆನೋಡಿದರೆ, ತನ್ನ ಡೀಲ್‌ಗಳ ರೇಟ್ ಹೆಚ್ಚಿಸಿಕೊಳ್ಳಲು ರುದ್ರೇಶ ಎಸೆದ ಪಗಡೆ ದಾಳ ಇದು ಅಂತ ಸ್ವತಃ ಆತನ ಕಚೇರಿಯ ಸಿಬ್ಬಂದಿಗಳೇ ಮಾತನಾಡಿಕೊಳ್ಳುತ್ತಿದ್ದಾರೆ.


ಎಸ್ಸಿ ಎಸ್ಟಿ ಟೆಂಡರ್‌ಗಳೇ ಗೋತಾ


ಒಂದು ಲಕ್ಷದಿಂದ ಐದು ಲಕ್ಷದವರೆಗೆ ಯಾವುದೇ ಟೆಂಡರ್ ಆಗಲಿ ಅಥವಾ ಖರೀದಿಗಳಾಗಲಿ ಆ ಬಗ್ಗೆ ನೋಟಿಸ್ ಬೋರ್ಡ್‌ಗೆ ಅಥವಾ ದಿನಪತ್ರಿಕೆಗೆ ಜಾಹೀರಾತು ನೀಡಬೇಕೆಂಬುದನ್ನು ಸ್ವತಃ ಸರ್ಕಾರಿ ಆದೇಶ ಎಸ್.ಡಬ್ಲ್ಯೂಡಿ 34 ಬಿಸಿಎ ಅಧಿನಿಯಮವೆ ಉಲ್ಲೇಖಿಸುತ್ತದೆ. ಅಲ್ಲದೇ ಸರಿಸುಮಾರು 20% ರಷ್ಟು ಕಾಮಗಾರಿ/ಖರೀದಿ ಗುತ್ತಿಗೆಗಳನ್ನು ದಲಿತ ಸಮುದಾಯದ ಗುತ್ತಿಗೆದಾರರಿಗೆ ನೀಡಬೇಕೆನ್ನುವ ನಿಬಂಧನೆಯೂ ಇದೆ. ಪಾಲಿಕೆ ಕಮೀಷನರ್ ರುದ್ರೇಶ ಇದಕ್ಕೇನು ಹೊರತಲ್ಲ, ಆದರೆ ತನಗೂ ಇಂತಹ ಕಾನೂನುಗಳಿಗೂ ಸಂಬಂಧವೇ ಇಲ್ಲವೆನ್ನುವಂತೆ ವರ್ತಿಸುತ್ತಿರುವ ರುದ್ರೇಶ ಪಿನಸೋಇಚ್ಛೆ ಖರೀದಿ ನಡೆಸುತ್ತಿದ್ದಾನೆ. ಸಣ್ಣ ಗುಂಡುಪಿನ್ನುಗಳಿಂದ ಹಿಡಿದು ಸಿಸಿ ಕ್ಯಾಮೆರಾ ಖರೀದಿವರೆಗೆ ಯಾವುದೇ ಟೆಂಡರ್ ಕರೆದ ಉದಾಹರಣೆ ಇಲ್ಲ, ಎಲ್ಲಾ ಒಳಗಿಂದೊಳಗೆ ಡೀಲ್ ಕುದುರಿಸಿಕೊಂಡು ಕೈ ಬಿಸಿ ಮಾಡಿದವರಿಗೆ ಗುತ್ತಿಗೆ ನೀಡುತ್ತಿದ್ದಾನೆನ್ನುವ ಆರೋಪವನ್ನು ಇದು ಪುಷ್ಟೀಕರಿಸುತ್ತದೆ.


ಈ ಬಗ್ಗೆ ಮಾಧ್ಯಮಗಳಾಗಲಿ ಅಥವಾ ಸಾರ್ವಜನಿಕರಾಗಲಿ ಪ್ರಶ್ನಿಸಲು ಮುಂದಾದರೆ ಅದಕ್ಕೂ ಒಂದು ಉಪಾಯ ರೆಡಿ ಮಾಡಿಟ್ಟುಕೊಂಡಿದ್ದಾನೆ. ಪ್ರಸರಣ ಸಂಖ್ಯೆ ನೂರನ್ನೂ ದಾಟದ ಕೆಲವೊಂದು ಪತ್ರಿಕೆಗಳಲ್ಲಿ ಜಾಹಿರಾತು ಬರುವಂತೆ ಮಾಡಿ ಅವುಗಳನ್ನೇ ತನ್ನ ಫೈಲಿಗೆ ಪೋಣಿಸಿ ಇಟ್ಟುಕೊಂಡಿರುತ್ತಾನೆ. ಅವುಗಳನ್ನೇ ಮುಖಕ್ಕೆ ಹಿಡಿದು 'ನೋಡ್ರಪ್ಪ ಜಾಹಿರಾತು ಕೊಟ್ಟೇ ನಾನು ಟೆಂಡರ್ ಕರೆದದ್ದು, ಬಿಡ್ಡಿಂಗ್ ಯಾರು ಕಡಿಮೆ ಕೋಟ್ ಮಾಡಿದ್ದಾರೊ ಅವರಿಗೇ ಟೆಂಡರ್ ನೀಡಿದ್ದೇನೆ' ಅಂತ ಜಬರ್‌ದಸ್ತ್ ಮಾಡಿ ಸಾಗಹಾಕುತ್ತಾನೆ. ಇತ್ತ ಜಾಹಿರಾತು ಕೊಟ್ಟ ಹಾಗೂ ಇರಬೇಕು, ಅದು ಜನರ ಕಣ್ಣಿಗೆ ಬಿದ್ದಿರಲೂ ಬಾರದು ಎಂಬ ಉಪಾಯ ರುದ್ರೇಶನದ್ದು.

ಈ ಬಗ್ಗೆ ದಲಿತ ಗುತ್ತಿಗೆದಾರರು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ, ಜಿಲ್ಲಾಧಿಕಾರಿ ಮೇಘಣ್ಣವರಿಗೆ, ಪೌರಾಡಳಿತ ಆಯುಕ್ತರಿಗೆ ಮತ್ತು ಎಸ್‌ಟಿ ಎಸ್‌ಟಿ ಸೆಲ್‌ಗೆ ರುದ್ರೇಶ್‌ನ ವಿರುದ್ಧ ದೂರು ನೀಡಿದ್ದಾರೆ. ಆದರೆ ಭಂಡತನಕ್ಕೆ ಬಿದ್ದಿರುವ ರುದ್ರೇಶ ಅವುಗಳಿಗೆ ಕ್ಯಾರೆ ಎನ್ನದೇ ತನ್ನ ಪಾಡಿಗೆ ತಾನು ಹಗಲುದರೋಡೆ ಮುಂದುವರೆಸಿಕೊಂಡೇ ಬಂದಿದ್ದಾನೆ. ಮೇಲಧಿಕಾರಿಗಳಿಗೆ ಮತ್ತು ವಿಚಾರಣಾಧಿಕಾರಿಗಳಿಗೆ ಅದೇನು ಅಮೇಧ್ಯ ಮೇಯಿಸಿದ್ದಾನೊ, ಅವರು ಕೂಡಾ 'ಏನಪ್ಪಾ ನಿನ್ನ ವಿರುದ್ಧ ಇಂತಿಂತ ದೂರು ಬಂದಿವೆಯಲ್ಲ?' ಅಂತ ತಡವಿಕೊಳ್ಳುವ ಪ್ರಯತ್ನವನ್ನೂ ಮಾಡುತ್ತಿಲ್ಲ.

ಹೋಗಲಿ ಹಾಗೆ ನಡೆಸುವ ಕಾಮಗಾರಿಗಳಾದರೂ ಗುಣಮಟ್ಟದವಾಗಿರುತ್ತವಾ, ಎಂದರೆ ಅದೂ ಇಲ್ಲ, ಮೊನ್ನೆ ಲಕ್ಷಾಂತರ ವೆಚ್ಚದಲ್ಲಿ ಡಸ್ಟ್‌ಬಿನ್, ಫೈಬರ್ ರೋಡ್ ಬ್ರೇಕರ್‌ಗಳು, ಫೈಬರ್ ಟಾಯ್ಲೆಟ್‌ಗಳನ್ನು ಖರೀದಿಸಿ ನಗರದಲ್ಲಿ ಅಳವಡಿಸಿದ್ದ, ಅವುಗಳ ಉದ್ಘಾಟನೆಯ ದಿನ ಮಾಧ್ಯಮಗಳ ಮುಂದೆ ನಿಂತು ಪೋಜುಕೊಟ್ಟಿದ್ದೇ ಕೊಟ್ಟಿದ್ದು, ಆದರೆ ಎರಡೇ ದಿನಕ್ಕೆ ಡಸ್ಟ್‌ಬಿನ್‌ಗಳು ತುಂಡಾಗಿ ಬಿದ್ದಿದ್ದರೆ, ರೋಡ್‌ಬ್ರೇಕರ್‌ಗಳಂತು ರಸ್ತೆಯಲ್ಲೇ ಅಪ್ಪಚ್ಚಿಯಾಗಿದ್ದವು. ಈ ಕುರಿತು ಕೇಳೋಣವೆಂದು ಅದೇ ಮಾಧ್ಯಮದವರು ಸಂಪರ್ಕಿಸಲು ಯತ್ನಿಸಿದರೆ ರುದ್ರೇಶ ಕೈಗೇ ಸಿಗಲಿಲ್ಲ.


ಹುಲ್ಲಪ್ಪ ಮೇಟಿ





ಟೆಂಡರ್ ಕರೆಯದೆ ಲೂಟಿ ಹೊಡೆಯುತ್ತಿರುವ ರುದ್ರೇಶನ ಉದ್ಧಟತನಕ್ಕೆ ಶಾಸಕ ಹುಲ್ಲಪ್ಪ ಮೇಟಿಯ ಕೃಪಾಕಟಾಕ್ಷವೇ ಕಾರಣ. ತಾನು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುಲಬಾಂಧವ, ಅವರ ಬಗಲ್ ಕಾ ಬಚ್ಚಾ ಅಂದುಕೊಳ್ಳುತ್ತಲೇ ಹುಲ್ಲಪ್ಪ ಮೇಟಿ ಉತ್ತರ ಕರ್ನಾಟಕದ ಪಾಲಿಗೆ ಡಿಫ್ಯಾಕ್ಟೊ ಸಿಎಂ ರೀತಿ ವರ್ತಿಸುತ್ತಿರುವುದು ರಹಸ್ಯವಾಗೇನೂ ಉಳಿದಿಲ್ಲ, ನಿಷ್ಠಾವಂತ ಅಧಿಕಾರಿಗಳ ಮೇಲೆ ದರ್ಬಾರು ನಡೆಸುವುದನ್ನೇ ಮತ್ತು ತನಗೆ ಬಕೆಟ್ ಹಿಡಿಯುವ ರುದ್ರೇಶನಂತಹ ಹೇತ್ಲಾಂಡಿ ಅಧಿಕಾರಿಗಳನ್ನು ಪಕ್ಕದಲ್ಲಿಟ್ಟುಕೊಂಡು ತಿರುಗಾಡುವುದನ್ನೇ ಪಾಳೆಗಾರಿಕೆ ಅಂತಂದುಕೊಂಡಿರುವ ಹುಲ್ಲಪ್ಪ ಮೇಟಿ ಕ್ಷೇತ್ರದಲ್ಲಿ ನಡೆಯುತ್ತಿರುವ ಎಲ್ಲಾ ಅವ್ಯವಹಾರಗಳ ಪ್ರತ್ಯಕ್ಷ ಫಲಾನುಭವಿ ಎಂದರೂ ತಪ್ಪಾಗಲಿಕ್ಕಿಲ್ಲ. ಇಂತವನ ಸಾಂಗತ್ಯ ಸಿಕ್ಕಿದ ಮೇಲೆ ರುದ್ರೇಶ ಸುಮ್ಮನಿರುತ್ತಾನಾ?

ಹಗಲು ತಂತ್ರ, ರಾತ್ರಿ ಕುತಂತ್ರ

ಡೀಲ್ ಕುದುರಬಹುದಾದ ಫೈಲ್‌ಗಳು ಕಚೇರಿಗಿಂತ ರುದ್ರೇಶನ ಮನೆಯಲ್ಲೇ ಹೆಚ್ಚಾಗಿವೆ. ಕಟ್ಟಡ ಪರವಾನಗಿ ನವೀಕರಣದ ಸರಿಸುಮಾರು ನೂರಕ್ಕು ಹೆಚ್ಚು ಫೈಲ್‌ಗಳು ಇವನ ಬಳಿ ಇವೆ. ಸಾಮಾನ್ಯವಾಗಿ ಒಂದು ಕಟ್ಟಡಕ್ಕೆ ನಗರ ಪಾಲಿಕೆಯಿಂದ ಪರವಾನಗಿ ಸಿಕ್ಕ ಮೇಲಷ್ಟೆ ಬ್ಯಾಂಕ್‌ಗಳು ಲೋನ್ ಪ್ರಕ್ರಿಯೆಯನ್ನು ಆರಂಭಿಸೋದು. ಪರವಾನಗಿ ಸಿಕ್ಕ ಆರು ತಿಂಗಳೊಳಗೆ ಕಟ್ಟಡ ಪೂರ್ಣಗೊಳ್ಳಬೇಕು ಅಥವಾ ಮತ್ತೆ ಅದನ್ನು ನವೀಕರಿಸಿಕೊಳ್ಳಬೇಕು. ಆಗ ಮಾತ್ರ ಲೋನ್ ಅನ್ನು ಬ್ಯಾಂಕ್‌ಗಳು ನಿರಾತಂಕವಾಗಿ ಮುಂದುವರೆಸುತ್ತವೆ. ಆದರೆ ಕಾರ್ಮಿಕರ ಸಮಸ್ಯೆ ಮರಳು ಮೊದಲಾದ ಕಚ್ಚಾ ಸಾಮಗ್ರಿಗಳ ಕೊರತೆಯಿಂದಾಗಿ ಬಹುಪಾಲು ಕಟ್ಟಡಗಳ ನಿರ್ಮಾಣ ಆರು ತಿಂಗಳಲ್ಲಿ ಮುಗಿಯುವುದೇ ಇಲ್ಲ, ಅಂತವರು ನವೀಕರಣಕ್ಕೆ ರುದ್ರೇಶನನ್ನೇ ಎಡತಾಕಬೇಕು. ಆ ಫೈಲ್‌ಗಳನ್ನು

▶▶| 09

ಹಂದಿ ಕಾಸಿಗೂ ಇವನೇ ಬಾಸು

ಹಂದಿಜ್ವರ, ಅಂದರೆ ಎಚ್1ಎನ್1 ಸೋಂಕು ಹಂದಿಗಳಿಂದ ಬರುವುದಿಲ್ಲ ಅನ್ನೋದು ಸಾಧಿತ ವಿಚಾರ. ಆದರೂ ಹಂದಿಗಳನ್ನು ನಮ್ಮ ಗಲ್ಲಿಗಳಿಂದ, ಊರುಗಳಿಂದ ಸಾಗ ಹಾಕಿದರೆ ಜನ ಖುಷಿ ಪಡೋದು ಸಹಜ. ಬಾಗಲಕೋಟೆ ಜನರಲ್ಲಿ ಹಂದಿಜ್ವರದ ಅಜ್ಞಾನ ಬಿತ್ತಿ ಹಂದಿಗಳನ್ನು ಸಾಗಹಾಕುತ್ತಿರುವುದರ ಹಿಂದೆಯೂ ರುದ್ರೇಶನ ವ್ಯವಸ್ಥಿತ ಕೈವಾಡವಿದೆ.


ಹಂದಿಗಳಿಂದ ನಗರಸಭೆಗೆ ಸ್ವಚ್ಛತೆಯ ಭಾರ ಕಡಿಮೆಯಾಗಿದ್ದು ಅಲ್ಲಗಳೆಯೋ ಸಂಗತಿಯೇನಲ್ಲ. ಕೊರವರು, ಹಂದಿ ಗೊಲ್ಲರು ಮೊದಲಾದ ಅಲೆಮಾರಿ ಹಿಂದುಳಿದ ಜನಾಂಗಗಳಿಗೆ ಹಂದಿಗಳು ಕುಲದೇವತೆಗಳಿದ್ದಂತೆ. ಅಂತಹ ಹಂದಿಗಳನ್ನು ಹಿಡಿದು, ಊರಾಚೆ ಸಾಗಿಸುತ್ತೇನೆ ಅಂತ ರುದ್ರೇಶ ಡಂಗೂರ ಸಾರುತ್ತಿದ್ದಂತೆ 'ಹಂದಿ ಹಿಡ್ದು ನಮ್ ಹೊಟ್ಟೆ ಮ್ಯಾಲಿ ಹೊಡಿಬ್ಯಾಡ್ರೀ ಸಾಹೇಬ್ರೇ' ಅಂತ ಅಂಗಲಾಚಲು ಹೋದಾಗ ಪೊಲೀಸ್‌ರನ್ನು ಛೂಬಿಟ್ಟು ಲಾಠಿ ರುಚಿ ತೋರಿಸಿದ್ದಲ್ಲದೆ 23 ಜನರ ಮೇಲೆ ಕೇಸ್ ಜಡಿಸಿದ್ದ, ನಂತರ ರಾಜೀಖುಷಿ ಮಾತಾಡಿ ಅವರನ್ನೆಲ್ಲ ಬೆದರಿಸಿ ಹಂದಿ ಸಾಗಾಟದಲ್ಲಿ ತೊಡಗಿರುವಂತೆ ಮಾಡಿಕಳಿಸಿದ್ದ.


ಇದರ ಹಿಂದಿರುವ ಅಸಲಿಯತ್ತೇ ಬೇರೆ. ಹಂದಿಗಳು ನೋಡೋದಕ್ಕೆ ಹೊಲಸು ಎಂಬುದಷ್ಟೆ ನಮ್ಮಲ್ಲನೇಕರಿಗೆ ಗೊತ್ತಿರೋದು. ಹಂದಿಗಳಿಂದ ಆಗುವ ಉಪಯೋಗ ಅದರಿಂದ ಬರುವ ಆದಾಯ ಅಂತವರಿಗೆ ಗೊತ್ತೇ ಇಲ್ಲ, ಹಂದಿಮಾಂಸದ ಬೆಲೆಗಿಂತಾ ಅದರ ಬೊಜ್ಜು (ಕೊಬ್ಬು) ಅತ್ಯಂತ ದುಬಾರಿಯಾದದ್ದು, ಒಂದು ಹಂದಿ ಕನಿಷ್ಠ 50 ರಿಂದ 70 ಕೆಜಿ ಇದ್ದರೆ ಅದರ ಬೆನ್ನಿನ ಭಾಗದಲ್ಲಿ ಅತಿ ಹೆಚ್ಚು ಕೊಬ್ಬಿನ ಅಂಶವನ್ನು ಹೊಂದಿರುತ್ತದೆ. ಒಂದು ಕೇಜಿ ಹಂದಿಮಾಂಸಕ್ಕೆ 200 ರಿಂದ 250 ರೂಪಾಯಿ ಇದ್ದರೆ, ಅದರ ಕೊಬ್ಬು 300 ರೂಪಾಯಿಗೆ ಬಿಕರಿಯಾಗುತ್ತದೆ. ಮಾಂಸವನ್ನೇನೊ ತಿನ್ನುತ್ತಾರೆ, ಆದರೆ ಹಂದಿ ಕೊಬ್ಬನ್ನು ಏತಕ್ಕೆ ಬಳಸಲಾಗುತ್ತದೆ ಅನ್ನೋದನ್ನು ತಿಳಿದುಕೊಂಡರೆ ಅಪ್ಪಟ ಸಸ್ಯಾಹಾರಿಗಳಿಗೆ ಕೊಂಚ ಆಘಾತವೆನಿಸಬಹುದೇನೊ. ಇದರ ಕೊಬ್ಬನ್ನು ನಾವು ತಿನ್ನುವ ಬಹುತೇಕ ಬೇಕರಿಗಳ ಐಟಂಗಳಲ್ಲಿ ಬಳಸುತ್ತಾರೆ. ಪ್ರಾಣಿ ರಿಸರ್ಚ್ ಸೆಂಟರ್‌ನ ಡಾಕ್ಟರ್‌ಗಳೇ ಇದನ್ನು ಒಪ್ಪಿಕೊಂಡಿದ್ದಾರೆ. ಅಲ್ಲದೇ ಹಂದಿಕೊಬ್ಬನ್ನು ನಾವು ಸ್ನಾನ ಮಾಡುವ ಸೋಪ್‌ಗಳಲ್ಲೂ ಬಳಸಲಾಗುವುದು. ಅದಕ್ಕೆಂದೇ ಹಂದಿಕೊಬ್ಬಿಗೆ, ಮಾಂಸಕ್ಕಿಂತಲೂ ಬೆಲೆ ಜಾಸ್ತಿ, ಇಂತಹ ಹಂದಿಯನ್ನು ಇಡಿಯಾಗಿ ಮಾರಾಟ ಮಾಡಿದಾಗ ಏನಿಲ್ಲವೆಂದರೆ ಪ್ರತಿಯೊಂದು ಹಂದಿ ಎರಡರಿಂದ ಎರಡೂವರೆ ಸಾವಿರಕ್ಕೆ ಸಲೀಸಾಗಿ ಬಿಕರಿಯಾಗುತ್ತದೆ. ರುದ್ರೇಶನ 'ಹಂದಿ ಮುಕ್ತ ಸಿಟಿ' ಅಜೆಂಡಾದ ಹಿಂದಿರೋದೂ ಇದೇ ಕಾಸಿನ ಕರಾಮತ್ತು!


ಹಂದಿ ಹಿಡಿಯಲೆಂದೇ ರುದ್ರೇಶ ತಮಿಳುನಾಡಿನ ಮಧುರೈನಿಂದ ಒಂದು ಗ್ಯಾಂಗ್ ಕರೆಸಿದ್ದ, ಸರಿ, ಹೀಗೆ ಹಿಡಿದ ಹಂದಿಗಳನ್ನು ಏನು ಮಾಡುತ್ತೀರಿ ಅಂತ ರುದ್ರೇಶನನ್ನು ಕೇಳಿದರೆ, 'ಅವುಗಳನ್ನೆಲ್ಲ ತಮಿಳುನಾಡಿನ ಕಾಡಿನಲ್ಲಿ ಬಿಟ್ಟುಬಿಡುತ್ತೇವೆ' ಅಂತ ಉತ್ತರ ಕೊಡುತ್ತಾನೆ. ಆದರೆ ಅರಣ್ಯ ಇಲಾಖೆ ಇದನ್ನು ಅಲ್ಲಗಳೆಯುತ್ತದೆ. ಹಂದಿಗಳನ್ನು ಬೃಹತ್ ಸಂಖ್ಯೆಯಲ್ಲಿ ಕಾಡಿಗೆ ಬಿಡಲು ಅನುಮತಿ ನೀಡಲಾಗದು ಎಂದು ಅರಣ್ಯ ಇಲಾಖೆ ಹೇಳುತ್ತದೆ. ಹಾಗಿದ್ದಮೇಲೆ ಹಿಡಿಸಿದ ಹಂದಿಗಳನ್ನೆಲ್ಲ ರುದ್ರೇಶ ಏನು ಮಾಡಿದ? ಅಂತ ಕೆದಕುತ್ತಾ ಸಾಗಿದರೆ ವ್ಯವಸ್ಥಿತ ಜಾಲ ತೆರೆದುಕೊಳ್ಳುತ್ತದೆ. ಮೊದಲೇ ತಿಳಿಸಿದಂತೆ ಹಂದಿಯ ಮಾಂಸ ಮತ್ತು ಕೊಬ್ಬಿಗಾಗಿ ಹುಟ್ಟಿಕೊಂಡ ಹಂದಿ ಮಾಂಸೋದ್ಯಮ ಕೇಂದ್ರಗಳೇ ಸಾಕಷ್ಟಿವೆ. ಹಂದಿಗಳನ್ನೆಲ್ಲ ಅವುಗಳಿಗೆ ಮಾರಾಟ ಮಾಡಿದರೆ ಕೈತುಂಬಾ ಹಣ ಬರುವುದರಲ್ಲಿ ಅನುಮಾನವೇ ಇಲ್ಲ. ಮೊನ್ನೆ ಪತ್ರಿಕಾಗೋಷ್ಠಿಯೊಂದರಲ್ಲಿ 'ಸುಮಾರು ಹತ್ತು ಸಾವಿರ ಹಂದಿಗಳನ್ನು ಸಾಗಹಾಕಲಾಗಿದೆ' ಎಂದು ರುದ್ರೇಶನೇ ಹೇಳಿಕೆ ನೀಡಿದ್ದಾನೆ. ಒಂದು ಹಂದಿಗೆ ಎರಡು ಸಾವಿರ ಎಂದುಕೊಂಡರೂ 2 ರಿಂದ 2.5 ಕೋಟಿ ರೂಪಾಯಿ ಕಮಾಯಿಯಾಗಿದೆ! ಹೇಗಿದೆ ರುದ್ರೇಶ್ ಪ್ಲಾನು. ವ್ಯವಸ್ಥಿತವಾಗಿ ಪೊಲೀಸರ ರಕ್ಷಣೆಯಲ್ಲೇ ಹಂದಿ ಸಾಗಾಣಿಕೆ ಮಾಡುತ್ತಾ ಕೋಟ್ಯಂತರ ಹಣ ಜೇಬಿಗಿಳಿಸಿಕೊಳ್ಳುತ್ತಿದ್ದಾನೆ. ಅಂದಹಾಗೆ, ಈತನ ಹೆಸರು ಲೋಕಾಯುಕ್ತ ಹಿಟ್‌ಲಿಸ್ಟ್‌ನಲ್ಲಿದೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಹಾಗೇನಾದರು ಲೋಕಾಯುಕ್ತ ರೇಡ್ ನಡೆದಿದ್ದೇ ಆದಲ್ಲಿ, ಅದು ಆ ಅಮಾಯಕ ಹಂದಿಗಳ ಶಾಪವೇ ಆಗಿರುತ್ತದೆ!


ಮಂಡ್ಯ ಡಿಸಿಸಿ ಬ್ಯಾಂಕ್: ದುಡ್ಡಿನ ಧಣಿಗಳ ದರ್ಬಾರ್




ಜೋಗಿಗೌಡ



ಅಶ್ವತ್ಥ್


ಸಂದೇಶ್ ನಾಗರಾಜ್


ಪುಟ್ಟರಾಮು

ಮಂಡ್ಯ ಜಿಲ್ಲೆಯ ಶೇ.70ರಷ್ಟು ಜನರ ಪ್ರಧಾನ ...ಬು ಕೃಷಿ. ಇದನ್ನು ಚೆನ್ನಾಗಿ ಅರಿತಿದ್ದ ಸಹಕಾರಿ ...ಣರಾದ ಕೆ.ವಿ.ಶಂಕರೇಗೌಡ, ಸಿಂಗಾರಿಗೌಡ, ಚೌಡಯ್ಯ ...ದಲಾದವರ ಶ್ರಮದಿಂದ 1953ರಲ್ಲಿ ಸ್ಥಾಪನೆಯಾದ ...ಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಡಿಸಿಸಿ) ...ಯ ಆರ್ಥಿಕ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದೆ. ...ಯಲ್ಲಿರುವ ನೂರಾರು ಸಹಕಾರಿ ಸಂಘಗಳಿಗೆ ...-ಸೌಲಭ್ಯ ನೀಡುವ ಮೂಲಕ ಕೃಷಿಯನ್ನೇ ...ಕೊಂಡು ಜೀವನ ಸಾಗಿಸುತ್ತಿರುವ ರೈತ ಸಮೂಹವನ್ನು ...ಕವಾಗಿ ಸ್ವಾವಲಂಬನೆ ಮಾಡುವುದು ಎಂಡಿಸಿಸಿ ...ಕ್‌ನ ಪ್ರಮುಖ ಉದ್ದೇಶ. ಕಳೆದ 6 ದಶಕಗಳಿಂದ ...ಯ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ...ಡಿಸಿಸಿ ಬ್ಯಾಂಕ್‌ಗೆ ಇತ್ತೀಚಿನ ದಶಕಗಳಲ್ಲಿ ಅಧಿಕಾರಸ್ಥ ...ಕಾರಣಿಗಳು ಹಾಗೂ ದುಡ್ಡಿನ ಧಣಿಗಳ ಪ್ರವೇಶದಿಂದ ... ದುರುಪಯೋಗ, ಸ್ವಜನಪಕ್ಷಪಾತ, ಭ್ರಷ್ಟಾಚಾರ ...ದಲಾದ ಕಳಂಕಗಳು ಮೆತ್ತಿಕೊಳ್ಳುತ್ತಿವೆ.

... ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿರುವವರನ್ನು ಜನ ...ುತಿಸಿ ಹಣ, ಜಾತಿ ನೋಡದೆ ಎಂಡಿಸಿಸಿ ಬ್ಯಾಂಕ್‌ಗೆ ...ಯ್ಕೆ ಮಾಡುತ್ತಿದ್ದ ದಿನಗಳುರುಳಿ ದಶಕಗಳೇ ...ುಹೋಗಿದೆ. ಈಗೇನಿದ್ದರೂ ಇಲ್ಲಿ ಹಣ, ಅಧಿಕಾರದ್ದೇ ...ತು. ಎಂಡಿಸಿಸಿ ಬ್ಯಾಂಕ್‌ನ ನೂರಾರು ...ಟಿ ರೂ. ವ್ಯವಹಾರ, ಉದ್ಯೋಗದ ...ಲೆ ಕಣ್ಣಿಟ್ಟೇ ಲಕ್ಷ ಲಕ್ಷ ಸುರಿದು ...ರ್ದೇಶಕರಾಗಲು ಬಯಸುತ್ತಿರುವವರ ...ಖ್ಯೆಯೇ ಹೆಚ್ಚು. ಎಂಡಿಸಿಸಿ ಬ್ಯಾಂಕ್‌ನ ...ಳಿತ ಮಂಡಳಿಗೆ ನಿರ್ದೇಶಕರಾಗಲು ...ಷ್ಟು ಪೈಪೋಟಿಯಿದೆ. ಒಂದು ಬಾರಿ ...ದ್ದವರು ಆರ್ಥಿಕವಾಗಿ ಮತ್ತು ...ಕೀಯವಾಗಿ ಬಲಿಷ್ಠರಾಗುವ ಎಲ್ಲಾ ...ಕಾಶಗಳು ಹೆಚ್ಚಿರುವದರಿಂದ ಎಂಡಿಸಿಸಿ ...ಕ್ ಚುನಾವಣೆ ಪ್ರತಿಷ್ಠೆಯ ಕಣವಾಗಿದೆ. "ಸಹಕಾರ ...ತ್ರ ರಾಜಕೀಯ ಗೂಳಿಗಳಿಗೆ ಫಲವತ್ತಾದ ...ಲ್ಲುಗಾವಲಿದ್ದಂತೆ ಹಾಗೂ ಸಹಕಾರ ಕ್ಷೇತ್ರ ಪುಂಡ ...ಗಳು ಮೇಯುವ ಸಹಕಾರಿ ಗೋಮಾಳಗಳಿದ್ದಂತೆ" ...ಬ ಮಾತು ಎಂಡಿಸಿಸಿ ಬ್ಯಾಂಕ್‌ನಲ್ಲಿ ಅಕ್ಷರಶಃ ನಿಜವಾಗಿದೆ.


ವಿ.ಡಿ.ಹರೀಶ್


6 ಮಂದಿ ಅವಿರೋಧ ಆಯ್ಕೆ

ಇಂತಹ ಎಂಡಿಸಿಸಿ ಬ್ಯಾಂಕ್‌ನ 12 ಮಂದಿ ...ರ್ದೇಶಕರುಗಳ ಸ್ಥಾನಕ್ಕೆ ಜೂನ್ 14ರಂದು ಚುನಾವಣೆ ...ಯುತ್ತಿದೆ. ಪ್ರತಿ ದಿನ ಕೋಟ್ಯಾಂತರ ರೂ. ವ್ಯವಹಾರ ...ಸುವ ಎಂಡಿಸಿಸಿ ಬ್ಯಾಂಕ್‌ನ ನಿರ್ದೇಶಕರಾಗಲು ...ತಿರುವವರು ಕೂಡ ಲಕ್ಷಲಕ್ಷ ಹಣ ಜೇಬಿನಲ್ಲಿಟ್ಟುಕೊಂಡೇ ...ರ್ಧಿಸಿದ್ದಾರೆ. ಈಗಾಗಲೇ 12 ಸ್ಥಾನಗಳಲ್ಲಿ 6 ಸ್ಥಾನಗಳಿಗೆ ...ರೋಧವಾಗಿ ಆಯ್ಕೆ ನಡೆದಿದೆ. ಕಾಂಗ್ರೆಸ್ ಬೆಂಬಲಿತ ...ರ್ಥಿಗಳು 4 ಮಂದಿ ಆಯ್ಕೆಯಾಗಿದ್ದು, ಜೆಡಿಎಸ್ ...ಬಲಿತ ಇಬ್ಬರು ಆಯ್ಕೆಯಾಗಿದ್ದಾರೆ. ಇನ್ನುಳಿದ 6 ...ನಗಳಿಗೆ ಚುನಾವಣೆ ನಡೆಯಲಿದ್ದು 6ರಲ್ಲಿ 3ಕ್ಕೂ ಹೆಚ್ಚು ...ನಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳೇ ಆರಿಸಿ ...ುವ ವಾತಾವರಣ ಸ್ಪಷ್ಟವಾಗಿ ಕಾಣುತ್ತಿದೆ. ಆ ಮೂಲಕ ಡಿಸಿಸಿ ಬ್ಯಾಂಕ್‌ನ ಆಡಳಿತ ಈ ಬಾರಿ ಕಾಂಗ್ರೆಸ್ ಪಾಲಾಗುವ ಲಕ್ಷಣಗಳು ನಿಚ್ಚಳವಾಗಿವೆ. ಕಳೆದ ಬಾರಿ ಕಾಂಗ್ರೆಸ್, ರೈತಸಂಘ ಸೇರಿ ಜೆಡಿಎಸ್ ಪಕ್ಷದ ತೆಕ್ಕೆಯಲ್ಲಿದ್ದ ಎಂಡಿಸಿಸಿ ಬ್ಯಾಂಕ್‌ನ ಅಧಿಕಾರವನ್ನು ಕಿತ್ತುಕೊಂಡಿದ್ದವು. ಈ ಬಾರಿ ಕಾಂಗ್ರೆಸ್ ಪಕ್ಷ ಸಂಪೂರ್ಣ ಬಹುಮತ ಸಾಧಿಸಿ ಅಧಿಕಾರ ಹಿಡಿಯುವ ಸಾಧ್ಯತೆ ಹೆಚ್ಚಿದೆ.

ಮಂಡ್ಯ ತಾಲ್ಲೂಕು ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಸಿ. ಅಶ್ವಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಂದಹಾಗೆ, ವಸತಿ ಸಚಿವ ಅಂಬರೀಶ್ ಶಿಷ್ಯ ಅಮರಾವತಿ ಚಂದ್ರಶೇಖರ್‌ನ ಖಾಸಾ ತಮ್ಮನೇ ಈ ಸಿ.ಅಶ್ವಥ್. ಹಾಗಾಗಿಯೇ ತನ್ನೆಲ್ಲ ಹಣಬಲ ಮತ್ತು ಅಧಿಕಾರ ಪ್ರಭಾವಗಳನ್ನು ಪಣಕ್ಕಿಟ್ಟು ತಮ್ಮನ ವಿರುದ್ಧ ಸ್ಪರ್ಧಿಸಿದ್ದ ಮಂಡ್ಯ ತಾಲ್ಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಪಾರ್ಥನನ್ನು ಕಣದಿಂದ ಹಿಂದಕ್ಕೆ ಸರಿಸಿ ಅವಿರೋಧವಾಗಿ ಆಯ್ಕೆಯಾಗುವಂತೆ ಅಮರಾವತಿ ಚಂದ್ರ ನೋಡಿಕೊಂಡಿದ್ದಾನೆ.

ಇನ್ನುಳಿದಂತೆ ಮಳವಳ್ಳಿ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಳವಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪುಟ್ಟರಾಮು ಹಾಗೂ ಮಂಡ್ಯ ಉಪವಿಭಾಗದ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಂ.ಬಿ.ಮಲ್ಲಯ್ಯ ಇಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ತನ್ನ ಶಿಷ್ಯರಾದ ಇವರಿಬ್ಬರ ಅವಿರೋಧ ಆಯ್ಕೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಹಾಗೆಯೇ ನರೇಂದ್ರಸ್ವಾಮಿಯವರ ಮಧ್ಯಸ್ಥಿಕೆಯಲ್ಲಿ ನಡೆದ ಮಾತುಕತೆಯ ಪರಿಣಾಮದಿಂದ ಬಳಕೆದಾರರ ಮತ್ತು ಸಂಸ್ಕರಣಾ ಸಹಕಾರ ಸಂಘ, ನಗರ ಸಹಕಾರ ಸಂಘ ಹಾಗೂ ವ್ಯವಸಾಯೇತರ ಸಹಕಾರ ಸಂಘಗಳ ಕ್ಷೇತ್ರದಿಂದ ಮದ್ದೂರು ತಾಲ್ಲೂಕು ಕೊಪ್ಪ ಜೋಗಿಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಬೆಂಬಲಿಗ ಜೋಗಿಗೌಡರನ್ನು ಎಂಡಿಸಿಸಿ ಬ್ಯಾಂಕ್‌ಗೆ ನಾಮನಿರ್ದೇಶನ ಸದಸ್ಯರನ್ನಾಗಿ ಮಾಡಿದ್ದರು. ಈ ಬಾರಿ ಜೋಗಿಗೌಡರ ವಿರುದ್ಧ ನಗರಸಭೆಯ ಮಾಜಿ ಅಧ್ಯಕ್ಷ ಕುರ್ಚಿಪ್ರಿಯ ಬಿ.ಸಿದ್ದರಾಜು ಸ್ಪರ್ಧಿಸಿದ್ದ. ನಗರಸಭೆ ಅಧ್ಯಕ್ಷಸ್ಥಾನ ಕೈತಪ್ಪಿದ್ದು ಅಧಿಕಾರ ವ್ಯಾಮೋಹಿ ಬಿ.ಸಿದ್ದರಾಜುಗೆ ಚಡಪಡಿಸುವಂತೆ ಮಾಡಿತ್ತು. ಹಾಗಾಗಿ ಆತ ಎಂಡಿಸಿಸಿ ಬ್ಯಾಂಕ್‌ನ ನಿರ್ದೇಶಕ ಪಟ್ಟದಲ್ಲಿ 2ನೇ ಬಾರಿ ಕೂರಲು ಜೋಗಿಗೌಡರ ವಿರುದ್ಧ ಸ್ಪರ್ಧಿಸಿದ್ದ. ಅಲ್ಲದೇ ತನ್ನ ಗೆಲುವಿಗೆ ಸಾಥ್ ನೀಡಬೇಕೆಂದು ಹಣದ ಥೈಲಿಯ ಸಮೇತ ಪಿ.ಎಂ.ನರೇಂದ್ರಸ್ವಾಮಿ ಮನೆ ಬಾಗಿಲಿಗೆ ಬಂದು ನಿಂತಿದ್ದ. ಅಧ್ಯಕ್ಷ ಸ್ಥಾನ ಉಳಿಸಿಕೊಳ್ಳಲು ಸಿದ್ದರಾಜು ಮಾಡಿಕೊಂಡಿದ್ದ ಭಾನಗಡಿಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದ ನರೇಂದ್ರಸ್ವಾಮಿ 'ನಿನ್ನ ಮೇಲೆ ಸಚಿವ ಅಂಬರೀಶ್ ಸೇರಿದಂತೆ ಹಲವರಿಗೆ ಸಿಟ್ಟಿದೆ. ಸುಮ್ಮನೆ ಯಾಕೆ ಲಕ್ಷಾಂತರ ಹಣ ಖರ್ಚು ಮಾಡಿ ಸೋಲುತ್ತೀಯ' ಅಂತ ಬುದ್ಧಿ ಹೇಳುತ್ತಿದ್ದಂತೆಯೇ ಅದೇನು ಲೆಕ್ಕಾಚಾರ ಹಾಕಿದನೋ ಸಿದ್ದರಾಜು ಕೂಡಲೇ ಕಣದಿಂದ ಹಿಂದಕ್ಕೆ ಸರಿದಿದ್ದ. ಹಾಗಾಗಿ ಜೋಗಿಗೌಡರು ಅವಿರೋಧವಾಗಿ ಆಯ್ಕೆಯಾಗುವಂತಾಯ್ತು.

ಇನ್ನು ಜೆಡಿಎಸ್‌ನ ವಿಧಾನಪರಿಷತ್ ಸದಸ್ಯ ಸಂದೇಶ ನಾಗರಾಜು ಪಾಂಡವಪುರ ತಾಲ್ಲೂಕು ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಸ್ಥಾನದ ಮೇಲೆ ಕಣ್ಣಿಟ್ಟಿರುವ ಸಂದೇಶ್ ನಾಗರಾಜು ತನ್ನಲ್ಲಿದ್ದ ಹಣ ಬಲದಿಂದ ಪ್ರತಿಸ್ಪರ್ಧಿಯನ್ನು ಸರಿಮಾಡಿಕೊಂಡು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಳೆದ ಬಾರಿಯೂ ಎಂಡಿಸಿಸಿ ಬ್ಯಾಂಕ್‌ನ ನಿರ್ದೇಶಕರಾಗಿ, ಅಪೆಕ್ಸ್ ಬ್ಯಾಂಕ್‌ಗೆ ಹೋಗಬೇಕಿದ್ದ ಸಂದೇಶ ನಾಗರಾಜುಗೆ ಕುರ್ಚಿಪ್ರಿಯ ಬಿ.ಸಿದ್ದರಾಜು ಭರ್ಜರಿಯಾಗಿ ಚಳ್ಳೆಹಣ್ಣು ತಿನ್ನಿಸಿ ತಾನೇ ಅಪೆಕ್ಸ್ ಬ್ಯಾಂಕ್ ನಿರ್ದೇಶಕನಾಗಿದ್ದ. ಅಪೆಕ್ಸ್ ಬ್ಯಾಂಕ್ ನಿರ್ದೇಶಕನಾಗುವ ಕನಸುಕಂಡಿದ್ದ ಸಂದೇಶ ನಾಗರಾಜು ಹಣ ಬಿಚ್ಚದೆ ಬೆಚ್ಚಗೆ ಮಲಗಿದ್ದನ್ನು ಕಂಡ ಚಾಣಾಕ್ಷ ಸಿದ್ದರಾಜು ರಿಯಲ್ ಎಸ್ಟೇಟ್‌ನಲ್ಲಿ ಸಂಪಾದಿಸಿದ್ದ ಹಿಡಬಿಟ್ಟಿ ಹಣವನ್ನು ಖರ್ಚು ಮಾಡಿ ಅಪೆಕ್ಸ್ ಬ್ಯಾಂಕ್ ನಿರ್ದೇಶಕನಾಗಿ ಸಂದೇಶ ನಾಗರಾಜುಗೆ ಭರ್ಜರಿಯಾಗೇ ಶಾಕ್ ಕೊಟ್ಟಿದ್ದ. ಆದರೆ ಈ ಬಾರಿ ಅವಿರೋಧ ಆಯ್ಕೆಯಿಂದ ಅವರು ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗುವ ಛಾನ್ಸ್ ಸುಲಭವಾಗಿದೆ.


ಎಸ್.ಪಿ.ಸತೀಶ್

ಹಾಗೆಯೇ ನಾಗಮಂಗಲ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಹೆಚ್.ಎಸ್.ನರಸಿಂಹಯ್ಯ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರ ಆಯ್ಕೆಯ ಹಿಂದೆ ಶಾಸಕ ಎನ್.ಚಲುವರಾಯಸ್ವಾಮಿಯ ಪ್ರಭಾವ ಇದೆ. ಪಾಂಡವಪುರ ಉಪವಿಭಾಗದ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತರಾಗಿ ವಿಜಯೇಂದ್ರ ಹಾಗೂ ಜೆಡಿಎಸ್ ಬೆಂಬಲಿತ ತಟ್ಟಹಳ್ಳಿ ನರಸಿಂಹಮೂರ್ತಿ ನಡುವೆ ನೇರ ಸ್ಪರ್ಧೆಯಿತ್ತು. ಪಾಂಡವಪುರದ ಮಾಜಿ ಶಾಸಕ ಹಲಗೇಗೌಡರ ಸಹೋದರನ ಪುತ್ರನಾದ ವಿಜಯೇಂದ್ರ ಆರ್ಥಿಕವಾಗಿ ಬಲಿಷ್ಠವಾಗಿದ್ದಾನೆ. ಮೈಸೂರು ವಾಸಿಯಾದ ವಿಜಯೇಂದ್ರ ಚಿಕ್ಕನಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿಯೂ ಅಧಿಕಾರದ ರುಚಿ ಕಂಡಿದ್ದ. ಇವರ ವಿರುದ್ಧ ಸ್ಪರ್ಧಿಸಿದ್ದ ತಟ್ಟಹಳ್ಳಿ ನರಸಿಂಹಮೂರ್ತಿ ಗುತ್ತಿಗೆದಾರನಾಗಿ ಸಾಕಷ್ಟು ಸ್ಥಿತಿವಂತನಾಗಿದ್ದು, ಶಾಸಕ ಚಲುವರಾಯಸ್ವಾಮಿ ಶಿಷ್ಯ. ಆದರೆ ಜೂನ್ 9ರ ರಾತ್ರಿ ನಡೆದ ದಿಢೀರ್ ಬೆಳವಣಿಗೆಯಲ್ಲಿ ತಟ್ಟಹಳ್ಳಿ ನರಸಿಂಹಮೂರ್ತಿ ಕೌಟುಂಬಿಕ ಕಾರಣಗಳ ಹಿನ್ನೆಲೆಯಲ್ಲಿ ಕಣದಿಂದ ನಿವೃತ್ತಿಯಾಗಿ ವಿಜಯೇಂದ್ರನನ್ನು ಬೆಂಬಲಿಸುವುದಾಗಿ ಘೋಷಿಸಿದ್ದಾನೆ. ನರಸಿಂಹಮೂರ್ತಿಯ ಈ ನಡೆಯ ಹಿಂದೆ ವಿಜಯೇಂದ್ರನ ಕಾಂಚಾಣದ ಸದ್ದು ಕೇಳಿಸುತ್ತದೆ.

6 ಸ್ಥಾನಕ್ಕೆ ಮಾತ್ರ ಚುನಾವಣೆ

6 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದು ಉಳಿದ 6 ಸ್ಥಾನಕ್ಕೆ ಚುನಾವಣೆ ನಡೆಯಲಿದೆ. 2 ಬಾರಿ ಆಯ್ಕೆಯಾಗಿ ಮೂರನೇ ಬಾರಿಗೆ ಆಯ್ಕೆ ಬಯಸಿರುವ ಎಂಡಿಸಿಸಿ ಬ್ಯಾಂಕಿನ ಹಾಲಿ ಅಧ್ಯಕ್ಷ ಕಾಂಗ್ರೆಸ್ ಬೆಂಬಲಿತ ಸತೀಶ್ ಮಂಡ್ಯ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದಿಂದ ಕಣಕ್ಕಿಳಿದಿದ್ದಾರೆ. ಇವರ ವಿರುದ್ಧವಾಗಿ ಜೆಡಿಎಸ್ ಬೆಂಬಲಿತ ಚಲುವರಾಯಸ್ವಾಮಿ ಶಿಷ್ಯ ನಾಗಮಂಗಲ ತಾಲ್ಲೂಕು ಅಧ್ಯಕ್ಷ ಶಿವನಂಜೇಗೌಡ ಸ್ಪರ್ಧಿಸಿದ್ದಾರೆ. 7 ಟಿಎಪಿಸಿಎಂಎಸ್ ಮತಗಳಲ್ಲಿ ಹೆಚ್ಚು ಮತ ಪಡೆದವರು ನಿರ್ದೇಶಕರಾಗಿ ಆಯ್ಕೆಯಾಗುತ್ತಾರೆ. ಇರುವ 7 ಟಿಎಪಿಸಿಎಂಎಸ್‌ಗಳಲ್ಲಿ ನಾಲ್ಕರಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿರುವುದರಿಂದ 1 ಮತದ ಅಂತರದಲ್ಲಿ ಸತೀಶ ಗೆಲ್ಲುವುದು ಖಚಿತ ಎಂದೇ ಹೇಳಲಾಗುತ್ತಿದೆ. ಹಾಗೆಯೇ ಬಿಎಸ್‌ಎಸ್‌ಎನ್ ನಿರ್ದೇಶಕ ವಿ.ಡಿ.ಹರೀಶ್ 2 ಬಾರಿ ಗೆದ್ದು 3ನೇ ಬಾರಿಗೆ ಆಯ್ಕೆ ಬಯಸಿದ್ದಾರೆ. ಮಾಜಿ ಶಾಸಕ ಕೆ.ಟಿ.ಚಂದ್ರಶೇಖರ್ ಬೆಂಬಲಿಗನಾದ ವಿ.ಡಿ.ಹರೀಶ್, ಜೆಡಿಎಸ್ ಬೆಂಬಲಿತ ಹೆಚ್.ಪಿ.ಮಂಜು ವಿರುದ್ಧ ಗೆಲ್ಲುವ ಛಾನ್ಸ್ ಹೆಚ್ಚಾಗಿದೆ.

ಮದ್ದೂರು ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಚಿಕ್ಕರಾಮೇಗೌಡ ಕಣಕ್ಕಿಳಿದಿದ್ದಾರೆ. ಮಾಜಿ ಸಿಎಂ ಎಸ್.ಎಂ.ಕೃಷ್ಣರ ಕಟ್ಟಾ ಬೆಂಬಲಿಗ ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣನ ತಮ್ಮನಾದ ಚಿಕ್ಕರಾಮೇಗೌಡಗೆ ಕಲ್ಪನಾ ಸಿದ್ದರಾಜು, ಗುರುಚರಣ್, ಮಧು ಮಾದೇಗೌಡ ಮೊದಲಾದವರ ಬೆಂಬಲವಿದೆ. ಚಿಕ್ಕರಾಮೇಗೌಡ ವಿರುದ್ಧ ಸ್ಪರ್ಧಿಸಿರುವ ಜೆಡಿಎಸ್ ಬೆಂಬಲಿತ ಎಂ.ಹೊನ್ನೇಗೌಡ, ಸಚಿವ ಅಂಬರೀಶ್‌ರ ಹತ್ತಿರದ ಸಂಬಂಧಿ. ಅಲ್ಲದೇ ಶಾಸಕ ಡಿ.ಸಿ.ತಮ್ಮಣ್ಣನ ಬೆಂಬಲವೂ ಇದೆ. ಅಂಬರೀಶ್ ಹಾಗೂ ಡಿ.ಸಿ.ತಮ್ಮಣ್ಣ ಇಬ್ಬರೂ ಎಸ್.ಎಂ.ಕೃಷ್ಣ ಬೆಂಬಲಿಗ ಕಾಂಗ್ರೆಸ್ ಅಭ್ಯರ್ಥಿ ಚಿಕ್ಕರಾಮೇಗೌಡರನ್ನು ಹಣಿಯಲು ಕೈ ಜೋಡಿಸಿದ್ದಾರೆಂಬ ಮಾತುಗಳೂ ಕೇಳಿಬರುತ್ತಿವೆ.

ಶ್ರೀರಂಗಪಟ್ಟಣ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ರಾಮಕೃಷ್ಣ, ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಎಸ್.ವಿ.ಚಲುವ ರಾಜು ಕಣದಲ್ಲಿದ್ದು, ಇಬ್ಬರ ನಡುವೆ ಸಮಬಲದ ಫೈಟ್ ನಡೆದಿದೆ. ಕೈಗಾರಿಕಾ ಸಹಕಾರ ಸಂಘ, ಕಾರ್ಮಿಕ ಸಹಕಾರ ಸಂಘಗಳ ಕ್ಷೇತ್ರದಿಂದ ಕೌಡ್ಲೆ ಚನ್ನಪ್ಪ, ವಿಜಯ್‌ಕುಮಾರ್ ಹಾಗೂ ಕಾಂಗ್ರೆಸ್ ಪಕ್ಷದ ವೈ.ಎನ್.ಚಂದ್ರು, ಕೆ.ಎಲ್. ದೊಡ್ಡಲಿಂಗೇಗೌಡ, ರಾಜೀವ್ ಸೇರಿ ಐದು ಮಂದಿ ಸ್ಪರ್ಧಿಸಿದ್ದಾರೆ. ಕೌಡ್ಲೆ ಚನ್ನಪ್ಪ, ದೊಡ್ಡಲಿಂಗೇಗೌಡ ಮತ್ತು ರಾಜೀವ್ ನಡುವೆ ತ್ರಿಕೋನ ಸ್ಪರ್ಧೆ ಇದೆ. ಹಣವೇ ಪ್ರಧಾನವಾಗಿರುವ ಈ ಚುನಾವಣೆಯಲ್ಲಿ ಹಣವಿದ್ದವರಿಗೆ ಮಣೆ ಹಾಕುವ ಸಂಭವ ಹೆಚ್ಚು. ಇನ್ನು ಕಳೆದ ಬಾರಿ ಸ್ಪರ್ಧಿಸಿ ಎಂಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿದ್ದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಈ ಬಾರಿ ಕಣಕ್ಕಿಳಿದಿಲ್ಲ. ಶಾಸಕ ನರೇಂದ್ರಸ್ವಾಮಿ ಕೊಟ್ಟ ಏಟಿನಿಂದ ಮಳವಳ್ಳಿ ಟಿಎಪಿಸಿಎಂಎಸ್‌ನ್ನು ಕಳೆದುಕೊಂಡಿರುವ ಮರಿತಿಬ್ಬೇಗೌಡ, ಈ ಬಾರಿ ಸ್ಪರ್ಧಿಸಿದರೆ ಮತ್ತೆ ನರೇಂದ್ರಸ್ವಾಮಿಯೇ ಫೀಲ್ಡ್‌ಗಿಳಿದು ಸೋಲಿಸುವುದು ಶತಃಸಿದ್ಧ ಎಂದು ಸ್ಪಷ್ಟಪಡಿಸಿಕೊಂಡ ನಂತರವೇ ಕಣಕ್ಕೆ ಇಳಿಯದೆ ಮಾನ ಉಳಿಸಿಕೊಂಡಿದ್ದಾರೆ.

ಒಟ್ಟಾರೆ ಎಂಡಿಸಿಸಿ ಬ್ಯಾಂಕ್‌ನಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷದ ಬೆಂಬಲಿತರೇ ಅತಿಹೆಚ್ಚು ಸ್ಥಾನಗಳನ್ನು ಪಡೆದು ಸಂಪೂರ್ಣ ಬಹುಮತದೊಂದಿಗೆ ಅಧಿಕಾರ ಹಿಡಿಯುವುದು ಖಚಿತವಾದಂತಿದೆ. ನಿರ್ದೇಶಕರಾಗಿ ಹಣ, ಅಧಿಕಾರಕ್ಕಾಗಿಯೇ ಲಕ್ಷಲಕ್ಷ ಹಣ ಖರ್ಚು ಮಾಡುವ ಇಂತಹವರಿಂದ ಎಂಡಿಸಿಸಿ ಬ್ಯಾಂಕ್ ಉದ್ಧಾರವಾಗುವುದು ಕನಸಿನ ಮಾತಾಗಿದೆ.

■ ವರದಿಗಾರ

8 ...ರುದ್ರತಾಂಡವ

..., ಆಸನದ ಕೆಳಗೆ ಆನಿಸಿ ಕೂರುವ ರುದ್ರೇಶ 'ಅದು ...ಗಳೂರಿನಿಂದ ಮಂತ್ರಿಗಳ ಕಚೇರಿಯಿಂದ ಬರಬೇಕು' ...ತ ಸುಮ್ಮನೇ ಅವರನ್ನು ಸತಾಯಿಸಿ ಇಂಜಿನಿಯರ್ ...ಚ್ಚಿ ಕಡೆ ಬೊಟ್ಟು ಮಾಡುತ್ತಾನೆ. ಇಂತಹ ಸಬೂಬು ... ರೋಸಿ ಹೋದವರನ್ನು ಹುಡುಕಿ ಡೀಲ್ ಕುದುರಿಸಿ, ...ತ್ರಿ ರುದ್ರೇಶನ ಮನೆಗೆ ಕರೆದುಕೊಂಡು ಬರುವ ಹೊಣೆ ...ಹೊತ್ತಿರೋದು ಹೆಲ್ತ್ ಇನ್ಸ್‌ಪೆಕ್ಟರ್ ಕಲಾದಗಿ. ತಾನು ...ನ ಪೇಟೆಯ ಕುಲಬಾಂಧವ ಎನ್ನುವ ಒಂದೇಒಂದು ... ಇಟ್ಟುಕೊಂಡು ವೃತ್ತಿಯನ್ನೇ ಮರೆತಿರುವ ಕಲಾದಗಿ, ...ದ್ರೇಶನ ಪಟ್ಟ ಏಜೆಂಟನಂತೆ ವರ್ತಿಸುತ್ತಿದ್ದಾನೆ. ಖಾತೆ ...ದಾವಣೆಗೆ ಮಿನಿಮಮ್ 20 ಸಾವಿರ ಡಿಮ್ಯಾಂಡ್ ...ಡುವ ರುದ್ರೇಶನ ಕೋಟೆ ಕಟ್ಟುವ ಪರವಾನಗಿಯಲ್ಲೂ ...ರಿ ಕಿತಾಪತಿ ಮಾಡುತ್ತಿದ್ದಾನೆ. ಇನ್ನು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷನಾಗಿರುವ ಪ್ರಕಾಶ ತಪಶೆಟ್ಟಿ, ನಗರಸಭೆ ಎದುರಿಗೇ ಇರುವ ಹಾಗೂ ತಾನು ಚೇರ್‌ಮನ್ ಆಗಿರುವ ಬಸವೇಶ್ವರ ಬ್ಯಾಂಕ್ ಕಚೇರಿಯಲ್ಲೇ ಬಿದ್ದುಕೊಂಡಿದ್ದರೂ ಗಾಂಧಾರಿ ಪಾತ್ರಧಾರಿಯಂತೆ ಮುಗುಮ್ಮಾಗಿ ಕುಳಿತಿರುತ್ತಾನೆಯೇ ಹೊರತು ಈ ದಗಲ್ಬಾಜಿಗಳನ್ನು ಪ್ರಶ್ನಿಸುವ ಗೋಜಿಗೇ ಹೋಗುವುದಿಲ್ಲ. ಯಾರಿಗೆ ಗೊತ್ತು, ಈ ಅವ್ಯವಹಾರಗಳಲ್ಲಿ ಅವನಿಗೂ ಒಂದು ಪಾಲಿದ್ದಿರಬಹುದು!

ರುದ್ರೇಶನ ಅವಾಂತರಗಳು

ಸಾರ್ವಜನಿಕ ಸೇವೆಯಲ್ಲಿರುವ ಅಧಿಕಾರಿಯೊಬ್ಬ ನೇರಾನೇರ ಚಕ್ರಮುಕ್ಕಳ ಹಾಕಿ ಈ ಪರಿ ಮುಕ್ಕುತ್ತಾನೆಂದರೆ, ಅವನ ಹಿಂದೆ ಪೊಲಿಟಿಕಲ್ ಪ್ರಭಾವ ಇದ್ದೇ ಇರುತ್ತದೆ. ರುದ್ರೇಶನಿಗೂ ಅಂತಹ ಇಬ್ಬರು ಮಾಜಿ ಮಂತ್ರಿ ಗಾಡ್‌ಫಾದರ್‌ಗಳಿದ್ದಾರೆ. ಒಬ್ಬರು ಬಸವರಾಜ ಬೊಮ್ಮಾಯಿ, ಮತ್ತೊಬ್ಬರು ಸಿ.ಎಂ. ಉದಾಸಿ.

ಚಿತ್ರದುರ್ಗ ಜಿಲ್ಲೆಯವನಾದ ರುದ್ರೇಶ್ ಜಾತಿಯಿಂದ ಸಾದರ ಲಿಂಗಾಯತ. ತೀರ್ಥಹಳ್ಳಿಯಲ್ಲಿ ಮದುವೆಯಾಗಿರುವ ಈತ ಮೊದಮೊದಲು ಹಳೆ ಮೈಸೂರು ಪ್ರಾಂತದಲ್ಲೇ ಸುತ್ತಾಡಿ ಕಮಾಯಿ ಕಂಡಿದ್ದ. ಕುಲಬಾಂಧವ ಎನ್ನುವ ಕಾರಣಕ್ಕೆ ಆಗಿನ್ನೂ ಮಂತ್ರಿಯಾಗಿದ್ದ ಬಸವರಾಜ್ ಬೊಮ್ಮಾಯಿಯ ಖಾಸಗಿ ದರ್ಬಾರು ಪ್ರವೇಶ ಮಾಡಿದ್ದ. ನಂತರ ಅದೇ ಬೊಮ್ಮಾಯಿಯ ಚುಂಗು ಹಿಡಿದು ಉದಾಸಿಯನ್ನು ಪರಿಚಯಿಸಿಕೊಂಡ ಈತ ಹಾವೇರಿ ತಾಲ್ಲೂಕಿನ ಹಾನಗಲ್‌ಗೆ ತಹಸೀಲ್ದಾರ್‌ನಾಗಿ ವಕ್ಕರಿಸಿ ಗದದ್ದಾಗ್ಗೆ ಮೇಯ್ದಿದ್ದ. ಪ್ರಚಾರಪ್ರಿಯ ರುದ್ರೇಶ ಹಲವಾರು ಸಂದರ್ಭಗಳಲ್ಲಿ ನಗೆಪಾಟಲಿಗೆ ಈಡಾದದ್ದೂ ಉಂಟು.

ಹಾನಗಲ್‌ಗೆ ತಹಸೀಲ್ದಾರ್‌ನಾಗಿ ಪಾದಾರ್ಪಣೆ ಮಾಡಿದ್ದೇ ತಡ ಉದಾಸಿ ಆಣತಿ, ಅಪ್ಪಣೆಯಂತೆ ಕೃಷಿ ಜಮೀನನ್ನು ಕೃಷಿಯೇತರ ಜಮೀನನ್ನಾಗಿ ವರ್ಗಾವಣೆ ಮಾಡಿ ಸಖತ್ ಕಮಾಯಿ ಕಂಡಿದ್ದ. ಬಂದಿದ್ದರಲ್ಲಿ ತನ್ನ ಪಾಲನ್ನು ನಿಯತ್ತಾಗಿ ತಲುಪಿಸುತ್ತಾನೆ ಎಂಬ ಕಾರಣಕ್ಕೇ ಈತ ಉದಾಸಿ ಪಾಳೆಯದ ಒಕ್ಕಲು ಸೇರಿದ್ದ. ಉದಾಸಿಯ ಹುಟ್ಟುಹಬ್ಬಕ್ಕೆ ಬಹಿರಂಗ ಸಮಾರಂಭದಲ್ಲಿ ಬಂಗಾರದ ಒಡವೆ ನೀಡಿದ್ದಲ್ಲದೇ ಉದಾಸಿ ಕಾಲಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ತಹಸೀಲ್ದಾರ್ ಸ್ಥಾನಕ್ಕೆ ಇರಬೇಕಾದ ಮರ್ಯಾದೆಯನ್ನೇ ಮಣ್ಣು ಪಾಲು ಮಾಡಿದ್ದ ಈ ರುದ್ರೇಶ. ಅವನ ಈ ಉದಾಸಿ ನಮಸ್ಕಾರ ಪ್ರಸಂಗ ಸಾರ್ವಜನಿಕ ವಲಯದಲ್ಲೂ ವಿಪರೀತ ಟೀಕೆಗೆ ಗುರಿಯಾಗಿತ್ತು.

ಬರೋಬ್ಬರಿ ಹತ್ತು ವರ್ಷ ಉದಾಸಿ ಆಶ್ರಯದಲ್ಲಿದ್ದ ರುದ್ರೇಶ, ಕಳೆದ ಚುನಾವಣೆಯಲ್ಲಿ ಉದಾಸಿ ಬಣ್ಣ ಬಟಾಬಯಲು ಮಗುಚಿಕೊಂಡ ನಂತರ ಹುಲ್ಲಿನ್ನ ಮೇಟಿಯ ನೆರವಿನಿಂದ ಬಾಗಲಕೋಟೆಗೆ ಅಟಕಾಯಿಸಿಕೊಂಡಿದ್ದಾನೆ. ಇಂತಹ ಸುಂಗಣ್ಣಿನಿಂದ ಬಾಗಲಕೋಟೆಗೆ ಮುಕ್ತಿ ಸಿಗುವುದು ಎಂದು?

■ ಮೇಘರಾಜ್



ರಾಜ್ ಫ್ಯಾಮಿಲಿ ಅತಂತ್ರ ಕುತಂತ್ರ ಷಡ್ಯಂತ್ರ





ಪೆಟ್ಟಿನ ಮೇಲೆ ಪೆಟ್ಟು, ಗಾಯದ ಮೇಲೆಯೇ ಬರೆಯೆಂಬಂತೆ ಗಾಂಧಿನಗರದ ಹೆಡ್ಡಾಫೀಸು ಮತ್ತೊಮ್ಮೆ ಆಘಾತಕ್ಕೀಡಾಗಿದೆ. ಎಷ್ಟೇ ಪ್ರಯತ್ನ ಪಟ್ಟರೂ ಪಾರ್ವತಮ್ಮನವರಿಗೆ ಊಟ ಸೇರುತ್ತಿಲ್ಲವಂತೆ. ರಾಘಣ್ಣ ಕೋರ್ಟಿಗೆ ಹೋಗಿ ಕೈಕಟ್ಟಿ ನಿಂತು ಬಂದಿದ್ದೇ ಹಾಸಿಗೆ ಹಿಡಿದವರು ಇನ್ನೂ ಎದ್ದಿಲ್ಲವಂತೆ. ಸದಾಶಿವನಗರದ ಮನೆಯಲ್ಲಿ ನೀರವ ಮೌನ. ಅಪ್ಪು ಮುಖದಲ್ಲಿ ಮಿಂಚೇ ಮಾಯ. ಇನ್ನು ಶಿವಣ್ಣ ತಾನೇ ತಾಯಿಗೇನೆಂದು ಸಮಾಧಾನ ಹೇಳಲು ಸಾಧ್ಯ?

ಕೈಬಿಟ್ಟ ದುಡ್ಡಿನ ಮೊತ್ತ ಮೂರು ಕೋಟಿಯಾ ಆರು ಕೋಟಿಯಾ ಬಲ್ಲವರಿಲ್ಲ, ಎಣಿಸ ಕೂತರೆ ಮನಸ್ಸಿಗೆ ಮತ್ತಷ್ಟು ನೋವೇ ಹೊರತು ಕೊರಗುವುದು ಕಮ್ಮಿಯಾಗುವುದಿಲ್ಲ, ಕೆಲವರ ಪ್ರಕಾರ ಆದ ಮೋಸದ ಮೊತ್ತ ಹತ್ತು ಕೋಟಿಯಂತೆ. ಇನ್ನೂ ಕೆಲವರು ಹದಿನಾಲ್ಕು ಕೋಟಿ ಎನ್ನುತ್ತಾರೆ. ಅಷ್ಟು ಮೊತ್ತದ ದುಡ್ಡನ್ನು ಎಲ್ಲಾ ಬಲ್ಲ ರಾಜ್ ಫ್ಯಾಮಿಲಿ ಕಳಕೊಂಡಿದ್ದಾದರೂ ಹೇಗೆಂಬ ಬಗ್ಗೆ ಯಾರಲ್ಲೂ ಮಾಹಿತಿಯಿಲ್ಲ, ಕನಿಷ್ಠ ಐದು ಕೋಟಿಯೆಂದು ಭಾವಿಸಿದರೂ ರಾಜ್ ಕುಟುಂಬದ ಮಟ್ಟಿಗದು ಸಣ್ಣ ಮೊತ್ತವೇನಲ್ಲ.

ದೀಪದ ಬುಡದಲ್ಲೇ ಕತ್ತಲೆಂಬಂತೆ ರಾಜ್ ಕುಟುಂಬದ ಆದಾಯ ಮೂಲ ವಹಿವಾಟು, ಸಿನಿಮಾ ಲೆಕ್ಕಾಚಾರಗಳು ಮತ್ತು ಆಸ್ತಿಪಾಸ್ತಿಗಳ ಸುತ್ತ ಕನ್ನಡ ಜನತೆಗಿರುವ ನಂಬಿಕೆಗಳೇ ವಿಚಿತ್ರ ಮತ್ತು ವಿಪರೀತ. ವಜ್ರೇಶ್ವರಿ ಕಂಬೈನ್ಸ್ ಕೇವಲ ಗಾಂಧಿನಗರದ ಹೆಡ್ಡಾಫೀಸಷ್ಟೇ ಅಲ್ಲ, ಇಡೀ ರಾಜ್ ಕುಟುಂಬದ ಶಕ್ತಿ ಕೇಂದ್ರ ಕೂಡ. ಈಗ ಅದೇ ದುಃಖದ ಮೂಲವಾಗಿದೆ. ಕಳೆದ 27 ವರ್ಷಗಳಿಂದ ವಜ್ರೇಶ್ವರಿಯ ಹಣಕಾಸು ಲೆಕ್ಕದ ಹೊಣೆ ಹೊತ್ತಿದ್ದ ಉಮೇಶ್ ಕೋಟೆಕಾರ್ ಎಂಬಾತ ಕಾಟನ್‌ಪೇಟೆಯ ಮಂಜುನಾಥ ಪ್ಯಾರಡೈಸ್ ಲಾಡ್ಜಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದು ಮೊನ್ನೆ ಜೂನ್ 5 ರಂದು.

ತನ್ನ ತಂದೆ ಆತ್ಮಹತ್ಯೆ ಮಾಡಿಕೊಳ್ಳಲು ವಜ್ರೇಶ್ವರಿ ಮಾಲೀಕರಾದ ರಾಘವೇಂದ್ರ ರಾಜ್‌ಕುಮಾರ್ ಮತ್ತವರ





ಪತ್ನಿ ಮಂಗಳಾ ಕೊಟ್ಟ ಕಿರುಕುಳವೇ ಕಾರಣವೆಂದು ಮೃತ ಉಮೇಶನ ಮಗ ವಿನಾಯಕ್ ತ್ಯಾಗರಾಜ್‌ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ. ಹೋದ ಗಂಟು ಸಾಲದೆಂಬಂತೆ ಕೋರ್ಟ್ ಕಟಕಟೆಯಲ್ಲಿ ನಿಂತು ಕೈಕಟ್ಟಬೇಕಾದ ಕರ್ಮ ರಾಘಣ್ಣ ದಂಪತಿಗಳದ್ದು. 27 ವರ್ಷಗಳ ಕಾಲ ಜೊತೆಗಿದ್ದು ದುಡಿದವನೇ ಬೆನ್ನಿಗಿರಿದನೆಂದರೆ ಇನ್ನೂ ಯಾರನ್ನು ತಾನೇ ನಂಬುವುದೆಂಬ ಕೊರಗು ರಾಘು ದಂಪತಿಗಳದ್ದು. ರಾಜ್ ಕುಟುಂಬಕ್ಕಿದು ಸರ್ವನಾಶವಲ್ಲವಾದರೂ ನಂಬಿ ಕೆಟ್ಟ ನೋವಿಗೆ ಮದ್ದೇನು ಪರಿಹಾರವೇನು?

ರಾಜ್ ಕುಟುಂಬದ ದೊಡ್ಡ ದೌರ್ಬಲ್ಯವೇ ಈ ಥರದ ಕುರುಡು ನಂಬಿಕೆ. ರಕ್ತ ಸಂಬಂಧಿಗಳ್ಯಾರೂ ಜೊತೆಗಿಲ್ಲ, ಪಾರ್ವತಮ್ಮನವರ ತಮ್ಮ ಚಿನ್ನೇಗೌಡರು ಆ ಕಾಲಕ್ಕೇ ಸಂಸ್ಥೆ ಬಿಟ್ಟು ಹೊರನಡೆದರು. ಮತ್ತೊಬ್ಬ ತಮ್ಮ ಎಸ್.ಎ. ಗೋವಿಂದರಾಜು ತಾವಾಯಿತು ತಮ್ಮ ಪಾಡಾಯಿತೆಂಬಂತೆ ವಜ್ರೇಶ್ವರಿಯಿಂದ ವಿಮುಖರಾದರು. ರಾಜ್ ತೀರಿಕೊಂಡ ತರುವಾಯ ವರದಪ್ಪನವರ ಕುಟುಂಬಕ್ಕೂ ಪಾರ್ವತಮ್ಮನವರಿಗೂ ಅಷ್ಟಕ್ಕಷ್ಟೇ. ಪಾರ್ವತಮ್ಮನವರ ಕೊನೇ ತಮ್ಮ ಶ್ರೀನಿವಾಸ್ ವಜ್ರೇಶ್ವರಿಯತ್ತ ತಲೆ ಹಾಕಿ ಯಾವುದೋ ಕಾಲವಾಯಿತು. ಮೂವರು ಗಂಡು ಮಕ್ಕಳು ಪೈಕಿ ಪುನೀತ್ ಮತ್ತು ರಾಘಣ್ಣ ಬಿಟ್ಟರೆ ಶಿವಣ್ಣ ಪ್ರತ್ಯೇಕಗೊಂಡು ತಾನಾಯಿತು ತನ್ನ ದಾರಿಯಾಯಿತು ಎಂಬಂತಿದ್ದುಬಿಟ್ಟರು. ಪುನೀತ್‌ಗೆ ವ್ಯವಹಾರ ಗೊತ್ತಿಲ್ಲ, ರಾಘಣ್ಣನಿಗೆ ಯಾವುದೂ ಬರಕತ್ತಿಲ್ಲ, ರಕ್ತ ಸಂಬಂಧಿಗಳು, ನೆಂಟರಿಸ್ಟರು, ಹಿತೈಷಿಗಳು ಒಬ್ಬೊಬ್ಬರಾಗಿ ದೂರಾದ ನಂತರ ಏನೆಲ್ಲಾ ಫಜೀತಿ, ಅವ್ಯವಸ್ಥೆಗೆ ತಲೆ ಕೊಡಬೇಕಾಗುತ್ತೋ ಅದೀಗ ಪಾರ್ವತಮ್ಮನವರನ್ನು ಆವರಿಸುತ್ತಿದೆ.

ಸದ್ಯ ರಾಜ್ ಕುಟುಂಬದ ಅಧಿಕೃತ ಮತ್ತು ಏಕೈಕ ಆದಾಯ ಮೂಲವೇ ವಜ್ರೇಶ್ವರಿ ಕಂಬೈನ್ಸ್. ರಾಘಣ್ಣನಿಗೆ ವಿ.ಕೆ. ಮೋಹನ್ ಪಾಲುದಾರಿಕೆಯಲ್ಲಿ ಹೋಟೆಲು ಉದ್ದಿಮೆಯಿದೆ. ರಾಜ್ ಮಾನಸ ಪುತ್ರನೆಂದೇ ಚಾಲ್ತಿಯಲ್ಲಿದ್ದ ಮೋಹನ್ ವ್ಯವಹಾರದಲ್ಲಿ ಚಾಣಾಕ್ಷ ಮತ್ತು ಶ್ರಮಜೀವಿ. ಈತನಕ ನಂಬಿಕೆಗೇನೂ ಧಕ್ಕೆ ಬಂದಿಲ್ಲ, ಮಿಕ್ಕಂತೆ ಗಾಂಧಿನಗರದ ರಾಜ್‌ಕುಮಾರ್ ಇಂಟರ್‌ನ್ಯಾಷನಲ್ ಹೋಟೆಲನ್ನು ಮಾರ್‍ಯ ಗ್ರೂಪ್ ಸಂಸ್ಥೆಗೆ ವಹಿಸಿಕೊಟ್ಟಿದ್ದಾರೆ. ಶಿವಣ್ಣನ ಔಟ್‌ಡೋರ್ ಯೂನಿಟ್ ಪೂರ್ತಿ ಪತ್ನಿ ಗೀತಾರ ಹಿಡಿತಕ್ಕೊಳಪಟ್ಟಿದೆ. ಇಷ್ಟು ಬಿಟ್ಟರೆ ರಾಜ್ ಕುಟುಂಬದ ಆದಾಯ ಮೂಲವೆಂದು ಜನ ಗುರುತಿಸುವುದು ವಜ್ರೇಶ್ವರಿ ಕಂಬೈನ್ಸ್ ಮಾತ್ರವಷ್ಟೆ.

ವಜ್ರೇಶ್ವರಿ ಕಂಬೈನ್ಸ್‌ನ ಖ್ಯಾತಿ, ಪ್ರತಿಷ್ಠೆಗಳದ್ದೇ ಪ್ರತ್ಯೇಕ ವೃತ್ತಾಂತವಾಗುತ್ತದೆ. ಅದು ಶುರುವಾಗಿದ್ದಕ್ಕೂ ಕಾರಣವಿದೆ. ಆ ಕಾಲಕ್ಕೆ 'ಗಿರಿಕನ್ಯೆ' ಬಿಡುಗಡೆಯಾಗಿ ಭರ್ಜರಿ ಬಾಕ್ಸ್ ಆಫೀಸ್ ಕಲೆಕ್ಷನ್ನಾಗುತ್ತಿದ್ದರೂ ಆದರ ನಿರ್ಮಾಪಕ ಎ. ದ್ವಾರಕಾನಾಥ್ ದುಡ್ಡೇ ಬರುತ್ತಿಲ್ಲ, ಸಿನಿಮಾ ಸಿಕ್ಕಾಪಟ್ಟೆ ಲಾಸು....! ಎಂದು ಕಳ್ಳಾಟಕ್ಕಿಳಿದಾಗ ಬೇಸತ್ತ ರಾಜ್ ತಮ್ಮದೇ ನಿರ್ಮಾಣ



ಸಂಸ್ಥೆ ಹುಟ್ಟುಹಾಕಲು ನಿರ್ಧರಿಸಿ ವಜ್ರೇಶ್ವರಿ ಕಂಬೈನ್ಸ್ ಸ್ಥಾಪಿಸಿದರು. ವಜ್ರೇಶ್ವರಿ ಅಸ್ತಿತ್ವಕ್ಕೆ ಬಂದನಂತರ ಹೊರಗಿನವರಿಗೆ ಕಾಲ್‌ಶೀಟ್ ಕೊಡುವುದನ್ನೇ ನಿಲ್ಲಿಸಿಬಿಟ್ಟರು. ರಾಜ್ ಬದುಕಿರುವ ತನಕ ವಜ್ರೇಶ್ವರಿ ಸಂಸ್ಥೆಯ ಹೊಣೆ ಹೊತ್ತಿದ್ದು ಪಾರ್ವತಮ್ಮ. ಹಳ್ಳಿ ಮೇಷ್ಟ್ರಾಗಿದ್ದ ತನ್ನ ತಮ್ಮ ಚಿನ್ನೇಗೌಡರನ್ನು ಬೆಂಗಳೂರಿಗೆ ಕರೆತಂದು ವಜ್ರೇಶ್ವರಿಯ ಹೊಣೆ ಹೊರಿಸಿ ಹುಬ್ಬಳ್ಳಿಯಲ್ಲೂ ಅದರ ಶಾಖೆಯೊಂದನ್ನು ತೆರೆದರು.

ಆ ಕಾಲಕ್ಕೆ ರಾಜ್ ಚಿತ್ರಗಳು ದುಡ್ಡು ಬಾಚುತ್ತಿದ್ದರೂ ನಿರ್ಮಾಪಕರು ಸುಳ್ಳು ಲೆಕ್ಕ ಕೊಟ್ಟು "ನಮಗೆ ಲಾಸ್ ಆಯಿತು. ಹಾಕಿದ ದುಡ್ಡೇ ಬರಲಿಲ್ಲ" ಎಂದು ಪುಡಿಕಾಸಿಗೆ ಕಾಲ್‌ಶೀಟ್ ಕೇಳುತ್ತಿದ್ದುದ್ದರ ವಿರುದ್ಧ ಹುಟ್ಟಿಕೊಂಡ ವಜ್ರೇಶ್ವರಿ ಸಂಸ್ಥೆ ಕೈಇಟ್ಟಿದ್ದೆಲ್ಲಾ ಚಿನ್ನ ಎಂಬ ಕಾಲವಿತ್ತು. ಹಾಲುಜೇನು, ಚಲಿಸುವ ಮೋಡಗಳು, ಹೊಸ ಬೆಳಕು, ಭಾಗ್ಯದ ಲಕ್ಷ್ಮಿ ಬಾರಮ್ಮ, ಅನುರಾಗ ಅರಳಿತು, ಸಮಯದ ಗೊಂಬೆ, ಜೀವನ ಚೈತ್ರ, ಅಪೂರ್ವ ಸಂಗಮ, ಧ್ರುವತಾರೆ, ಕೆರಳಿದ ಸಿಂಹ ಮುಂತಾದ ಚಿತ್ರಗಳೆಲ್ಲವೂ 25 ವಾರಕ್ಕಿಂತ ಕಮ್ಮಿ ಓಡಿದ್ದೇ ಕಮ್ಮಿ. ರಾಜ್ ನಟಿಸಿದ ಚಿತ್ರಗಳಿಂದ ದುಡ್ಡು ಹುಟ್ಟುತ್ತಿಲ್ಲ ಎಂಬ ಕೊಂಕನ್ನು ಸವಾಲಾಗಿ ಸ್ವೀಕರಿಸಿದ ಪಾರ್ವತಮ್ಮ ಕಟ್ಟಿದ ವಜ್ರೇಶ್ವರಿ ಸಾಮ್ರಾಜ್ಯವೇ ಕನ್ನಡ ಚಿತ್ರರಂಗದ ಪಾಲಿಗೆ 'ಕಲ್ಪವೃಕ್ಷ'ದಂತಾಯಿತು.


ಚಿನ್ನೇಗೌಡರ ನಂತರ ಎಸ್.ಎ. ಗೋವಿಂದರಾಜು ವಜ್ರೇಶ್ವರಿ ವಹಿಸಿಕೊಂಡರು. ಕೆಲಕಾಲ ಪಾರ್ವತಮ್ಮನವರೇ ಖುದ್ದು ನಿಂತು ವಜ್ರೇಶ್ವರಿಯನ್ನು ನಿಭಾಯಿಸಿದರು. ರಾಜ್ ಕಾಲಾಧೀನರಾಗಿ ಪಾರ್ವತಮ್ಮನವರೇ ಕ್ಯಾನ್ಸರ್‌ಗೆ ತುತ್ತಾದ ನಂತರ ವಜ್ರೇಶ್ವರಿಯ ಆಡಳಿತ ಸೂತ್ರ ಹಿಡಿದದ್ದು ರಾಘಣ್ಣ. ಶಿವಣ್ಣ ಬೇರೆ ಪ್ರತ್ಯೇಕಗೊಂಡರಲ್ಲ, ಹಾಗೆಂದು ಪಾರ್ವತಮ್ಮ ಕೈಕಟ್ಟಿ ಕೂರಲಿಲ್ಲ. ವಜ್ರೇಶ್ವರಿಯ 'ಬ್ಯಾನರ್ ಬಾಯ್' ಆಗಿ ಪುನೀತ್‌ರನ್ನು ಅಣಿಗೊಳಿಸಿದರು. ಬೇರೆ ನಟರಿಗೆ ಹೋಲಿಸಿದರೆ ಪುನೀತ್ ಸುರದ್ರೂಪಿಯಲ್ಲ, ಗೌರವರ್ಣವಿಲ್ಲ, ಆದರೆ ಅದೆಲ್ಲವನ್ನೂ ಮೀರಿ ನಿಲ್ಲಬಲ್ಲ ಛಲವಿತ್ತು ಪ್ರತಿಭೆ ರಕ್ತಗತವಾಗಿತ್ತು, ತನ್ನ ಶ್ರಮ ಮತ್ತು ಕಲೆ ಮಾತ್ರದಿಂದಲೇ ಪುನೀತ್ ಎದ್ದು ನಿಂತರು.

ವಜ್ರೇಶ್ವರಿ ಸಂಸ್ಥೆಯಿಂದ ಬಂದ ಪುನೀತ್ ಚಿತ್ರಗಳ್ಯಾವುದೂ ರಾಜ್ ಚಿತ್ರಗಳ ಮಟ್ಟಕ್ಕೇರದಿರಬಹುದು. ಆದರೆ ನಷ್ಟಕ್ಕೀಡಾಗಲಿಲ್ಲ, ಅಣ್ಣಾ ಬಾಂಡ್ ಮತ್ತು ಯಾರೇ ಕೂಗಾಡಲಿ ಒಂದಷ್ಟು ಕೈಸುಟ್ಟದ್ದು ಬಿಟ್ಟರೆ ಅಪ್ಪು, ಅಭಿ, ಹುಡುಗರು, ಜಾಕಿ ಇತ್ಯಾದಿ ಪುನೀತ್ ಚಿತ್ರಗಳೆಲ್ಲವೂ ಬಾಕ್ಸ್ ಆಫೀಸ್ ಚಿಂದಿಯೆಬ್ಬಿಸಿದವು. ಇದಕ್ಕೂ ಮುನ್ನ ಶಿವಣ್ಣನ ಓಂ, ಜನುಮದ ಜೋಡಿ, ಚಿಗುರಿದ ಕನಸು, ರಥಸಪ್ತಮಿ, ಆನಂದ್, ರಾಘಣ್ಣನ ನಂಜುಂಡಿ ಕಲ್ಯಾಣ, ಗಜಪತಿ ಗರ್ವಭಂಗ ಮುಂತಾದ ಚಿತ್ರಗಳೂ ವಜ್ರೇಶ್ವರಿಯ ಪ್ರತಿಷ್ಠೆ ಹೆಚ್ಚಿಸಿದವು.

ವಜ್ರೇಶ್ವರಿಯ ಇಷ್ಟೆಲ್ಲ ಏಳುಬೀಳು ವಿಜೃಂಭಣೆಗೆ ಸಾಕ್ಷಿಯಾಗಿ ನಿಂತವನೇ ಅದರ ಅಕೌಂಟೆಂಟ್ ಉಮೇಶ್ ಕೋಟೆಕಾರ್. ವಜ್ರೇಶ್ವರಿಯ ಮ್ಯಾನೇಜರ್ ಪುಟ್ಟಸ್ವಾಮಿಯನ್ನು ಬಿಟ್ಟರೆ ರಾಜ್ ಕುಟುಂಬ ಅತೀ ಹೆಚ್ಚಾಗಿ ನಂಬಿದ್ದು ಮತ್ತು ಅವಲಂಬಿಸಿದ್ದು ಈತನನ್ನೇ. ಮ್ಯಾನೇಜರ್ ಪುಟ್ಟಸ್ವಾಮಿಗಿಂತಲೂ ರಾಜ್ ಕುಟುಂಬದ ಅಂತಃಪುರಕ್ಕೆ ಹತ್ತಿರದವನಾಗಿದ್ದ ಉಮೇಶ್‌ನನ್ನು ದೂರದ ಕುಂದಾಪುರದಿಂದ ಕರೆತಂದು ಹಣಕಾಸಿನ ಲೆಕ್ಕ ನೋಡಿಕೊಳ್ಳುವ ಹುದ್ದೆಗೆ ಸೇರಿಸಿದ್ದು ಪಾರ್ವತಮ್ಮನವರ ಮತ್ತೊಬ್ಬ ಸಂಬಂಧಿಯಾದ ಗ್ರೀನ್‌ಹೌಸ್ ವಾಸು.

ಉಮೇಶ್ ರಾಜ್ ಕುಟುಂಬಕ್ಕೆ ಪರಮನಿಷ್ಠ. ಯಾವತ್ತೂ ಲೆಕ್ಕ ತಪ್ಪಿದವನಲ್ಲ, ನಯಾಪೈಸೆಯನ್ನೂ ಬಿಟ್ಟವನಲ್ಲ, ಜಾತಿಯಲ್ಲಿ ಬ್ರಾಹ್ಮಣ ಬೇರೆ. ಕೌಟುಂಬಿಕ ಹಣಕಾಸಿನ ಲೆಕ್ಕಾಚಾರವೆಂದರೆ ಅದು ಮನೆ ಲಕ್ಷ್ಮಿಯ ಪೂಜೆಯಿದ್ದಂತೆ ಮತ್ತು ಬ್ರಾಹ್ಮಣರೇ ಅಂಥದ್ದು ನಿಭಾಯಿಸುವುದು ಸೂಕ್ತವೆಂಬ ಮೌಢ್ಯವೂ ರಾಜ್ ಕುಟುಂಬಕ್ಕಿತ್ತೇನೋ. ಕಳೆದ 27 ವರ್ಷಗಳಿಂದ ನಿಯತ್ತಾಗಿ ದುಡಿಯುತ್ತಿದ್ದಾನೆಂದೇ ನಂಬಿದ ರಾಜ್ ಕುಟುಂಬ ಕೇವಲ ವಜ್ರೇಶ್ವರಿಯ ಮಟ್ಟಿಗಷ್ಟೇ ಉಮೇಶನನ್ನು ಸೀಮಿತಗೊಳಿಸಲಿಲ್ಲ, ರಾಘಣ್ಣನ ವೈಯಕ್ತಿಕ ಬ್ಯಾಂಕ್ ಖಾತೆ, ಪತ್ನಿ ಮಂಗಳಾರ ಖಾಸಗಿ ಬ್ಯಾಂಕ್ ಅಕೌಂಟು, ಪುನೀತ್‌ನ ಹಣಕಾಸು ನಿರ್ವಹಣೆ, ಅವರ ಕುಟುಂಬದ ಬ್ಯಾಂಕ್ ಖಾತೆಗಳ ದೇಖಾರೇಖಿ ಎಲ್ಲಕ್ಕೂ ಉಮೇಶನನ್ನೇ ನೆಚ್ಚಿಕೊಂಡರು.

ಅಕ್ಕಾವ್ರೇ ಕಣ್ಣುಮುಚ್ಚಿ ಉಮೇಶ ಹೇಳಿದಲ್ಲಿಗೆ ಸಹಿ ಹಾಕುತ್ತಾರೆಂದರೆ ಇನ್ನು ತಾನು ಪ್ರಶ್ನಿಸಿದರೆ ಉಳಿಯುವುದುಂಟಾ ಎಂಬ ಅಳುಕು ಮ್ಯಾನೇಜರ್ ಪುಟ್ಟಸ್ವಾಮಿಯದ್ದು, ಇಡೀ ವಜ್ರೇಶ್ವರಿಯ ಸಿನಿಮಾ



ವಜ್ರೇಶ್ವರಿ ಕಂಬೈನ್ಸ್



ರಾಘಣ್ಣ-ಮಂಗಳ



...ಧಿ ಶೂಟಿಂಗ್ ಇತ್ಯಾದಿಗಳೆಲ್ಲವನ್ನೂ ಆ ...ಂದ ನಿರ್ವಹಿಸುತ್ತಾ ಬಂದವನು ಚನ್ನ. ...ಗೂ ಅಕ್ಕಾವ್ರಿಗೂ ನಂಬಿಕಸ್ಥನಾಗಿದ್ದ ಚನ್ನನಿಗೂ

ಲೆಕ್ಕಿಗ ಉಮೇಶನಿಗೆ ವಂಚನೆ ಗೊತ್ತಿರಲಿಲ್ಲ. ಹೀಗಾಗಿ ಉಮೇಶನನ್ನು ಪ್ರಶ್ನಿಸುವವರ್‍ಯಾರೂ ವಜ್ರೇಶ್ವರಿಯಲ್ಲಿ ಇರಲಿಲ್ಲ.

ಯಾವತ್ತು ರಾಘಣ್ಣನಿಗೆ ಹೃದಯದ ಸಮಸ್ಯೆಯಾಗಿ ವಿದೇಶಿ ಚಿಕಿತ್ಸೆಗೆ ಹೋಗಬೇಕಾಗಿ ಬಂತೋ ಯಾವುದಕ್ಕೂ ಇರಲಿ ಎಂದು ಒಂದಷ್ಟು ಖಾಲಿ ಚೆಕ್ಕುಗಳಿಗೆ ಸಹಿ ಹಾಕಿಕೊಟ್ಟಿದ್ದರು. ಹಾಗೆಯೇ ರಾಘಣ್ಣ ಆಸ್ಪತ್ರೆಯಲ್ಲಿದ್ದಾಗ ಖರ್ಚು ವೆಚ್ಚಕ್ಕೆ ಕಷ್ಟವೆಂದು ಆಸ್ಪತ್ರೆಯಿಂದ ಬಂದನಂತರ ರಾಘಣ್ಣನಿಂದ ಸಹಿ ಪಡೆದು ವಾಪಸ್ಸು ನಿಮ್ಮ ಅಕೌಂಟಿಗೆ ಹಾಕುತ್ತೇನೆಂದು ಪುನೀತ್‌ರಿಂದಲೂ ಚೆಕ್ಕು ಪಡೆದ. ಮತ್ತೊಂದೆಡೆ ರಾಘಣ್ಣನ ಪತ್ನಿ ಮಂಗಳಾರಿಂದಲೂ ಓವರ್ ಡ್ರಾಫ್ಟ್ ಚಲನ್ನುಗಳ ಮೇಲೆ ಸಹಿ ಪಡೆದ.

ರಾಘಣ್ಣ ಆಸ್ಪತ್ರೆ ಸೇರಿದ್ದ ವಿಷಮ ಪರಿಸ್ಥಿತಿಯಲ್ಲಿ ರಾಜ್ ಕುಟುಂಬದ ಯಾರೂ ಏತಕ್ಕೆಂದು ಕೇಳದೆ ಉಮೇಶ ಹೇಳಿದ ಚೆಕ್ಕು, ಚಲನ್, ಓಡಿಗಳ ಮೇಲೆ ಸಹಿ ಹಾಕಿ ಕೊಡುತ್ತಿದ್ದರು. ಪುನೀತ್‌ಗೆ ತಿಳಿಸದೇ ಮಂಗಳಾರಿಂದ, ಅವರಿಗೆ ಹೇಳದೇ ಪುನೀತ್‌ರಿಂದ, ಪುನೀತ್ ಗಮನಕ್ಕೆ ತಾರದೇ ಪಾರ್ವತಮ್ಮನವರಿಂದ, ಇವರ್‍ಯಾರಿಗೂ ಹೇಳದೇ ಶಿವಣ್ಣನಿಂದ ಬೇಕಾಬಿಟ್ಟಿ ಚೆಕ್ಕು, ಓಡಿ, ಡ್ರಾ ಮಾಡಿಕೊಂಡ ಉಮೇಶ ಮೊದಲೇ ರಾಘಣ್ಣನಿಂದ ಸಹಿ ಪಡೆದಿದ್ದ ಚೆಕ್ಕುಗಳನ್ನು ಬಳಸಿಕೊಂಡು ಕೋಟಿ ಕೋಟಿಯ ಲೆಕ್ಕದಲ್ಲಿ ಡ್ರಾ ಮಾಡುತ್ತಲೇ ಬಂದ. ಹೃದಯದ ತೊಂದರೆಯಲ್ಲಿ ತಾವು ಕೊಟ್ಟಿದ್ದ ಖಾಲಿ ಚೆಕ್ಕುಗಳ ಲೆಕ್ಕವನ್ನೇ ರಾಘಣ್ಣ ಮರೆತಿದ್ದರು.

ಹೇಗೂ ಅಕೌಂಟೆಂಟ್ ಉಮೇಶನ ಮೇಲೆ ಅಚಲ ವಿಶ್ವಾಸವಿತ್ತಲ್ಲ, ಬೇರೆ ಯಾರೇ ರೊಕ್ಕ ಹೊಡೆದರೂ ಉಮೇಶ ಅಂಥವನಲ್ಲ ಎಂಬ ಅಂಧ ವಿಶ್ವಾಸವನ್ನು ಆತ ಇನ್ನಿಲ್ಲದಂತೆ ನಗದಾಗಿಸಿಕೊಂಡಿದ್ದ. ಅದು ಗಮನಕ್ಕೆ ಬರುವ ಹೊತ್ತಿಗೆ ಕಾಲ ಮಿಂಚಿತ್ತು. ಬರುಬರುತ್ತ ಉಮೇಶನ ಜೀವನಶೈಲಿಯೇ ಬದಲಾಯಿತು. ಸ್ವಿಫ್ಟ್ ಕಾರೊಂದನ್ನು ದೂರದಲ್ಲೆಲ್ಲೋ ನಿಲ್ಲಿಸಿ ಬರುತ್ತಿದ್ದಾನೆಂಬ ಮಾಹಿತಿ ಬಂತು. ಇದ್ದಕ್ಕಿದ್ದಂತೆ ಚಕ್ಕರ್ ಹಾಕುತ್ತಿದ್ದ. ಇತ್ತೀಚೆಗೆ ವಜ್ರೇಶ್ವರಿಯಿಂದಲೇ ನಿರ್ಮಿಸಿದ್ದ ವಿನಯ್ ಅಭಿನಯದ 'ಸಿದ್ಧಾರ್ಥ' ತೆರೆಕಂಡು ಲುಕ್ಸಾನಾಯಿತಲ್ಲ, ಅದರ ಲೆಕ್ಕಕ್ಕೆ ಕೂತು ರಾಘಣ್ಣ ಒಂದೊಂದಾಗಿ ದಾಖಲೆಗಳ ಪರಿಶೀಲನೆಗಿಳಿದಾಗಲೇ ಮೋಸದ ವಾಸನೆ ಹೊಡೆದಿತ್ತು.

ಮೊದಮೊದಲು ಲಕ್ಷದ ಲೆಕ್ಕದಲ್ಲಿದ್ದ ವ್ಯತ್ಯಾಸ ಬರುಬರುತ್ತ ಕೋಟಿಗೇರತೊಡಗಿತ್ತು, ಬ್ಯಾಂಕ್ ಪಾಸ್‌ಬುಕ್‌ನಲ್ಲಿದ್ದ ಎಂಟ್ರಿಗೂ ಖಾತೆಯಲ್ಲಿದ್ದ ವಾಸ್ತವಕ್ಕೂ ಅಜಗಜಾಂತರ ವ್ಯತ್ಯಾಸವಿತ್ತು. ಮೇ 15ರ ಹೊತ್ತಿಗೆ ಇಡೀ ವಜ್ರೇಶ್ವರಿ ವಹಿವಾಟಿನ ಕೂಲಂಕಷ ಪರಿಶೀಲನೆಗಿಳಿದ ರಾಘಣ್ಣನಿಗೆ ಲೆಕ್ಕದ ಏರುಪೇರು ನೋಡಿಯೇ ತಲೆತಿರುಗಿದೆ. ಥೇಂಬರಿಗೆ ಕರೆಸಿದ್ದೇ ಉಮೇಶನಿಗೆ ಭೂತ ಬಿಡಿಸಿದ್ದಾರೆ. ಇದು ಪತ್ನಿ ಮಂಗಳಾರ ಕಿವಿ ಮುಟ್ಟುವ ಹೊತ್ತಿಗೆ ಉಮೇಶ ಕೆಲಸಕ್ಕೇ ಚಕ್ಕರ್ ಹಾಕಿ ನಾಪತ್ತೆಯಾಗಿದ್ದ. ಮಂಗಳಾ ಫೋನ್ ಮಾಡಿ ದಬಾಯಿಸಿದ್ದಾರೆ. ಮನೆ ಮಗನಂತೆ ನಿನ್ನನ್ನು ನಂಬಿದ್ದಕ್ಕೆ ಬೇರೆ ಯಾರೂ ಮಾಡದಷ್ಟು ಅನ್ಯಾಯ ಮಾಡಿಬಿಟ್ಟೆ. ನಿನ್ನನ್ನು ಸುಮ್ಮನೆ ಬಿಡ್ತೀವಿ ಅಂದುಕೊಂಡ್ಯಾ? ಮೊದಲು ದುಡ್ಡು ತಂದು ಒಪ್ಪಿಸು... ಎಂದು ರೇಗಿದ್ದಾರೆ.

ಇಷ್ಟಾಗಿದ್ದೇ ಚೆನ್ನೈಗೆ ಪರಾರಿಯಾದ ಉಮೇಶ ಅಲ್ಲಿಂದಲೇ ರಾಘುಗೆ ಫೋನ್ ಮಾಡಿ 'ಅಣ್ಣಾ ನನ್ನಿಂದ ತಪ್ಪಾಗಿದೆ. ಯಾರನ್ನೋ ನಂಬಿ ನಾನು ಮೋಸ ಹೋದೆ. ನನ್ನ ಮನೆ ಮಾರಿಯಾದ್ರೂ ನಿಮ್ಮ ದುಡ್ಡು ತೀರಿಸ್ತೀನಿ... ನೀವು ಯೋಚ್ನೆ ಮಾಡ್ಬೇಡಿ ಅಣ್ಣಾ' ಎಂದು ಬೇಡಿಕೊಂಡಂತೆ ನಟಿಸಿದ್ದಾನೆ... ಮೇ ತಿಂಗಳ ಕೊನೇ ವಾರದಲ್ಲಿ ಖುದ್ದು ರಾಘಣ್ಣ ಮತ್ತು ಮಂಗಳಾ ಸೇರಿಕೊಂಡು ಆಡಿಟರ್ ಒಬ್ಬರ ಜೊತೆ ತ್ಯಾಗರಾಜನಗರದ ಮನೆ ಹೊಕ್ಕು ಆತ ಹೊತ್ತೊಯ್ದಿದ್ದ ಲೆಕ್ಕದ ಪುಸ್ತಕ ಕೇಳಿದ್ದಾರೆ. ಇದಾಗಿ ಎರಡೇ ದಿನಕ್ಕೆ ಮ್ಯಾನೇಜರ್ ಪುಟ್ಟಸ್ವಾಮಿ, ಚನ್ನ ಮುಂತಾದವರನ್ನು ಕಳಿಸಿ. ಕೆಲ ದಾಖಲೆಗೆ ಉಮೇಶನ ಸಹಿಯನ್ನೂ ಪಡೆದಿದ್ದಾರೆ. ಬಹುಶಃ ಅದು ಆತ ವಂಚಿಸಿದ್ದ ದುಡ್ಡಿನ ಬಗ್ಗೆ ಪಡೆದ ಹೇಳಿಕೆ ಅಥವಾ ಮಾಡಿದ ಮೋಸಕ್ಕೆ ಪ್ರತಿಯಾಗಿ ತನ್ನ ತ್ಯಾಗರಾಜನಗರದ ಮನೆಯನ್ನು ಮಾರುವ ಒಪ್ಪಂದದ ಪತ್ರವಾಗಿರಬಹುದು.

ತನ್ನ ತ್ಯಾಗರಾಜನಗರದ ಮನೆ ಮತ್ತು ಹೊಡೆದ ದುಡ್ಡಲ್ಲೇ ಬನಶಂಕರಿಯಲ್ಲಿ ಖರೀದಿಸಿದ್ದ 60x40 ನಿವೇಶನವನ್ನು ವಜ್ರೇಶ್ವರಿ ಸಂಸ್ಥೆಗೆ ವಹಿಸಿಕೊಡುತ್ತೇನೆಂದು ಒಪ್ಪಿಕೊಂಡಿದ್ದ ಉಮೇಶ ಜೂನ್ 2 ನೇ ತಾರೀಖಿಗೆ ಬಂದು ದಾಖಲೆಗಳಿಗೆ ಸಹಿ ಹಾಕಬೇಕಿತ್ತು, ಗಾಂಧಿನಗರದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ತನ್ನ ಆಸ್ತಿ ಪರಭಾರೆ ಮಾಡಿಕೊಟ್ಟು ಬಚಾವಾಗುವ ಬಗ್ಗೆ ವಾಗ್ದಾನವನ್ನು ಮಾಡಿದ್ದ. ಆದರೆ ದುಷ್ಟತನವಿತ್ತಲ್ಲ, ಹೊಡೆದ ದುಡ್ಡನ್ನು ತಾನು ಜಸ್ಟೇಪಿ ದುಡಿಯುವುದುಂಟೆ? ಇದ್ದ ಮನೆ, ಮಾಡಿದ ಸೈಟೇ ಕೈಬಿಟ್ಟತೆಂದರೆ ಹೆಂಡತಿ ಮಕ್ಕಳ ಗತಿಯೇನು?

ಉಂಡ ಮನೆಗೆ ಕನ್ನವಿಟ್ಟಾದರೂ ತನ್ನ ಹೆಂಡತಿ ಮಕ್ಕಳು ಹಾಯಾಗಿರಲೆಂಬ ದುಷ್ಟ ನಿರ್ಧಾರಕ್ಕೆ ಬಂದ ಉಮೇಶ್ ಜೂನ್ ಎರಡರಂದು ನಾಪತ್ತೆಯಾದವನು ಹೆಣವಾಗಿ ಪತ್ತೆಯಾಗಿದ್ದು ಜೂನ್ 4 ರಂದು. ಕಾಟನ್‌ಪೇಟೆಯ ಮಂಜುನಾಥ ಪ್ಯಾರಡೈಸ್ ಲಾಡ್ಜಿನ 202 ನೇ ನಂಬರ್ ಕೊಠಡಿಯಲ್ಲಿ ಹೆಣವಾಗಿದ್ದ. ಅಪ್ಪನ ಪಾಪದ ಪಾಲುದಾರನೆಂಬಂತೆ ಉಮೇಶನ ಮಗ ವಿನಾಯಕ ಅನ್ನ ಕೊಟ್ಟ ಧಣಿಗಳ ವಿರುದ್ಧವೇ ದೂರು ದಾಖಲಿಸಿದ್ದಾನೆ. ಮೋಸ ಹೋಗಿದ್ದು ಮೊದಲ ತಪ್ಪು, ಕದ್ದ ದುಡ್ಡು ಕೇಳಿದ್ದು ಅದಕ್ಕಿಂತ ದೊಡ್ಡ ತಪ್ಪು.

ಪಾಪಿ ಸೊತ್ತೇನೋ ಪರಾಯಿ ಪಾಲಾಗುವುದುಂಟು. ಆದರೆ ನಿಷ್ಪಾಪಿಗಳ ಸೊತ್ತೂ ಪಾಪಿ ಪಾಲಾಗುವುದೆಂದರೆ ಇದೇನಾ? ಪಾರ್ವತಮ್ಮನವರ ಕೊನೆಗಾಲಕ್ಕೂ ನೆಮ್ಮದಿಯಿಲ್ಲ. ನಿಯತ್ತಿನ ನೌಕರರನ್ನು ನಂಬಿದ ತಪ್ಪಿಗೆ ರಾಜ್ ಕುಟುಂಬಕ್ಕೂ ಬವಣೆ ತಪ್ಪಲಿಲ್ಲ.

■ ರಾ. ಸೋಮನಾಥ್

...ೋಟಿ ಲೆಕ್ಕದ ಪುನೀತ್ ಅಕೌಂಟಿನಲ್ಲಿ ...ಳಿದದ್ದು 1300 ರೂ.



ರಾಜ್ ಕುಟುಂಬದ ಹಣಕಾಸು ವ್ಯವಹಾರಗಳಾಗಲಿ, ಯಾವುದೇ ಚಿತ್ರವೊಂದರ ...ನಷ್ಟದ ಲೆಕ್ಕವಾಗಲಿ ಈತನಕ ಲೀಕ್ ಆಗಿದ್ದಿಲ್ಲ. ಭೂಮಿಯೇ ತಲೆಕೆಳಕಾದರೂ ...ತಮ್ಮ ಕುಟುಂಬದ ಗುಟ್ಟು ಬಿಟ್ಟು ಕೊಟ್ಟವರಲ್ಲ ಎಂದೇ ಗಾಂಧಿನಗರ ...ಸುತ್ತದೆ. ಅದು ನಿಜ ಕೂಡ. ಈಗಲೂ ಅಷ್ಟೇ ಅಕೌಂಟೆಂಟ್ ಉಮೇಶ್ ...ಸಿದ ಮೊತ್ತದ ಬಗ್ಗೆ ಯಾರೂ ಬಾಯಿ ಬಿಡುತ್ತಿಲ್ಲ.

...ರಾಜ್ ಫ್ಯಾಮಿಲಿಯ ಮೂಲಗಳೇ ಹೇಳುವಂತೆ ಪಾರ್ವತಮ್ಮನವರ ಹಿರಿಯ ...ೋದರ ಎಸ್.ಎ. ಗೋವಿಂದರಾಜ್‌ಗೆ ಉಮೇಶ್ ಒಂದೂವರೆ ಕೋಟಿ ...ಸಿದ್ದಾನೆ. ಪಾರ್ವತಮ್ಮನವರ ದ್ವಿತೀಯ ಪುತ್ರಿ ಪೂರ್ಣಿಮಾರಿಂದ ಓಡಿಗೆ ಪಡೆದುಕೊಂಡು 50 ಲಕ್ಷ ಯಾಮಾರಿಸಿದ್ದಾನೆ. ಇವರಿಬ್ಬರಿಗಿಂತಲೂ ಮೋಸದ ...ಕಿಗೆ ಬಿದ್ದದ್ದು ಪುನೀತ್. ಪುನೀತ್‌ರ ಕರೆಂಟ್ ಅಕೌಂಟಿನಲ್ಲಿದ್ದ ಕೋಟಿ ...ದ ಫಿಕ್ಸೆಡ್ ಡಿಪಾಜಿಟ್ಟಿನ ಮೇಲೆ ಓವರ್‌ಡ್ರಾಫ್ಟ್ ಅಸ್ತ್ರ ಪ್ರಯೋಗಿಸಿದ ...ೇಶನ ಕೈಚಳಕದ ಫಲವಾಗಿ ಅಕೌಂಟ್ ಬ್ಯಾಲೆನ್ಸೆಂದು 1300 ರೂಪಾಯಿ ...ಯ ಹೊರತಾಗಿ ಏನೇನೂ ಉಳಿದಿಲ್ಲ!



ಪೂರ್ಣಿಮಾ

ಪಾಪ ಪುನೀತ್‌ಗೆ ತಲೆಚಚ್ಚಿಕೊಳ್ಳುವ್ರೊಂದೇ ಬಾಕಿ. ಇದಕ್ಕಿಂತಲೂ ಹೀನಾಯ ಗತಿ ಪಾರ್ವತಮ್ಮ-ರಾಘಣ್ಣರ ಜಂಟಿ ಅಕೌಂಟಿನದ್ದು, ಕಮ್ಮಿಯೆಂದರೂ ಮೂರರಿಂದ ಐದು ಕೋಟಿಯಷ್ಟನ್ನು ಉಮೇಶ ತಾಯಿ-ಮಗನ ಖಾತೆಯಿಂದ ದೋಚಿದ್ದಾನಂತೆ. ಇದು ರಾಜ್ ಕುಟುಂಬದ ಆಪ್ತರೊಬ್ಬರು ನೀಡುವ ಮಾಹಿತಿಯಾದರೆ ವಜ್ರೇಶ್ವರಿಯ ಮೂಲಗಳೇ ಚಿತ್ರವಿಚಿತ್ರ ಕತೆ ಬಿಚ್ಚಿಡುತ್ತಿವೆ. ಒಮ್ಮೆ 14 ಕೋಟಿ, ಮತ್ತೊಮ್ಮೆ 10 ಕೋಟಿ ಮಗದೊಮ್ಮೆ 5 ಕೋಟಿ, ಕೆಲವೊಮ್ಮೆ ಮೂರು ಕೋಟಿ- ಹೀಗೆ ಸಾಗುತ್ತದೆ ಅಕೌಂಟೆಂಟ್ ಉಮೇಶನ ಚಮತ್ಕಾರದ ವೈಖರಿ.


...ದರಲ್ಲಿ ಯಾವುದು ನಿಜ ಯಾವುದು ವದಂತಿ ಹೇಳುವವರ್‍ಯಾರು? ಹೇಳಿಕೊಂಡರೆ ರಾಜ್ ಕುಟುಂಬಕ್ಕೇ ...ಮಾನ, ಹೇಳಿಕೊಳ್ಳದಿದ್ದರೆ ಹೋದ ಗಂಟಿನ ಹೊಟ್ಟೆ ಸಂಕಟ. ಸ್ವಲ್ಪ ಮೊತ್ತವಾಗಿದ್ದರೆ ಉಮೇಶ ಆತ್ಮಹತ್ಯೆಯ ...ಬಿಸುತ್ತಿದ್ದನಾ! ಇದ್ದುದರಲ್ಲಿ ಅರ್ಧವಾದ್ರೂ ಬಚಾವು. ಅದು ಗೀತಕ್ಕನ ಹುಷಾರಿನ ಫಲವೂ ಹೌದು!

ಚನ್ನ ಮಾಡಿದ ಯಡವಟ್ಟು ಧಣಿಯ ಪಾಲಿಗೆ ಕುತ್ತು

ಮೇ 29ರಂದು ಉಮೇಶನ ತ್ಯಾಗರಾಜನಗರದ ಮನೆಗೆ ಹೋಗಿದ್ದ ವಜ್ರೇಶ್ವರಿ ಮ್ಯಾನೇಜರ್ ಪುಟ್ಟಸ್ವಾಮಿ ಮತ್ತು ಪ್ರೊಡಕ್ಷನ್ ಮ್ಯಾನೇಜರ್ ಚನ್ನ ಯಾಮಾರದೇ ಹೋಗಿದ್ದರೆ ದುಡ್ಡೂ ಬರುತ್ತಿತ್ತು ಉಮೇಶನ ಪ್ರಾಣವೂ ಉಳಿಯುತ್ತಿತ್ತೇನೊ. 'ನನ್ನನ್ನು ನಂಬಿ ನಾಳೆ ನಾನೇ ಬಂದು ಬನಶಂಕರಿಯ ಸೈಟು ಮತ್ತು ನನ್ನ ಮನೆಯನ್ನು ಅಣ್ಣ (ರಾಘು) ಹೇಳಿದವರ ಹೆಸರಿಗೆ ರಿಜಿಸ್ಟರ್ ಮಾಡಿಕೊಡುತ್ತೇನೆ....' ಎಂದು ಉಮೇಶ್ ಬಂದವರನ್ನು ಸಾಗಹಾಕಿದ್ದಾನೆ. ಅವರು ಹೋದದ್ದೇ ತಡ, ತನ್ನ ಕ್ರಿಮಿನಲ್ ಬುದ್ಧಿ ಉಪಯೋಗಿಸಿದ್ದೇ ಮನೆ ಬಿಟ್ಟು ಕಾಟನ್‌ಪೇಟೆಯ ಲಾಡ್ಜ್ ಸೇರಿಕೊಂಡಿದ್ದಾನೆ.

ಹೇಗೂ ಮನೆ ಮತ್ತು ಸೈಟನ್ನು ಬರೆದುಕೊಡಲೇಬೇಕು. ಅದಕ್ಕಿಂತ ಆತ್ಮಹತ್ಯೆ ಮಾಡಿಕೊಂಡರೆ ಅನಿಷ್ಟ ಸೊತ್ತಾದರೂ ...ಮಕ್ಕಳಿಗುಳಿಯುತ್ತದೆ ಎಂಬ ದುರ್ಬುದ್ಧಿ ಬಳಸಿದ್ದಾನೆ. ಅನಿಷ್ಟ ಚನ್ನ ಮತ್ತು ಪುಟ್ಟಸ್ವಾಮಿ ಹೋದದಿನವೇ ಉಮೇಶನನ್ನು ಜೊತೆ ಹಾಕಿಕೊಂಡು ... ಹೋಗಲು ಬಿಡದೆ ಆತನ ಆಸ್ತಿ ರಿಜಿಸ್ಟರ್ ಮಾಡಿಸಿಕೊಂಡಿದ್ದರೆ ಉಮೇಶ್ ಆತ್ಮಹತ್ಯೆಯ ನಿರ್ಧಾರಕ್ಕೆ ... ದುಡ್ಡೂ ಬರುತ್ತಿತ್ತು, ಪ್ರಾಣವೂ ಉಳಿಯುತ್ತಿತ್ತು.

ಕೊಡಗು: ಗ್ರಾಮ ಪಂಚಾಯತಿಯಲ್ಲಿ ವಿಧಾನ ಪರಿಷತ್ ಕನಸು


ವಿಶ್ವನಾಥ್

ಒಂದಾನೊಂದು ಕಾಲದಲ್ಲಿ ಕಾಂಗ್ರೆಸಿನ ಭದ್ರಕೋಟೆಯಾಗಿದ್ದ ಕೊಡಗು ಜಿಲ್ಲೆಯಲ್ಲಿ ಕಳೆದ ಕೆಲವು ಸಮಯದಿಂದ ಬಿಜೆಪಿ ತನ್ನ ಪಾರುಪತ್ಯೆಯನ್ನು ಮೆರೆದಿತ್ತು, ಸಂಸದರು, ಶಾಸಕರು, ಜಿ.ಪಂ, ತಾ.ಪಂ, ಹಾಗೂ ಗ್ರಾ.ಪಂ ಬಿಜೆಪಿಯ ವಶಕ್ಕೆ ಹೋಗಿ ಇನ್ನು ಹಲವು ವರ್ಷಗಳ ಕಾಲ ಇಲ್ಲಿ ಬಿಜೆಪಿಯನ್ನು ಅಲುಗಾಡಿಸಲು ಸಾಧ್ಯವಿಲ್ಲ ಎನ್ನುವಂತಹ ಪರಿಸ್ಥಿತಿ ಇದೆ ಎಂಬ ಭಾವನೆ ಇತ್ತು, ಇತ್ತೀಚೆಗೆ ನಡೆದ ಗ್ರಾ.ಪಂ ಚುನಾವಣೆ ಇದನ್ನು ಹುಸಿಯಾಗಿಸಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಅನಾಯಾಸವಾಗಿ ಗೆಲ್ಲಬಹುದಾಗಿದ್ದ ಸ್ಥಾನವನ್ನು ಬಹುತೇಕ ತಮ್ಮ ಉಡಾಫೆ ಮತ್ತು ಅತಿಯಾದ ಆತ್ಮವಿಶ್ವಾಸದಿಂದ ಅಡಗೂರು ವಿಶ್ವನಾಥ್ ಕಳೆದುಕೊಂಡಿದ್ದರು. ಆದರೆ ಆನಂತರವೂ ಅವರು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ನಿರಂತರವಾಗಿ ರಾಜಕೀಯ ಚಟುವಟಿಕೆಯನ್ನು ಮುಂದುವರೆಸಿಕೊಂಡು ಬಂದಿದ್ದರು. ಇದರ ಮರ್ಮ ಏನು ಎಂಬುದು ಯಾರಿಗೂ ತಿಳಿದಿರಲಿಲ್ಲ, ಆದರೆ ವಿಶ್ವನಾಥ್ ದೂರದೃಷ್ಟಿಯನ್ನು ಇಟ್ಟುಕೊಂಡು ಈ ರಾಜಕೀಯ ನಡೆಯನ್ನು ಹಾಕುತ್ತಾ ಬಂದಿದ್ದರು ಎಂಬುದು ಈಗ ಗ್ರಾ.ಪಂ ಚುನಾವಣೆಯಲ್ಲಿ ಖಚಿತವಾಗುತ್ತಿದೆ. ಇತ್ತೀಚಿನ ಗ್ರಾ.ಪಂ ಚುನಾವಣೆಯ ವೇಳೆಯಲ್ಲಿ ವಿಶ್ವನಾಥ್ ಕೊಡಗು ಜಿಲ್ಲೆಯಲ್ಲಿ ಸಕ್ರಿಯವಾಗಿ ಕಾಣಿಸಿಕೊಂಡಿದ್ದರು. ಜೊತೆಗೆ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯು ಮೊದಲ ಬಾರಿಗೆ ಚಳಿ ಬಿಟ್ಟು ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿತ್ತು.

ಸಾಧಾರಣವಾಗಿ ಹಣದ ಹೊಳೆಯನ್ನು ಹರಿಸುವ ಬಿಜೆಪಿ ಪಕ್ಷ ಈ ಬಾರಿಯ ಚುನಾವಣೆಯಲ್ಲಿ ಬಹುತೇಕ ಸಪ್ಪೆಯಾಗಿ ಚುನಾವಣಾ ಅಖಾಡದಲ್ಲಿ ಇತ್ತು, ಜಾತ್ಯತೀತ ಜನತಾದಳದ ಒಬ್ಬ ನಾಯಕರಾದ ಎಂ.ಸಿ.ನಾಣಯ್ಯ ಚುನಾವಣೆಯ ಬಗ್ಗೆ ತಲೆಕೆಡಿಸಿಕೊಳ್ಳದೆ ಇಂಗ್ಲೆಂಡಿಗೆ ತೆರಳಿದ್ದರೆ, ತನ್ನ ಚುನಾವಣೆ ಅಲ್ಲದೆ ಬೇರೆಲ್ಲ ಚುನಾವಣೆಯ ಸಂದರ್ಭದಲ್ಲಿ ಬೆನ್ನುನೋವಿನಿಂದ ಬಳಲುವ ಮತ್ತೋರ್ವ ನಾಯಕ ಜೀವಿಜಯ ಮಾಯವಾಗಿದ್ದರು. ಕಾಂಗ್ರೆಸ್ ಪಕ್ಷ ಮಾತ್ರ ಬಹಳಷ್ಟು ಕಡೆಗಳಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಿತ್ತು.


ಕಾಂಗ್ರೆಸಿಗೆ ವರವಾದ ಬಿಜೆಪಿಯ ಒಡಕು

ಮುಂದಿನ 20 ವರ್ಷಗಳ ಕಾಲ ತಾನೇ ಮುಖ್ಯಮಂತ್ರಿ ಎಂದು ಬೀಗುತ್ತಿದ್ದ ಬಿ.ಎಸ್.ಯಡಿಯೂರಪ್ಪ ತನ್ನ ಟೆಂಟ್ ಖಾಲಿ ಮಾಡಿಕೊಂಡ ರೀತಿಯಲ್ಲೇ ಕೊಡಗು ಜಿಲ್ಲೆಯಲ್ಲಿ ಬಿಜೆಪಿಯ ಸ್ಥಿತಿ ಈಗ ಇದೆ. ಒಮ್ಮೆ ಅಧಿಕಾರದ ಸವಿ ಅನುಭವಿಸಿದ ನಂತರ, ಕಾಯಂ ಆಗಿ ಅಧಿಕಾರ ಇರುತ್ತದೆ ಎಂಬ ಭಾವನೆ ಬಿಜೆಪಿಯ ಹಲವರಲ್ಲಿ ಇತ್ತು. ವಿಧಾನಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳಿಂದ ಹೇಗಾದರೂ ಆಯ್ಕೆಯಾಗಲೇಬೇಕು ಎಂಬ ಕನಸನ್ನು ಇಟ್ಟುಕೊಂಡಿದ್ದ ಶಾಸಕ ಅಪ್ಪಚ್ಚು ರಂಜನ್‌ರವರ ಸಹೋದರ ಸುಜಾ ಕುಶಾಲಪ್ಪ ಕಳೆದ ವಿಧಾನಸಭಾ ಚುನಾವಣೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಸಕ್ರಿಯವಾಗಿ ಕಾಣಿಸಿಕೊಂಡಿದ್ದರು. ಅವರ ಮೇಲೆ ಗುಂಡೇಟಿನ ದಾಳಿ ನಡೆದಿದ್ದರೂ ಪವಾಡ ಸದೃಶರಾಗಿ ಅವರು ಬದುಕಿಕೊಂಡಿದ್ದರು. ಆ ನಂತರವೂ ಅವರು ಲೋಕಸಭಾ ಚುನಾವಣೆಯಲ್ಲಿ ಸಕ್ರಿಯವಾಗಿದ್ದರು.


ಸಂಸದರಾಗಿ ಪ್ರತಾಪ ಸಿಂಹ ಆಯ್ಕೆಯಾದ ನಂತರ ಶಾಸಕ ಕೆ.ಜಿ.ಬೋಪಯ್ಯರವರನ್ನು ತೊರೆದು ಪ್ರತಾಪಸಿಂಹರವರೊಂದಿಗೆ ಸುಜಾ ಕುಶಾಲಪ್ಪ ಗುರುತಿಸಿಕೊಂಡಿದ್ದರು. ಪ್ರತಾಪ ಸಿಂಹ ಸ್ಥಳೀಯ ಶಾಸಕರುಗಳೊಂದಿಗೆ ಬಾಂಧವ್ಯವನ್ನು ಇಟ್ಟುಕೊಳ್ಳದೆ ತನ್ನದೇ ಆದ ಒಂದು ಗುಂಪನ್ನು ಇಟ್ಟುಕೊಳ್ಳಲು ಹೆಣಗಾಡುತ್ತಿದ್ದು, ಆ ನಿಟ್ಟಿನಲ್ಲಿ ಕೊಡಗು ಜಿಲ್ಲಾ ಬಿಜೆಪಿ ಅಧ್ಯಕ್ಷರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದ್ದಾರೆ. ಪ್ರತಾಪ ಸಿಂಹ ಕೇಂದ್ರದಲ್ಲಿ ಪ್ರಭಾವಿ ಮತ್ತು ಸಂಘ ಪರಿವಾರದ ಆಶೀರ್ವಾದವೂ ಇರುವ ಕಾರಣ ತನ್ನ ರಾಜಕೀಯ ಭವಿಷ್ಯಕ್ಕಾಗಿ ತಾನು ಶಾಸಕರಿಗಿಂತ ಸಂಸದನನ್ನೇ ನೆಚ್ಚಿಕೊಳ್ಳುವುದು ಸೂಕ್ತ ಎಂದು ಭಾವಿಸಿ, ಸುಜಾ ಕುಶಾಲಪ್ಪ ಪ್ರತಾಪ ಸಿಂಹರೊಂದಿಗೆ ಗುರುತಿಸಿಕೊಂಡಿದ್ದರು.

ಇದೇ ವೇಳೆಗೆ ಬೋಪಯ್ಯ ಮತ್ತು ಪ್ರತಾಪ ಸಿಂಹರವರ ನಡುವಿನ ವೈಮನಸ್ಸು ಬಹಿರಂಗಗೊಂಡಿತ್ತು. ತನ್ನ ಎಲ್ಲಾ ದೋಷಗಳ ನಡುವೆಯೂ ಶಾಸಕ ಕೆ.ಜಿ.ಬೋಪಯ್ಯ ತನ್ನ ಬೇರುಗಳನ್ನು ಗಟ್ಟಿಯಾಗಿ ಇಟ್ಟುಕೊಂಡಿರುವ ಕಾರಣ ಮತ್ತು ಸ್ಪೀಕರ್ ಆಗಿದ್ದಾಗಲೂ ತನ್ನ ಕ್ಷೇತ್ರವನ್ನು ಉತ್ತಮವಾಗಿ ಇಟ್ಟುಕೊಂಡಿದ್ದರಿಂದ ಬೋಪಯ್ಯ ಅಭಾಧಿತರಾಗಿದ್ದರು. ಆದರೂ ಜಾತಿ ಲೆಕ್ಕಾಚಾರದಲ್ಲಿ ಅವರಿಗೆ ಸುಜಾ ಕುಶಾಲಪ್ಪ ಬೆಂಬಲ ಅಗತ್ಯವಾಗಿ ಇತ್ತು, ಹಾಗಾಗಿ ಅವರೊಂದಿಗೆ ಬಾಂಧವ್ಯ ಕೆಡಿಸಿಕೊಳ್ಳದ ಬೋಪಯ್ಯ ಓಡಾಡಿಕೊಂಡಿದ್ದರು.

ಈ ನಡುವೆ ಅಚಾನಕ್ಕಾಗಿ ನ್ಯಾಯಾಲಯದ ತೀರ್ಪೊಂದು ಸುಜಾ ಕುಶಾಲಪ್ಪನವರ ವಿರುದ್ಧ ಬಂದಿತ್ತು. ಕ್ಷುಲ್ಲಕವಾದ ಪ್ರಕರಣವೊಂದರಲ್ಲಿ ಅವರಿಗೆ ನ್ಯಾಯಾಲಯ ಎರಡು ವರ್ಷ ಶಿಕ್ಷೆಯನ್ನು ವಿಧಿಸಿತ್ತು. ಇದು ಸುಜಾ ಕುಶಾಲಪ್ಪನವರ ವರ್ಚಸ್ಸನ್ನು ಕುಂದಿಸಿತ್ತು ಇದರ ಜೊತೆಯಲ್ಲಿ ಈಗಾಗಲೇ ಸುಜಾ ಕುಶಾಲಪ್ಪ ಹಿಂದಿನ ಸರಕಾರದಲ್ಲಿ ಅಕ್ರಮ ಸಕ್ರಮದ ಅಧ್ಯಕ್ಷರಾಗಿದ್ದ ವೇಳೆಯಲ್ಲಿ ಎಸಗಿದ



ಅಕ್ರಮಗಳ ಬಗ್ಗೆ ಎ.ಕೆ.ಸುಬ್ಬಯ್ಯನವರು ನೀಡಿರುವ ದೂರಿನ ಹಿನ್ನೆಲೆಯಲ್ಲಿ ತನಿಖೆಗಳು ನಡೆದು, ಆರೋಪಗಳು ಸಾಬೀತಾಗಿದ್ದು, ಆರೋಪ ಪಟ್ಟಿ ಸಲ್ಲಿಕೆಯ ಹಂತದಲ್ಲಿ ಇರುವ ಕಾರಣ ಇದರಲ್ಲಿಯೂ ವ್ಯತಿರಿಕ್ತವಾದ ಫಲಿತಾಂಶಗಳು ಬಂದರೆ ಕಷ್ಟ ಎಂಬುದನ್ನು ಅರಿತ ಸುಜಾ ಕುಶಾಲಪ್ಪ ಗ್ರಾ.ಪಂ ಚುನಾವಣೆಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿದ್ದರೂ ಸಕ್ರಿಯವಾಗಿ ಕಾಣಿಸಿಕೊಳ್ಳಲಿಲ್ಲ, ಇದು ಪಕ್ಷದ ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿತ್ತು. ಅವರದೇ ಕ್ಷೇತ್ರವಾದ ವಿರಾಜಪೇಟೆ ತಾಲೂಕಿನಲ್ಲಿ ಹೆಚ್ಚಿನ ಸ್ಥಾನವನ್ನು ಅವರಿಗೆ



ಪಡೆಯಲು ಸಾಧ್ಯವಾಗಲಿಲ್ಲ.


ಬೋಪಯ್ಯ ಸುಜಾ ಕುಶಾಲಪ್ಪನವರ ಮತ್ತೋರ್ವ ಸಹೋದರ ಸುನಿಲ್ ಸುಬ್ರಹ್ಮಣಿಯವರತ್ತ ಒಲವು ಹೊಂದಿದ್ದಾರೆ ಎಂಬ ಸೂಕ್ಷ್ಮವನ್ನು ಅರಿತಿದ್ದ ಸುಜಾ ಕುಶಾಲಪ್ಪ ಚುನಾವಣೆಯಲ್ಲಿ ಸಕ್ರಿಯವಾಗಿರಲಿಲ್ಲ, ಶಾಸಕರಾದ ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್ ಅವರಿಗೆ ಜಿಲ್ಲೆಯಲ್ಲಿ ತಮ್ಮ ಪಕ್ಷದ ಮತ್ತೋರ್ವ ವ್ಯಕ್ತಿ ನಾಯಕರಾಗಿರುವುದು ಇಷ್ಟವಿಲ್ಲ. ಹಾಗಾಗಿ ಕಳೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಹುಮತವಿದ್ದರೂ ಎಸ್.ಜಿ.ಮೇದಪ್ಪ ಸೋಲುವಂತಾಗಿತ್ತು, ಪ್ರತಾಪ ಸಿಂಹ ತಮ್ಮ ವಿರುದ್ಧ ನಿಲ್ಲುತ್ತಾರೆ ಎಂಬ ಸೂಕ್ಷ್ಮವೇನಾದರೂ ಈ ಶಾಸಕದ್ವಯರುಗಳಿಗೆ ಮೊದಲೇ ಗೊತ್ತಾಗಿದ್ದರೆ ಅವರೂ ಗೆಲ್ಲುತ್ತಿರಲಿಲ್ಲ.

ತನಗೆ ವಿಧಾನ ಪರಿಷತ್ತಿನ ಸ್ಥಾನ ದೊರೆಯುವುದಿಲ್ಲ ಎಂಬ ಸುಳಿವು ದೊರೆತ ಕೂಡಲೇ ಪಕ್ಕಾ ವ್ಯಾಪಾರಿ ಮನೋಭಾವದ ಸುಜಾ ಕುಶಾಲಪ್ಪ ಕಣಕ್ಕೆ ಇಳಿಯಲೇ ಇಲ್ಲ. ಇದರಿಂದಾಗಿ ಕಾರ್ಯಕರ್ತರು ಅಸಮಾಧಾನಗೊಂಡಿದ್ದರು. ಹಾಗಾಗಿ ಕೊಡಗು ಜಿಲ್ಲೆಯಲ್ಲಿ ಬಿಜೆಪಿಗಿಂತ ಸಣ್ಣ ಪ್ರಮಾಣದಲ್ಲಿ ಕಾಂಗ್ರೆಸಿಗೆ ಹೆಚ್ಚು ಸ್ಥಾನಗಳು ಲಭಿಸಿವೆ. ಜಿಲ್ಲೆಯಲ್ಲಿ ಉತ್ತಮ ಆಡಳಿತ ವ್ಯವಸ್ಥೆಯನ್ನು ಕೊಟ್ಟಿದ್ದರೆ ಮತ್ತಷ್ಟು ಸ್ಥಾನಗಳನ್ನು ಕಾಂಗ್ರೆಸ್ ಪಡೆಯಬಹುದಿತ್ತು, ಈಗ ಅವರಿಗೆ ದೊರೆತದ್ದು ಬಿಜೆಪಿಯ ಒಡಕಿನ ಲಾಭವಷ್ಟೆ.

ಜಿಲ್ಲೆಯಲ್ಲಿ ಜಾತ್ಯತೀತ ಜನತಾದಳ ಸಂಘಟನೆಯ ದೃಷ್ಟಿಯಿಂದ ಬಲಿಷ್ಠವಾಗಿದೆ. ಸದಾ ಚಟುವಟಿಕೆಯಿಂದ ಇರುವಂತಹ ಜಾತ್ಯತೀತ ಜನತಾದಳದ ಅಧ್ಯಕ್ಷರಾಗಿದ್ದ ವಿ.ಪಿ.ಶಶಿಧರ್‌ಗೆ ಅವರ ನಾಯಕರುಗಳು ಮತ್ತು ಪಕ್ಷದ ರಾಜ್ಯ ಮುಖಂಡತ್ವ ಯಾವುದೇ ಸಹಕಾರ ನೀಡಲಿಲ್ಲ, ಹಾಗಾಗಿ ತಮ್ಮ ಮಿತಿಯೊಳಗೆ ಕಾರ್ಯ ನಿರ್ವಹಿಸಬೇಕಾದಂತಹ ಅನಿವಾರ್ಯತೆ ಅವರಿಗೆ ಬಂದಿತ್ತು, ಪಕ್ಷ ಬೆಳೆಸಲು ರಾಜ್ಯದಲ್ಲಿ ಪ್ರಭಾವಿಗಳಾಗಿದ್ದರೂ ಜಿಲ್ಲೆಯಲ್ಲಿ ಪಕ್ಷದ ಬೆಳವಣಿಗೆಗೆ ಎಂದೂ ಕೊಡುಗೆ ನೀಡದ ಎಂ.ಸಿ.ನಾಣಯ್ಯ ಮತ್ತು ಜೀವಿಜಯರಂತಹ ನಾಯಕರುಗಳಿಂದ ಪಕ್ಷ ಕಟ್ಟಲು ಸಾಧ್ಯವೇ ಇಲ್ಲ ಎಂಬ ಭಾವನೆಗೆ ಬಂದಿರುವ ವಿ.ಪಿ.ಶಶಿಧರ್, ಚುನಾವಣಾ ಫಲಿತಾಂಶ ಘೋಷಣೆಗೆ ಎರಡು ಮೂರು ದಿನಗಳ ಹಿಂದೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಅಂದರೆ ಪಕ್ಷ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲ; ಉತ್ತಮ ವಾತಾವರಣದಲ್ಲಿಯೂ ಸಹಕಾರ ನಾಯಕರುಗಳಿಂದ ಸಿಗುವುದಿಲ್ಲ ಎಂಬ ಕಾರಣಕ್ಕಾಗಿ ಈ ರಾಜೀನಾಮೆಯನ್ನು ಅವರು ನೀಡಿದರು. ಇದರ ಲಾಭವನ್ನಷ್ಟೇ ಕಾಂಗ್ರೆಸ್ ಪಕ್ಷ ಗಳಿಸಿಕೊಂಡಿದೆಯೇ ವಿನಹ, ವಾಸ್ತವದಲ್ಲಿ ತನ್ನ ಬಲವನ್ನು ಹಿಗ್ಗಿಸಿಕೊಳ್ಳಲು ಕಾಂಗ್ರೆಸ್ ಪಕ್ಷ ಏನೂ ಮಾಡಲಿಲ್ಲ.

ಈ ಚುನಾವಣೆಯಲ್ಲಿ ಸಕ್ರಿಯವಾಗಿ ಅಡಗೂರು ವಿಶ್ವನಾಥ್ ಭಾಗವಹಿಸಿದ್ದರು. ಮುಂದಿನ ಜನವರಿ ತಿಂಗಳಿನಲ್ಲಿ ತೆರವಾಗಲಿರುವ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿನ ಸ್ಥಾನಕ್ಕೆ ಆಯ್ಕೆಯಾಗುವ ಕನಸನ್ನು ಇಟ್ಟುಕೊಂಡು ಪ್ರಚಾರದಲ್ಲಿ ಭಾಗವಹಿಸಿದ್ದಲ್ಲದೆ, ಚುನಾವಣೆಗೆ ಬೇಕಾದಂತಹ ಅಡಿಪಾಯವನ್ನು ಹಾಕಿಕೊಳ್ಳುವ ಎಲ್ಲಾ ಯತ್ನವನ್ನು ಮಾಡಿದ್ದಾರೆ.

ಇದಕ್ಕೆ ಪೂರಕವಾಗಿ ಈಗ ಕೊಡಗು ಜಿಲ್ಲೆಯಲ್ಲಿ ಅಹಿಂದ ಪ್ರತಿಷ್ಠಾನವೊಂದನ್ನು ಸ್ಥಾಪಿಸಲು ವಿಶ್ವನಾಥ್ ಹೆಜ್ಜೆ ಹಾಕಿದ್ದಾರೆ. ಇದರ ಜವಾಬ್ದಾರಿಯನ್ನು ಮಾಜಿ ಶಾಸಕ ಹೆಚ್.ಡಿ. ಬಸವರಾಜುರವರ ಹೆಗಲಿಗೆ ಏರಿಸಿ ತಾನು ಯುರೋಪ್‌ಗೆ ತೆರಳಿದ್ದಾರೆ. ಬೆರಳು ತೋರಿದರೆ ಶರೀರವನ್ನೇ ನುಂಗುವ ಛಾತಿ ಉಳ್ಳ ಬಸವರಾಜು, ಈಗ ಮತ್ತೊಮ್ಮೆ ಕೊಡಗು ಜಿಲ್ಲೆಯಲ್ಲಿ ಸಕ್ರಿಯವಾಗಿ ಓಡಾಡಿಕೊಂಡಿದ್ದಾರೆ. ಕಾಂಗ್ರೆಸಿನಲ್ಲಿಯೇ ದಲಿತ ವಿಭಾಗವು ಇರುವಾಗ, ಅಹಿಂದ ಪ್ರತಿಷ್ಠಾನದ ಉದ್ದೇಶ ಪಕ್ಷದಿಂದ ಹೊರತಾಗಿ ಸಂಘಟನೆ ಮಾಡಿಕೊಂಡು, ಪಕ್ಷದ ಶಿಸ್ತಿನ ವ್ಯಾಪ್ತಿಗೆ ಒಳಪಡದೆ ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದಾಗಿದೆ.



ಹಾಲಿ ವಿಧಾನ ಪರಿಷತ್ ಸದಸ್ಯ ಟಿ.ಜಾನ್‌ರವರು ಮತ್ತೊಮ್ಮೆ ಸ್ಪರ್ಧಿಸುವ ಇಂಗಿತವನ್ನು ವ್ಯಕ್ತಪಡಿಸದೇ ಇರುವ ಹಿನ್ನೆಲೆಯಲ್ಲಿ ಈ ಬಾರಿ ಪೈಪೋಟಿಯ ನಡುವೆ ವಿಧಾನ ಪರಿಷತ್ತಿಗೆ ಟಿಕೆಟನ್ನು ಅನಾಯಾಸವಾಗಿ ಪಡೆಯಬಹುದು ಎಂಬ ಭಾವನೆ ವಿಶ್ವನಾಥ್‌ರವರಲ್ಲಿ ಇರುವ ಸಾಧ್ಯತೆಗಳು ಇವೆ.

ಈ ಸ್ಥಾನಕ್ಕೆ ಕಾಂಗ್ರೆಸಿನಲ್ಲಿ ಪ್ರಬಲ ಆಕಾಂಕ್ಷಿಗಳು ಎಂದರೆ ಪಕ್ಷಕ್ಕೆ ಒಂದು ಕಾಲದಲ್ಲಿ ರಾಜ್ಯಮಟ್ಟದಲ್ಲಿಯೂ ಕಾಮಧೇನು ಆಗಿದ್ದ ಉದ್ಯಮಿ ಬಿ.ಜಿ.ಮಿಟ್ಟುಚಂಗಪ್ಪ, ಅವರು ರಾಜ್ಯ ನಾಯಕರುಗಳೊಂದಿಗೆ ಬಹಳಷ್ಟು ಒಡನಾಟವನ್ನು ಇಟ್ಟುಕೊಂಡಿದ್ದಾರೆ. ಒಮ್ಮೆ ಅವರಿಗೆ ಸ್ಪರ್ಧಿಸಲು ಅವಕಾಶ ದೊರೆತಿತ್ತು, ಕಾಂಗ್ರೆಸ್ ಪಕ್ಷಕ್ಕೆ ಬಹುಮತವಿಲ್ಲದಿದ್ದ ಕಾರಣ ಅವರು ಸೋತಿದ್ದರು.

ಈ ಬಾರಿ ಕಾಂಗ್ರೆಸಿಗೆ ಬಹುಮತವಿದ್ದು, ಒಂದಷ್ಟು ಕಡೆ ಜೆ.ಡಿ.ಎಸ್. ಮತ್ತು ಸ್ವತಂತ್ರ ಅಭ್ಯರ್ಥಿಗಳು ಇರುವುದರಿಂದ ಈ ಸ್ಥಾನವನ್ನು ಪಡೆಯುವುದು ಸುಲಭ ಎಂಬ ಲೆಕ್ಕಾಚಾರ ಕಾಂಗ್ರೆಸಿನಲ್ಲಿ ಇರುವುದರಿಂದ ಖಂಡಿತವಾಗಿಯೂ ಆಕಾಂಕ್ಷಿಗಳ ಪಟ್ಟಿ ದೊಡ್ಡದಾಗಿಯೇ ಇರುತ್ತದೆ.

ಡಿ.ಕೆ.ಶಿವಕುಮಾರ್‌ರವರ ಕೃಪಾಕಟಾಕ್ಷ ಸದಾ ತನ್ನ ಮೇಲೆ ಇದೆ ಎಂದು ಮೆರೆಯುವ ಜಿ.ಪಂ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ ಕೂಡ ಈ ಸ್ಥಾನಕ್ಕೆ ಕಣ್ಣು ಹಾಕುವ ಸಾಧ್ಯತೆ ಇದೆ. ಕೇವಲ ಸೋಮವಾರಪೇಟೆ ತಾಲೂಕಿನಲ್ಲಿ ಮಾತ್ರ ಪ್ರಭಾವ ಇಟ್ಟುಕೊಂಡಿರುವ ಮತ್ತೋರ್ವ ಉದ್ಯಮಿ ಮುತ್ತಣ್ಣ ಎಂಬುವವರು ಕೂಡ ಟಿಕೆಟಿಗಾಗಿ ಈಗಿಂದಲೇ ಪ್ರಯತ್ನಿಸಿ, ಸೋಮವಾರಪೇಟೆ ತಾಲೂಕಿನಲ್ಲಿ ಕೆಲವು ಗ್ರಾ.ಪಂಯಲ್ಲಿ ತನ್ನ ಹಣ ಬಲವನ್ನು ಪ್ರದರ್ಶಿಸಿದ್ದಾರೆ.

ಇವೆಲ್ಲದರ ನಡುವೆಯೂ ಟಿಕೆಟಿಗಾಗಿ ನೇರವಾದ ಹಣಾಹಣಿ ವಿಶ್ವನಾಥ್ ಮತ್ತು ಮಿಟ್ಟು ಚಂಗಪ್ಪ ನಡುವೆ ನಡೆಯುವ ಸಾಧ್ಯತೆ ಇದೆ. ಈ ಬಾರಿ ಚುನಾವಣೆಯಲ್ಲಿ ಸಕ್ರಿಯವಾಗಿ ಕಾಣಿಸಿಕೊಳ್ಳದ ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ್ ಮಾಚಯ್ಯ ಕೊನೆಗಳಿಗೆಯಲ್ಲಿ ಅಖಾಡಕ್ಕೆ ಇಳಿಯುವುದನ್ನು ಅಲ್ಲಗಳೆಯುವಂತಿಲ್ಲ.

ಚುನಾವಣೆಗೆ ಸಿದ್ಧತೆ ಎನ್ನುವಂತೆ ವಿಶ್ವನಾಥ್‌ರವರು ಕೊಡಗು ಜಿಲ್ಲೆಯ ಗ್ರಾ.ಪಂಗೆ ಆಯ್ಕೆಯಾದಂತಹ ಎಲ್ಲಾ ಸದಸ್ಯರಿಗೆ ಅಭಿನಂದನಾ ಪತ್ರವೊಂದನ್ನು ರವಾನೆ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ. ಕೇಂದ್ರ ರಾಜಕಾರಣಕ್ಕಿಂತಲೂ ರಾಜ್ಯ ರಾಜಕಾರಣದಲ್ಲಿಯೇ ಹೆಚ್ಚಿನ ಆಸಕ್ತಿ ಇಟ್ಟುಕೊಂಡಿದ್ದ ವಿಶ್ವನಾಥ್‌ರವರಿಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಇರಾದೆ ಇರಲಿಲ್ಲ, ಹೇಗಾದರೂ ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಇರುವಾಗ ತಾನು ರಾಜ್ಯ ರಾಜಕಾರಣವನ್ನಷ್ಟೇ ಮಾಡಿಕೊಂಡಿದ್ದರೆ ಸಾಕು ಎನ್ನುವ ಮನೋಭಾವ ಅವರಲ್ಲಿತ್ತು, ಆದರೆ ಸಂಕಷ್ಟದಲ್ಲಿದ್ದ ಕಾಂಗ್ರೆಸ್ ಪಕ್ಷ ಹಾಲಿ ಸಂಸದರಿಗೆ ಸ್ಥಾನ ನೀಡುವ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದರಿಂದ ವಿಶ್ವನಾಥ್‌ರವರು ಅನಿವಾರ್ಯವಾಗಿ ಸ್ಪರ್ಧಿಸಲೇಬೇಕಾಗಿತ್ತು.

ಸಿದ್ದರಾಮಯ್ಯನವರಿಗೆ ಆಪ್ತರು ಆಗಿರುವ ವಿಶ್ವನಾಥ್ ಈ ಟಿಕೆಟನ್ನು ತರುವಲ್ಲಿ ಯಶಸ್ವಿಯಾಗುತ್ತಾರೋ ಅಥವ ಸ್ಥಳೀಯ ವ್ಯಕ್ತಿಗೆ ಕಾಂಗ್ರೆಸ್ ಪಕ್ಷ ಮಣೆ ಹಾಕುತ್ತದೋ ಎಂಬುದನ್ನು ಕಾದುನೋಡಬೇಕಾಗಿದೆ.

■ ಬಿ.ಎನ್.ಮನು ಶೆಣೈ

...ಕಾಲದ ಜೊತೆ ಕಳೆದುಹೋದ ಘಮಘಮಿಸುವ ಹೂವುಗಳು

ಪುಸ್ತಕ ಪರಿಚಯ


ಬಳ್ಳಾರಿಯ, ಚನ್ನಪಟ್ಟಣದ ಪಲ್ಲವ ಪ್ರಕಾಶನದವರು ...ಟಿಸಿದ ಹಾಗು ಪಲ್ಲವ ವೆಂಕಟೇಶ ಸಂಪಾದಿಸಿದ ...ಲೆಮರೆಯ ಘಮಘಮ ಹೂವು: ಸಮಾಜವಾದಿ ...ಎಸ್.ಕಲ್ಲಣ್ಣನವರ ಬದುಕು ಬದ್ಧತೆ' ಕೃತಿಯು ಇಂದಿನ ...ಜಕೀಯ ಹಾಗು ಸಾಮಾಜಿಕ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ...ರೂ ಗಮನಿಸಲೇಬೇಕಾದ ಮಹತ್ವದ ಕೃತಿಯಾಗಿದೆ. ...ಎಸ್.ಕಲ್ಲಣ್ಣನವರ ದೇವರಾಜ ಅರಸು ಕಾಲದ ಕುರುಬ ...ಂಗದ ರಾಜಕಾರಣಿಯಾಗಿದ್ದರು.

...ಪ್ರಾಮಾಣಿಕ ಬದುಕು ಎಂದರೆ ಏನು? ಎನ್ನುವ ...ಳ ಸತ್ಯದ ಅಭ್ಯಾಸಿಗಳಿಗೆ ಈ ಕೃತಿ ಒಂದು ಪುಟ್ಟ ...ರ್ಗದರ್ಶಿಯಾಗಿ ದಕ್ಕುತ್ತದೆ. ಅದರ ಓದು ಕಣ್ಣುಗಳನ್ನು ...ಗೊಳಿಸುವುದಲ್ಲದೆ, ಕಳೆದುಹೋದುದರ ಬಗ್ಗೆ ವಿಷಾದ, ...ಕಿ ಹುಟ್ಟಿಸುತ್ತದೆ ಹಾಗು ಅದರ ಜೊತೆ ವರ್ತಮಾನದ ...ಯ ಬಗ್ಗೆ ಭಯ ಹುಟ್ಟಿಸುತ್ತದೆ. ಈ ಕೃತಿಯಲ್ಲಿ ...ಣ್ಣನವರ ಬದುಕಿನ ವಿವರಗಳನ್ನು ಹೊತ್ತ ಪಲ್ಲವ ...ಕಟೇಶ ಬರೆದ ಪರಿಚಯಾತ್ಮಕ ಲೇಖನವಿದೆ. ಈ ...ನ ಅವರ ಬದುಕಿನ ಮಹತ್ವದ ಘಟ್ಟಗಳನ್ನು ಅಂದಿನ ...ಜಕೀಯ ಹಾಗು ಸಾಮಾಜಿಕ ಪರಿಸರದಲ್ಲಿ ಗಟ್ಟಿಯಾಗಿ ...ತಿದಿದೆ. ಇದು ಬೊಗಸೆಗೆ ಹಾಕಿದ ನೀರಿನಂತೆ ಓದುಗನ ...ಹ ಹಿಂಗಿಸುತ್ತದೆ. ಇದರಲ್ಲಿ ಪ್ರೊ. ಕಾಳೇಗೌಡ ನಾಗವಾರ ...ರದ ಮುನ್ನುಡಿ ಇದೆ. ಈ ಕೃತಿಯ ಹಿಂದಿನ ಮಹಾ ...ರಣೆ ಕಾಳೇಗೌಡರೇ ಆಗಿದ್ದಾರೆ. ಕಾಳೇಗೌಡರು ಎಂದರೆ ...ರು? ಎಂದು ಕೇಳಬಹುದಾದ ಅತಿಕೆಟ್ಟ ಕಾಲದಲ್ಲಿರುವ ...ವು, ಇವರು ದನಗಳು ತಿಂದುಹೋದ, ಹೊಲದಲ್ಲಿ ...ಳಿದ ಒಂದಿಷ್ಟು ಪೈರು ಎಂದು ವಿವರಿಸಬಹುದು. ...ಈ ಸಮಾಜವಾದಿಯಾದ ಕಾಳೇಗೌಡ ನಾಗವಾರ, ...ಣ್ಣನವರನ್ನು ಅವರು ಬದುಕಿದ್ದಾಗಲೇ ಕಥೆಯಾಗಿಸಿದವರು. ...ವರು ಕಲ್ಲಣ್ಣನವರ ಬಗ್ಗೆ ಬರೆದ 'ಪರಿಚಯ' ಕಥೆ ಈ ...ಯಲ್ಲಿದೆ. ಹಾಗೆಯೇ ಕಲ್ಲಣ್ಣನವರ ಬದುಕಿನ ವಿವಿಧ ...ಗ್ಗಲುಗಳ ಬಗ್ಗೆ ಅವರನ್ನು ಸಮೀಪದಿಂದ ನೋಡಿದ ...ಲಂಕೇಶ್, ಪಾಟೀಲ ಪುಟ್ಟಪ್ಪ, ಪ್ರೊ. ಐ.ಜಿ. ಸನದಿ, ...ಜಿ.ಬಣಕಾರ, ಮಹಾದೇವ ಹೊರಟ್ಟಿ, ಎಚ್.ಎಸ್. ...ಟೀಲ, ಗನವಟಕರ, ಸನತ್‌ಕುಮಾರ ಬೆಳಗಲಿ, ಡಾ. ...ಲಿಂಗಯ್ಯ, ಶೂದ್ರ ಶ್ರೀನಿವಾಸ ಹಾಗು ಇತ್ಯಾದಿಯವರು ...ದ ಲೇಖನಗಳಿವೆ. ಕಲ್ಲಣ್ಣನವರ 1974 ರಿಂದ 1980ರ ...ವಧಿಯಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದಾಗ ಸದನದಲ್ಲಿ ...ಡಿದ ಭಾಷಣಗಳು, ಅವರು ಪತ್ರಕರ್ತರಾಗಿದ್ದಾಗ ಬರೆದ ...ವು ಬರಹಗಳು, ಪತ್ರಗಳು, ಅಪರೂಪದ ಕೆಲವು ...ತ್ರಗಳು ಈ ಕೃತಿಯಲ್ಲಿವೆ. ಕಲ್ಲಣ್ಣನವರ ಒಟ್ಟು ಬದುಕಿನ ...ದ್ಧಾಂತಗಳು, ಆಶಯಗಳು, ಅವರ ಬದುಕಿನ ಹಲವಾರು ...ಟನೆಗಳು ಇಲ್ಲಿವೆ. ಹರಿಯುವ ನೀರು ಹಳ್ಳಕೊಳ್ಳಗಳಲ್ಲಿ ...ಮರಿ ಮುನ್ನಡೆದಂತೆ ಕಂಡರು, ಆ ನೀರು ತನ್ನ ಮೂಲ ...ಣವನ್ನು ಬಿಡದೇ ನಿರ್ಗತಿಕರ ಬದುಕಿಗೆ ಆಸರೆಯಾದ ...ಸಂಥ ವ್ಯಕ್ತಿಯ ಕಥಾನಕ ಈ ಕೃತಿಯಲ್ಲಿದೆ.

...ದೇವರಾಜ ಅರಸು ನಮ್ಮ ಕಾಲ ಕಂಡ ವಿಲಕ್ಷಣ ...ಜಕಾರಣಿಯಾಗಿದ್ದಾರೆ. ಅವರ ಕಾಲ ಸಮುದ್ರಮಂಥನದ ...ಲವಾಗಿತ್ತು, ಶ್ರೀಮಂತರು, ಜಹಗೀರದಾರರು, ಪ್ರಮುಖ ...ತಿಸಮುದಾಯಗಳ ಮುಖಂಡರುಗಳಿಂದ ಕರ್ನಾಟಕದ ...ಜಕೀಯವನ್ನು ಮುಕ್ತಗೊಳಿಸಲು ಪ್ರಯತ್ನಿಸಿದರು.



...ಳುವವನಿಗೇ ಭೂಮಿ ಎನ್ನುವ ಅವರ ...ರ್ಯಕ್ರಮ ಶಕ್ತಿರಾಜಕಾರಣದ ತಳಕ್ಕೇ ...ಟ್ಟಿತ್ತು, ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತಗಳು ...ಮಾನಗಳಿಂದ ಮಾಡಲಾಗದ ಅದ್ಭುತ ...ಸವನ್ನು ರಾತ್ರಿ ಮುಗಿದು ಬೆಳಗಾಗುವು ...ದೊಳಗೇ ಅರಸು ಮಾಡಿ ಮುಗಿಸಿದ್ದರು. ...ೀಮಂತಿಕೆ-ಬಡತನ, ಭ್ರಷ್ಟಾ...ರ-ಪ್ರಾಮಾಣಿಕತೆ, ವಿಶ್ವಾಸದ್ರೋಹ-ನಂಬಿಕೆ, ...ಸ್ವಾರ್ಥ ರಾಜಕಾರಣ-ಸೇವಾ ಬದ್ಧತೆ ...ವುಗಳಲ್ಲಿಯ ಅವರ ಆಯ್ಕೆ ಸ್ಪಷ್ಟವಾಗಿತ್ತು. ...ಪಾಮಿಕರಾಗಿ ಹಾದಿಬೀದಿಗಳಲ್ಲಿ ...ರುಗಾಡುತ್ತಿದ್ದ ಪ್ರಾಮಾಣಿಕರಾದ ಹಿಂದುಳಿದ ...ಮುದಾಯದ ಬೀದಿ ಫಕೀರರುಗಳನ್ನು ಎತ್ತಿ ನೇರವಾಗಿ ...ಕೆಂದ್ರದ ಅಧಿಕಾರಸ್ಥ ಸ್ಥಾನಗಳಲ್ಲಿ ಕೂಡ್ರಿಸಿದರು. ...ರ್ನಾಟಕದ ರಾಜಕೀಯ ಚಿತ್ರಣವೇ ಬದಲಾಯಿತು. ಆ ...ಸಂದರ್ಭದಲ್ಲಿ ರಾಜಕೀಯ ಪ್ರವೇಶಿಸಿದವರು ...ಎಸ್.ಕಲ್ಲಣ್ಣನವರ ಆಗಿದ್ದಾರೆ. 'ಕಲ್ಲಣ್ಣನವರೆ, ನಿಮ್ಮಂತಹ ...ಪ್ರಾಮಾಣಿಕ ಬೆಂಬಲಿಗರು ನನ್ನೊಡನಿರುವಾಗ ನನಗಾವ ...ಭಯವೂ ಇಲ್ಲ' ಎಂದು ದೇವರಾಜ ಅರಸುರವರು ...ರು. ರಾಜಕೀಯದ ಕಾಳರಾತ್ರಿಯ ದಿನಗಳಂದು ನೆನೆದದ್ದು ...ಸಂಬಂಧ ಹೊಂದಿದ್ದ ಎಂದೂ ಹಿಂದೆ ಸರಿಯದ ಒಂಟಿ ...ಸಿ ಸೀಳಿಕ ಬದ್ಧತೆ ಹಾಗು ವಿಶ್ವಾಸವನ್ನು ...ಹಿಡಿದುಕೊಳ್ಳುತ್ತದೆ. ಅದನ್ನು ಪಿ.ಲಂಕೇಶ್ ಹೀಗೆ



ದಾಖಲಿಸಿದ್ದಾರೆ: 'ನಿಜಲಿಂಗಪ್ಪ ಪಾಟೀಲ್‌ರ ರಾಜಕೀಯದಲ್ಲಿ ಯಾರ ಗಮನಕ್ಕೂ ಬಾರದ ಕಲ್ಲಣ್ಣ ಅರಸು ಅವರ ಗಮನಕ್ಕೆ ಬಂದರು. ಅರಸು ಕಲ್ಲಣ್ಣನನ್ನು ಎಂ.ಎಲ್.ಸಿ. ಮಾಡಿದರು. ಈ ಕೆಲಸ ಕಲ್ಲಣ್ಣನ ಬದುಕಿಗೆ ಹಣ ಮತ್ತಷ್ಟು



ಒಂದು ಆಹರಿಯ ಘಳಿಗೆಯಲ್ಲಿ ಪ್ರೊ. ಕಾಳೇಗೌಡ ನಾಗವಾರ, ಹಾ.ಬೆಸಗರಹಳ್ಳಿ ರಾಮಣ್ಣ ಮತ್ತು ಎಸ್.ಎಸ್. ಕಲ್ಲಣ್ಣನವರ

ಅಧಿಕಾರ ತರಬಹುದಿತ್ತು. ಆದರೆ ಧಾರವಾಡದ ಕಡೆಯ ಈ ಕಲ್ಲಣ್ಣ ಯಾವುದಕ್ಕೂ ಆಸೆಪಡಲಿಲ್ಲ, ತಮ್ಮ ಗುರು ಅರಸರಿಗಾದ ಅನ್ಯಾಯವನ್ನು ನೆನೆಯುತ್ತ ಸುಮ್ಮನಾದರು.' ಅರಸು ಒಬ್ಬಂಟಿಯಾದಾಗ ಅವರಿಗೆ ತೋರಿಸಿಕೊಳ್ಳಲು ಉಳಿದ ಒಬ್ಬನೇ ಸ್ನೇಹಿತನೆಂದರೆ ಕಲ್ಲಣ್ಣನವರ ಆಗಿದ್ದರು. ಲಂಕೇಶ್ ಅವರನ್ನು ಎಲೆಮರೆಯ ಘಮಘಮ ಹೂವು ಎಂದು ಕರೆದರು.

ಕಲ್ಲಣ್ಣನವರ ಜೀವನದುದ್ದಕ್ಕೂ ಪ್ರಾಮಾಣಿಕತೆಯನ್ನು ಮುಳ್ಳಿನ ಕಿರೀಟದಂತೆಯೇ ಹೊತ್ತು ತಿರುಗಿದರು. ಒಂದು ರಿಕ್ಷಾ ಹತ್ತಲು, ಒಂದು ರೈಸ್ ಪ್ಲೇಟ್ ಊಟ ಮಾಡಲು, ಹೆಂಡತಿಗೆ ಒಂದು ಸೀರೆ ತಂದು ಕೊಡಲು, ಹೊದೆಯಲು ಒಂದು ಚದ್ದರ ಕೊಳ್ಳಲು, ಬೆಳೆಯುತ್ತಿರುವ ಮಗನಿಗೆ ಒಂದು ಜೊತೆ ಚಪ್ಪಲಿ ಕೊಡಿಸಲು, ಎಲ್ಲರಿಗೂ ಅತ್ಯವಶ್ಯಕ ಬೇಡಿಕೆಗಳಿರುತ್ತವೆ. ಎಪ್ಪತ್ತು, ಎಂಭತ್ತರ ದಶಕದಲ್ಲಿ ಇವುಗಳನ್ನು ಪೂರೈಸಲು ಕೂಡ ಆಗದ ದುಸ್ತರ ಬದುಕು ಇರುತ್ತಿತ್ತು. ಪ್ರಾಮಾಣಿಕತೆ ತೋರಿಕೆಯ ವಸ್ತುವಲ್ಲ. ಅದು ಬದುಕಿನ ದಿನನಿತ್ಯದ ಕರ್ಮವಾಗಿತ್ತು. ರಾಜಕಾರಣಿ ಪ್ರತಿನಿತ್ಯ ಸುತ್ತಲಿನ ಸಮಾಜದ ವಿಮರ್ಶೆಗೆ ಒಳಗಾಗುತ್ತಿದ್ದ. ಸಾಲಸೋಲ ಕೈಯೊಳಗಿನ ಬೆರಳುಗಳಂತೆಯೇ ಇರುತ್ತಿದ್ದವು. ಇಂಥ ವಿಷಯಗಳಲ್ಲಿ ಗ್ರಾಮ ಬದುಕಿನ ಲೆಕ್ಕಾಚಾರಗಳು ಬಹಳ ಬಿಗಿಯಾಗಿರುತ್ತಿದ್ದವು. ಸ್ವಲ್ಪ ಹೆಚ್ಚು ಕಡಿಮೆಯಾದರೆ ಗುಸುಗುಸು ಪ್ರಾರಂಭವಾಗುತ್ತಿತ್ತು, ಹೊಲಸಾದ ಸೆರಗಿನಂತೆ ಜನರ ಬಾಯಿಗೆ ಬೀಳುತ್ತಿತ್ತು. ಕಲ್ಲಣ್ಣನವರ ಈ ರೀತಿಯ ಪರಿಸರದಲ್ಲಿ ಬದುಕಿ, ಆ ಪರೀಕ್ಷೆ ಎದುರಿಸಿ, ಅವರು ಪ್ರಾಣ ಬಿಟ್ಟರೇ ಹೊರತಾಗಿ ಕೊನೆಯವರೆಗೂ ಪ್ರಾಮಾಣಿಕತೆ ಬಿಟ್ಟುಕೊಡಲಿಲ್ಲ. ಹೀಗಾಗಿ ರಾಜಕಾರಣಿಗಳಿಗೆ ಅವರು ಮಾದರಿಯಾಗಿ, ಮರೆಯದ ಆದರ್ಶವಾಗಿ ಉಳಿದರು. ರಾಜಕಾರಣ ಊರಹಬ್ಬವಾಗಿರುವ ಈ ಸಂದರ್ಭದಲ್ಲಿ,


ಕಲ್ಲಣ್ಣನವರ ಬದುಕಿನ ಹಲವು ಸತ್ಯ ಘಟನೆಗಳು ಕಾಲ್ಪನಿಕ ಎನ್ನುವಷ್ಟು ವಿಸ್ಮಯ ಹುಟ್ಟಿಸುತ್ತವೆ. ಅಂತಹ ಹಲವಾರು ಘಟನೆಗಳನ್ನು ಈ ಕೃತಿಯಲ್ಲಿ ಓದಬಹುದಾಗಿದೆ.

ಕಲ್ಲಣ್ಣನವರ ಶಾಂತವೇರಿ ಗೋಪಾಲಗೌಡರಂತೆಯೇ, ಅದೇ ಕಾಲದ ಸಮಾಜವಾದಿಗಳು. ಅವರ ಬಗ್ಗೆ ಕಲ್ಲಣ್ಣನವರ ಬರೆದಿರುವ ಒಂದು ಲೇಖನವು ಈ ಕೃತಿಯಲ್ಲಿದೆ. ಸಮಾಜವಾದಿಗಳು ಎಂದು ಹೇಳಿಕೊಳ್ಳುವವರ ಬದುಕೇ ವಿಚಿತ್ರವಾಗಿರುತ್ತದೆ. ಇವರು ಬಸ್‌ಸ್ಟ್ಯಾಂಡ್, ರೈಲು ನಿಲ್ದಾಣಗಳ ಸೋಪ್ಪಿಯ ಜನ. ರಾತ್ರಿ ಜಾಗೆ ಸಿಕ್ಕ ಕಡೆ ಮಲಗಿ, ಬೆಳಗ್ಗೆ ಆದರ್ಶ ಭಾರತದ ಭಾಷಣ ಮಾಡುವವರು. ಭಾಷಣ ಮುಗಿಸಿ ಊರಿನ ಬಸ್ಸು ಹತ್ತಬೇಕಾದಾಗ ಕಿಸೆಯಲ್ಲಿಯ ಚಿಲ್ಲರೆ ಹಣವನ್ನು ನಾಜೂಕಾಗಿ ಎಣಿಸುವವರು. ಕನಸುಗಳ ರಾಜರುಗಳಾಗಿರುವ ಇವರ ಸ್ಥಿತಿ ಬದುಕುವ ರೀತಿಯಲ್ಲಿ ಭಿಕ್ಷುಕರಿಗಿಂತಲೂ ಕಡೆಯಾಗಿರುತ್ತದೆ. ಇವರ ಆಸ್ತಿ ಇವರ ಬೌದ್ಧಿಕ, ಸಾಮಾಜಿಕ, ರಾಜಕೀಯ ನಿಲುವುಗಳು ಮಾತ್ರ. ಇವರು ಸದಾ ಹಕ್ಕಿಯಂತೆ ಹಗುರಾಗಿರುತ್ತಾರೆ. ಇವರು ಅನುಭವಿಸುವ ಸುಂಕವಿಲ್ಲದ ಸ್ವಾತಂತ್ರ್ಯಕ್ಕೆ ಯಾವ ಗಡಿಗಳ ಹಂಗೂ ಇರುವುದಿಲ್ಲ. ಇಂತಹ ಸಮಾಜವಾದಿಗಳಿಂದಲೇ ಆಧುನಿಕ ಭಾರತ ಕಟ್ಟಲ್ಪಟ್ಟಿದ್ದರೆ ಹೇಗಿರುತ್ತಿತ್ತು? ಎನ್ನುವ ಕಲ್ಪನೆ ನನ್ನನ್ನು ಈಗಲೂ ಅಚ್ಚರಿಗೊಳಿಸುತ್ತದೆ. ಈ ಬಗ್ಗೆ ಪಾಟೀಲ ಪುಟ್ಟಪ್ಪನವರು ಕಲ್ಲಣ್ಣವರ ಬಗ್ಗೆ ಬರೆಯುತ್ತಾ 'ಕೈಗೆ ಸಿಕ್ಕ ಪುಸ್ತಕ ಓದಿ ಅವರು ತಮ್ಮ ಗುರು ತಾವೇ ಆಗಿದ್ದರು. ಅವರ ಓದು ನಡೆನುಡಿಗಳಲ್ಲಿ ಪುರೋಗಾಮಿ ವಿಚಾರಗಳಿಗೆ ಯಾವಾಗಲೂ ಪ್ರಾಧಾನ್ಯತೆ ಇರುತ್ತಿತ್ತು. ತಾತ್ವಿಕ ವಿವೇಚನೆಗೆ ನಿಂತರೆ ಅವರು ಯಾರಿಗೂ ತಮ್ಮ ನಿಲುವನ್ನು ಸುಲಭವಾಗಿ ಬಿಟ್ಟುಕೊಡಲಾರರು. ಗಂಟೆಗಟ್ಟಲೆ ಮಾತನಾಡಿದರೂ ದಣಿಯದ ಕಂಠತ್ರಾಣವನ್ನು, ಬೌದ್ಧಿಕ ಎತ್ತರವನ್ನು, ವ್ಯವಹಾರ ಜ್ಞಾನವನ್ನು ಅವರು ಪಡೆದಿದ್ದರು. ಅವರು ನಾಲಗೆಯನ್ನು ಅಕ್ಷರಶಃ ಖಡ್ಗದಂತೆ ಉಪಯೋಗಿಸುತ್ತಿದ್ದರು' ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಅಕ್ಷರಶಃ ಕಲ್ಲಣ್ಣನವರ ವ್ಯಕ್ತಿತ್ವವಾಗಿತ್ತು.

ರೈತರು-ಕೂಲಿಕಾರರ ಹಿತರಕ್ಷಕ, ಸಮಾಜವಾದಿ, ಸಾಹಿತಿಗಳ ಸ್ನೇಹಿತ, ಬಡವಿದ್ಯಾರ್ಥಿಗಳ ಆಶ್ರಯದಾತ ಎಂದೆಲ್ಲ ಕರೆಸಿಕೊಳ್ಳುವ ಕಲ್ಲಣ್ಣನವರ ಬೌದ್ಧಿಕ ನಿಲುವುಗಳೂ ಕೂಡ ಅತಿ ವಾಸ್ತವದಿಂದ ಕೂಡಿದ್ದವು. ಕೃಷಿ, ಮೀನುಗಾರಿಕೆ, ಉಣ್ಣೆ ಉದ್ಯಮ, ಕನ್ನಡ ಭಾಷೆ ಕುರಿತು; ಕೈಗಾರಿಕೆ, ತೆರಿಗೆ ನೀತಿ ಕುರಿತು, ವಿಜಾಪುರ ಜಿಲ್ಲೆಯ ಕುರಿ ಹಾಗು ಕುರಿಗಾರರ ಸ್ಥಿತಿಗತಿಗಳ ಬಗ್ಗೆ, ಭೂಸುಧಾರಣೆ ಶಾಸನದ ಬಗ್ಗೆ, ಡಾ. ರಾಜಕುಮಾರ, ಕನಕದಾಸರ ಬಗ್ಗೆ ಅವರ ವೈಚಾರಿಕ ಅಭಿಪ್ರಾಯಗಳು, ಲೇಖನಗಳು ಈ ಕೃತಿಯಲ್ಲಿವೆ. ಅವರ ವಾಸ್ತವಿಕ ವಿಶ್ಲೇಷಣೆ, ಅಂಕಿಅಂಶಗಳ ಸಂಗ್ರಹ, ವಿಷಯಗಳ ಜೊತೆಗಿನ ತಾದಾತ್ಮ್ಯ ನಿಖರ ಮಾಹಿತಿ ಭಾರೀ ಬುದ್ಧಿವಂತರಿಗೂ ಹೊಸ ಕಣ್ಣು ಕೊಟ್ಟಂತಿವೆ. ಇಲ್ಲಿಯ ಭಾಷೆ ಯೋಧನ ಕೈಯೊಳಗಿನ ಹತಾರದಂತಿದೆ. ನಮ್ಮ ಅಕಾಡೆಮಿಕ್ ಬುದ್ಧಿಜೀವಿಗಳಿಗೆ ಇಲ್ಲಿ ಒಂದು ಸರಿಯಾದ ಮಾದರಿ ಇದೆ ಎಂದೇ ಭಾವಿಸಲಾಗಿದೆ. ಕನ್ನಡದಲ್ಲಿಯ ಇತ್ತೀಚಿನ ಅಕಾಡೆಮಿಕ್ ಬರವಣಿಗೆಗಳು ಕುಂಡಿಗೆ ಸೂಜಿ ಚುಚ್ಚಿದಂತಿರುತ್ತವೆ.


ಧಾರವಾಡ ಹಾಗು ಹಾವೇರಿ ಜಿಲ್ಲೆಗಳಲ್ಲಿ ಒಂದು ಸಂಪ್ರದಾಯವಿದೆ. ಎಂತಹದೇ ಮಂತ್ರಿಗಳು, ಜನಪ್ರತಿನಿಧಿಗಳು, ಸಾಹೇಬರುಗಳು, ಅತಿರಥ ಮಹಾರಥರೆನ್ನುವವರು ತಮ್ಮ ವಾಹನಗಳಲ್ಲಿ ಊರ ಒಳಗಡೆ ಹಾದು ಹೋಗುತ್ತಿದ್ದರೆ, ಆ ಊರಿನವ ಆ ವಾಹನಗಳ ಎದುರು ಕಂಬಳಿ ಒಗೆದರೆ, ಆ ವಾಹನಗಳು ನಿಂತಲ್ಲಿಯೇ ನಿಲ್ಲಬೇಕಾಗುತ್ತದೆ ಹಾಗು ಅದರೊಳಗಿನ ಮಂತ್ರಿಗಳು, ಸಾಹೇಬರುಗಳು ಕೆಳಗಿಳಿಯಬೇಕಾಗುತ್ತದೆ. ಅದು ದೇವರ ಆಜ್ಞೆ. ಕಲ್ಲಣ್ಣನವರ ಇಂದಿನ ರಾಜಕೀಯ ಧುರೀಣರ ಎದುರು ಇತಿಹಾಸ ಒಗೆದುಹೋಗಿರುವ ಕಂಬಳಿಯಾಗಿದ್ದಾರೆ. ಅದು ಎಂಥವರನ್ನು ನಿಂತಲ್ಲಿಯೇ ನಿಲ್ಲಿಸುವ ಮೌಲಿಕ ಕಂಬಳಿಯಂತೆ ಕಂಡಿದೆ. ಕಂಬಳಿ ಪರಿಶುದ್ಧತೆಯ ಲೌಕಿಕ ವಸ್ತು. ಅದು ಲೌಕಿಕವಾಗಿದ್ದೂ ನಡೆನುಡಿಯ ಮುಖಾಂತರ ಅಲೌಕಿಕವಾಗುವ, ಎಲೆಮರೆಯ ಹೂವಾಗುವ, ಕಲ್ಲಣ್ಣನವರಂಥ ವ್ಯಕ್ತಿತ್ವವಾಗುವ ರೂಪಾಂತರದಂತೆ ಕಂಡಿದೆ. ಇದೇ ಕಲ್ಲಣ್ಣನವರ ಹೆಗ್ಗಳಿಕೆಯಾಗಿದೆ.

ಕಲ್ಲಣ್ಣನವರ ಕಾಲದ ರಾಜಕಾರಣ, ದರಿದ್ರ ನಾರಾಯಣನ ಸೇವೆಯಾಗಿತ್ತು. ಇಂದಿನ ರಾಜಕಾರಣ, ಗಳಿಸಿದ್ದನ್ನು ನೋಡಿ ಭಯದಲ್ಲಿ ಪ್ರಾಣ ಬಿಡುವ ಕಾಲವಾಗಿದೆ. ಈ ಕೃತಿ ಪ್ರಾಮಾಣಿಕ ರಾಜಕಾರಣದಲ್ಲಿ ಆಸಕ್ತಿ ಇರುವ ಪ್ರತಿಯೊಬ್ಬರೂ ಓದಲೇಬೇಕಾದ ಕೃತಿಯಾಗಿದೆ. 'ಎಲೆಮರೆಯ ಘಮಘಮ ಹೂವು' ಕೃತಿಯನ್ನು ಸಂಪಾದಿಸಿ, ಪ್ರಕಟಿಸಿ ಕನ್ನಡಿಗರಿಗೆ ಕೊಟ್ಟ ಪಲ್ಲವ ವೆಂಕಟೇಶ, ಹಾಗೆಯೇ ಈ ಕೃತಿಯ ಪ್ರೇರಣೆಗಳಾದ ಪ್ರೊ. ಕಾಳೇಗೌಡ ನಾಗವಾರ ಹಾಗು ಚಿತ್ತರಂಜನ ಕಲ್ಲಣ್ಣನವರ ಅವರು ನಿಜವಾಗಿಯೂ ಅಭಿನಂದನಾರ್ಹರಾಗಿದ್ದಾರೆ. ಇದು ಬರಿ ಎಲೆಮರೆಯ ಘಮ ಘಮ ಹೂವು ಅಲ್ಲ, ತನ್ನ ಮೌಲಿಕ ಪರಿಮಳದಿಂದ ಓದುಗರ ವ್ಯಕ್ತಿತ್ವದ ಮೇಲೆ ಗಾಢವಾದ ಪರಿಣಾಮ ಬೀರುವ, ಗಾಂಧೀಜಿಯ ಸತ್ಯದ ಅನ್ವೇಷಣೆಯಂಥ ನಮ್ಮದೇ ಆದ ಸ್ಥಾನಿಕ ಮಾದರಿಯಾಗಿದೆ.



■ ಎಸ್.ಎಫ್. ಯೋಗಪ್ಪನವರ್

ಸ್ವತಂತ್ರ ಭಾರತದ ನವ ಅಗ್ರಹಾರಗಳು



ಅಂದು ಅಗ್ರಹಾರಗಳಿದ್ದವು. ಅಲ್ಲಿ ಬ್ರಾಹ್ಮಣರು ಜೀವಿಸಲು ಮಾತ್ರ ಅರ್ಹರು. ಅಗ್ರಹಾರಗಳ ಕೋಟೆಯೊಳಗೆ ಪ್ರವೇಶಿಸಲು ಹಿಂದುಳಿದ ಜಾತಿಗಳು ನೂರು ಬಾರಿ ಯೋಚಿಸಬೇಕಿತ್ತು, ದಲಿತರಿಗಂತೂ ಅಲ್ಲಿ ಪ್ರವೇಶವೇ ಇಲ್ಲ. ಇದೇ ರೀತಿ ಬಹುತೇಕ ಗುರುಕುಲಗಳೂ ಇದ್ದವು. ಶೂದ್ರರನ್ನು, ಮಹಿಳೆಯರನ್ನು ಮತ್ತು ದಲಿತರನ್ನು ಹತ್ತಿರಕ್ಕೆ ಬಿಟ್ಟುಕೊಳ್ಳುತ್ತಿರಲಿಲ್ಲ. ಈಗ ಏತಕ್ಕೆ ಈ ಮಾತು? ಹಳೆಯ ಕಾಲದ ಸುದ್ದಿ ಇಂದೇಕೆ ಎಂದು ನೀವು ಕೇಳಬಹುದು. ಅದಕ್ಕೆ ಕಾರಣವಿದೆ. ಭಾರತದ ಐಐಟಿ ವಿದ್ಯಾಸಂಸ್ಥೆಗಳು, ಬಹುತೇಕ ವಿಶ್ವವಿದ್ಯಾಲಯಗಳು ಇಂದು ಅಗ್ರಹಾರಗಳಾಗಿಯೇ ಉಳಿದುಕೊಂಡಿವೆ. ಅಲ್ಲಿ ಓದುವ, ಉಪನ್ಯಾಸಕರಾಗಿ, ಪ್ರೊಫೆಸರುಗಳಾಗಿ ಕೆಲಸ ಮಾಡುವವರಲ್ಲಿ ಅತಿಹೆಚ್ಚು ಜನಸಂಖ್ಯೆಯಲ್ಲಿರುವವರು ಬ್ರಾಹ್ಮಣರೇ! ಅಲ್ಲಿ ಕೆಲಸ ಮಾಡಲು ಇನ್ನಿತರ ಹಿಂದುಳಿದ ವರ್ಗಗಳಿಂದಾಗಲೀ ದಲಿತರಲ್ಲಿಯಾಗಲೀ ಪ್ರತಿಭಾವಂತರು ಇನ್ನು ಸಿಕ್ಕಿಲ್ಲ. ಸತ್ಯಾಂಶಕ್ಕೆ ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಲಿತ ಅಧ್ಯಾಪಕರ ಅಂಕಿಅಂಶ ನೋಡಿದರೆ ತಿಳಿಯುತ್ತದೆ.

ವಿಶ್ವವಿದ್ಯಾಲಯಗಳು	ಪರಿಶಿಷ್ಟ ಜಾತಿ ಮೀಸಲು	ಕರ್ತವ್ಯ ನಿರ್ವಹಿಸುತ್ತಿರುವವರು	ಪರಿಶಿಷ್ಟ ಪಂಗಡ ಮೀಸಲು	ಕರ್ತವ್ಯ ನಿರ್ವಹಿಸುತ್ತಿರುವವರು
ಅಲಿಘರ್ ಮುಸ್ಲಿಂ ವಿ.ವಿ	283	1	142	0
ದೆಹಲಿ ವಿ.ವಿ	255	44	128	14
ಜವಹರ ಲಾಲ್ ವಿ.ವಿ	109	24	55	9
ಬನಾರಸ್ ಹಿಂದೂ ವಿ.ವಿ	362	115	181	30

ಮೀಸಲಾತಿಗೆ ಒಳಪಡುವ ವಿಶ್ವವಿದ್ಯಾಲಯಗಳಲ್ಲೇ ದಲಿತರ ಸ್ಥಿತಿ ಹೀಗಿರಬೇಕಾದರೆ, ಐಐಟಿಗಳಲ್ಲಿ ಮೀಸಲಾತಿ ನೀತಿ ಜಾರಿಗಾಗಿ ಒತ್ತಾಯಿಸಿರುವ ಕಾಯ್ದೆ ಇನ್ನೂ ಸಂಸತ್ತಿನಲ್ಲಿ ಕೊಳೆಯುತ್ತಿರುವಾಗ ಅಗ್ರಹಾರದವರು ದಲಿತರನ್ನು, ಹಿಂದುಳಿದವರನ್ನು ತಮ್ಮ ಕೋಟೆಯೊಳಕ್ಕೆ ಬಿಟ್ಟುಕೊಂಡಾರೆ? ಸಾಧ್ಯವೇ ಇಲ್ಲ. ಇಂತಹ ಐಐಟಿಗಳ ಸಾಲಿಗೆ ಮದ್ರಾಸ್ ಐಐಟಿ ಕೂಡ ಹೊರತಾದದ್ದಲ್ಲ. ಅದೂ ಕೂಡ ಅಗ್ರಹಾರವೇ ಆಗಿದೆ. ಅಲ್ಲಿ ಪರಿಶಿಷ್ಟ ವಿದ್ಯಾರ್ಥಿಗಳಿಗೆ 22.5% ಮೀಸಲಾತಿ ಇದ್ದರೂ 11.9% ದಲಿತರಿಗೆ ಮಾತ್ರ ಪ್ರವೇಶ ಸಿಕ್ಕಿದೆ. ಸಂಶೋಧನಾವಲಯದಲ್ಲಿ ಅದು 4% ಮೀರುವುದಿಲ್ಲ. 4687 ವಿಧ್ಯಾರ್ಥಿಗಳಲ್ಲಿ ಅಲ್ಲಿರುವ ದಲಿತರು ಕೇವಲ 559 ಮಾತ್ರ. ಪ್ರೊಫೆಸರುಗಳ ವಿಚಾರಕ್ಕೆ ಬಂದಾಗ ಅಲ್ಲಿರುವವರು ನಾಲ್ವರು ದಲಿತರು ಮಾತ್ರ! ಹಾಗಾದರೆ ಅಲ್ಲಿ ಅತಿಹೆಚ್ಚು ಓದುತ್ತಿರುವವರು, ಓದಿಸುತ್ತಿರುವವರು ಯಾರು? ಅದಕ್ಕೆ ಉತ್ತರ ಪಾಟಲಿ ಮಕ್ಕಳ್ ಕಚ್ಚಿ ಸಂಘಟನೆಯು ಹೊರತಂದಿರುವ ಪುಸ್ತಕದಲ್ಲಿದೆ. ಅಲ್ಲಿ ಹೇಳ "ಐಐಟಿಎಮ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಬಹುಸಂಖ್ಯಾತರು ಬ್ರಾಹ್ಮಣರು!" ಇನ್ನು ಓದಿಸುತ್ತಿರುವ ಪ್ರೊಫೆ ವಿಚಾರಕ್ಕೆ ಬಂದರೆ ಮಾಜಿ ಸಂಸದರಾಗಿದ್ದ ಇರಾ ಅನ್ಬರಸುರವರ ಹೇಳುವಂತೆ "ಐಐಟಿ ನಿರ್ದೇಶಕರಾದ ಎಮ್. ಅನಂತ್ ಒಬ್ಬ ಅಯ್ಯಂಗಾರ್ ಬ್ರಾಹ್ಮಣರಾಗಿದ್ದಾರೆ. ಅಲ್ಲಿ ನೇಮಕವಾಗಿರುವ 6 ಜನ ಡೀನ್‌ಗಳಲ್ಲಿ 4 ಜನ ಅಯ್ಯ ಬ್ರಾಹ್ಮಣರೇ ಆಗಿದ್ದಾರೆ". ಇನ್ನು ಅಧ್ಯಾಪಕ ವೃಂದಕ್ಕೆ ಬಂದರೆ ಐಐಟಿ ಮದ್ರಾಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೊಫೆಸರುಗಳು, 91 ಅಸೋಸಿಯೇಟಿವ್ ಪ್ರೊಫೆಸರುಗಳು ಮತ್ತು 177 ಸಹ ಪ್ರೊಫೆಸರುಗಳು ಸಾ ವರ್ಗದವರಾಗಿದ್ದಾರೆ! ಅದರಲ್ಲಿ ಹೆಚ್ಚಿರುವವರು ಬ್ರಾಹ್ಮಣರು. ದೇಶದಲ್ಲಿ 3% ಇರುವ ಬ್ರಾಹ್ಮಣ ಸಮುದಾ ಮೀಸಲಾತಿ ವ್ಯವಸ್ಥೆ ನೋಡಿ. ಯಾವ ಕಾನೂನಿನ ನೆರವಿಲ್ಲದೆ ಶತಶತಮಾನಗಳಿಂದ ಪಡೆದುಕೊಂಡು ಬಂ ಮೀಸಲಾತಿ ಇದು. ದಲಿತರಿಗೆ, ಹಿಂದುಳಿದವರಿಗೆ ಮೀಸಲಾತಿ ಕಾನೂನು ಮಾಡಿದರೆ ಮೊದಲು ಉರಿದುಕೊಳ್ಳುವವರೇ ಬ್ರಾಹ್ಮಣರು. ಆದರೆ ಮಂಡಲ್ ಆಯೋಗದ ಶಿಫಾರಸ್ಸು ಮಾಡುವಾಗು ಬೀದಿಗ ಕಚ್ಚಾಡಿದವರು ದಲಿತರು ಮತ್ತು ಹಿಂದುಳಿದ ಜಾತಿಯವರು! ಹೀಗೆ ಬ್ರಾಹ್ಮಣರ ಅಗ್ರಹಾರವಾಗಿರುವ ಐಐಟಿಎ ಅಂಬೇಡ್ಕರ್-ಪೆರಿಯಾರ್ ಹೆಸರಿನಲ್ಲಿ ಸ್ಟಡಿ ಸರ್ಕಲ್ ಮಾಡಿದರೆ ಸಹಿಸುತ್ತಾರೆಯೇ? ಅದೂ ಲ್ಯಾಬೋರೇಟರಿ ಸಂಸ್ಕೃತ ಭಾಷೆಯ ಹೆಸರಿಡುವುದರ ವಿರುದ್ಧ, ಸಸ್ಯಾಹಾರ-ಮಾಂಸಾಹಾರ ಮೆಸ್‌ಗಳನ್ನು ಪ್ರತ್ಯೇಕಿಸುವುದರ ಕೃಷಿಯಲ್ಲಿನ ಖಾಸಗಿ ಕಂಪೆನಿಗಳ ಹುನ್ನಾರದ ವಿರುದ್ಧ ಕಾರ್ಯಕ್ರಮಗಳನ್ನು ಮಾಡಿದರೆ ಹೇಗೆ ತಾನೆ ಸಹಿಸಿಯ ಎಂದೂ ಆಚರಿಸದ ಅಂಬೇಡ್ಕರ್ ಜಯಂತಿ ನಡೆದರೆ ಸರಿಯೇ? ಅದೂ ಅಗ್ರಹಾರದಲ್ಲಿ! ಅದಕ್ಕೆ ಆ ವಿದ ಸಂಘಟನೆಯನ್ನೇ ನಿಷೇಧಿಸಿಬಿಡುವ ಹುನ್ನಾರ ನಡೆಯಿತು. ಆದರೆ ನಿಷೇಧದ ಹಿಂದಿರುವ ಕೈಗಳು ಮಾತ್ರ ಸಂ ವಿರೋಧಿಸುವವು. ಮನುಸ್ಮೃತಿಯನ್ನು ಪುರಸ್ಕರಿಸುವವು. ಈ ಹಿನ್ನೆಲೆಯಲ್ಲಿ ನಿಷೇಧ ಪ್ರಕ್ರಿಯೆ ಸುತ್ತ ನಡೆದ ಘಟನೆಗಳನ್ ತಿಳಿಯುವುದು ಒಳಿತು.

ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್ ಈ ಹಿಂದೆ ಅಲ್ಲಿ ಸ್ಥಾಪಿಸಲಾಗಿದ್ದ ಬಲಪಂಥೀಯ ಚಿಂತನೆ ಸಂಘ ಮೇಲೆ ಬಲವಾದ ಪೆಟ್ಟುಗಳನ್ನು ನೀಡುತ್ತಿತ್ತು. ಆಗ ಅಲ್ಲಿನ ವಿದ್ಯಾರ್ಥಿಗಳ ಡೀನ್ "ಅಂಬೇಡ್ಕರ್-ಪೆರಿಯಾರ್ ರಾಜಕೀಯವಾಗಿ ಪ್ರೇರೇಪಿಸುತ್ತವೆ ಆದ್ದರಿಂದ ನಿಮ್ಮ ಸ್ಟಡಿ ಸರ್ಕಲ್‌ನ ಹೆಸರು ಬದಲಾಯಿಸಿ" ಎಂದು ಹೇಳಿ ಆದರೆ ಆ ಇಬ್ಬರು ಮಹಾನ್ ಮಾನವತಾವಾದಿಗಳ ತತ್ವಗಳನ್ನೇ ಧ್ಯೇಯವಾಕ್ಯವಾಗಿಸಿಕೊಂಡಿರುವ ಸಂಘಟನೆ ಹೆಸರನ್ನು ಬದಲಾಯಿಸಲು ಒಪ್ಪದೇ ಮುಂದುವರೆಯಿತು. ಮಾತ್ರವಲ್ಲ, ಇಷ್ಟು ವರ್ಷಗಳು ಬಲಪಂಥೀಯ ಗ ನಡೆಸಿಕೊಂಡು ಬರುತ್ತಿದ್ದ ವಿವೇಕಾನಂದರ ಹೆಸರಿನ ಸ್ಟಡಿ ಸರ್ಕಲ್ಲಿನ ಹೆಸರು ಬದಲಾಯಿಸಿ ಎಂದು ಪ್ರತ್ಯುತ್ತರ ನಿ ಆದರೆ ಡೀನ್ "ವಿವೇಕಾನಂದರ ಹೆಸರನ್ನು ಬಹಳ ವರ್ಷಗಳಿಂದ ಬಳಸುತ್ತಿರುವುದರಿಂದ ಅದನ್ನು ಬದಲಾಯಿ ಆಗುವುದಿಲ್ಲ" ಎಂದು ಸಮಜಾಯಿಷಿ ಕೊಟ್ಟರು. ಇಲ್ಲಿಯೇ ತಿಳಿಯುತ್ತದೆ ಅಗ್ರಹಾರದ ಮನಸ್ಸುಗಳು ಮನುಸ್ಮೃತಿಯ ಕಾನೂನನ್ನು ಹೇಗೆ ಚಾಚೂತಪ್ಪದೆ ಚಲಾಯಿಸುತ್ತಿವೆಯೆಂದು. ಇಷ್ಟಕ್ಕೆ ಸುಮ್ಮನಿರದೇ ಬಹಳ ವರ್ಷಗ ಬ್ರಾಹ್ಮಣವಾದವನ್ನು ಕಾಪಾಡಿಕೊಂಡು ಬಂದಿರುವ ಬಲಪಂಥೀಯರ ಆರೆಸ್ಸೆಸ್ ಗುಂಪೊಂದು ಮಾನವ ಸಂಪ ಇಲಾಖೆಗೆ ದೂರನ್ನು ನೀಡಿ ಬಿಟ್ಟಿತು. "ಇಲ್ಲಿ ಅಂಬೇಡ್ಕರ್-ಪೆರಿಯಾರ್ ಹೆಸರಿನ ವಿದ್ಯಾರ್ಥಿಗಳ ಗುಂಪು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುತ್ತಿದೆ. ಹಿಂದೂಗಳ ಮೇಲೆ, ನಮ್ಮ ಪ ಮೋದಿಯವರ ಮೇಲೆ ದ್ವೇಷ ಭಾವನೆ ಮೂಡಿಸಿ ಪ್ರತಿಭಟನೆಗಳನ್ನು ಮಾಡಿಸುತ್ತಿದೆ" ಎಂದು ದೂರಿನಲ್ಲಿ ದಾಖಲಿ ಆದರೆ 12% ಇರುವ ಪರಿಶಿಷ್ಟ ವಿದ್ಯಾರ್ಥಿಗಳು ಮತ್ತು ಪ್ರಗತಿಪರ ವಿದ್ಯಾರ್ಥಿಗಳು ಸಂವಿಧಾನದಡಿಯ ಚಟುವಟಿಕೆ ನಡೆಸಿದ್ದರೂ ಸರಿಯಾದ ಕಾರಣವನ್ನು ಐಐಟಿಎಮ್ ಆಗಲೀ ಆರೆಸ್ಸೆಸ್ ಆಗಲೀ ನೀಡಲಿಲ್ಲ. ಈ ದು ಮುಂದು ಮಾಡಿಕೊಂಡು ಭಾರತದ ಮಾನವ ಸಂಪನ್ಮೂಲ ಇಲಾಖೆ ಬಿಡುವಿರದ ಸಮಯದಲ್ಲಿಯೂ ಸಹ ಮೂರು ವಾರಗಳಲ್ಲಿ ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್‌ನ್ನು ನಿಷೇಧಿಸುವ ತೀರ್ಮಾನ ತೆಗೆದುಕೊಂಡಿತು ಹಿಂದೆ ಹಲವಾರು ಬೇಡಿಕೆಗಳಿಗೆ ಆಗ್ರಹಿಸಿ ವಿದ್ಯಾರ್ಥಿಗಳು ಮನವಿಗಳ ಮೇಲೆ ಮನವಿಗಳನ್ನು ಮಾಡಿಕೊಂಡಿ ಕ್ಯಾರೇ ಎನ್ನದ ಎಂಎಚ್‌ಆರ್‌ಡಿ ಐಐಟಿಯ ಒಂದು ಗುಂಪಿನ ವಿದ್ಯಾರ್ಥಿಗಳ ದೂರಿಗೆ ಪ್ರತಿಕ್ರಿಯಿಸಿರುವುದು ಸಹಜ ಸ್ಮೃತಿ ಇರಾನಿಯವರ ಕಡೆ ಬೊಟ್ಟು ಮಾಡುತ್ತದೆ ಅಲ್ಲವೆ? ಅವರು ಒಪ್ಪಲಿ ಬಿಡಲಿ ಅಂಬೇಡ್ಕರರನ್ನು ಪೆರಿಯಾ ದ್ವೇಷಿಸುವ ಪರಿ ಎಷ್ಟರಮಟ್ಟಿಗಿದೆ ಎಂಬುದು ನಮಗೆ ಈ ಪ್ರಕರಣದಿಂದ ತಿಳಿಯುತ್ತದೆ.

ಈಗ ನಿಷೇಧವನ್ನು ವಾಪಾಸು ತೆಗೆದುಕೊಂಡಿದ್ದಾರೆ. ಅದೂ ಪ್ರಗತಿಪರರು ಬೀದಿಗಿಳಿದ ಮೇಲೆ. ಆದರೆ ಬ್ರಾಹ್ಮ ಅಷ್ಟಕ್ಕೆ ನಿಲ್ಲುವುದಿಲ್ಲ. ಸಾಧ್ಯವಾದ ಕಡೆಗಳಲ್ಲೆಲ್ಲ ಅವಕಾಶ ಸಿಕ್ಕಾಗ ಜಾತಿಯ ಆಧಾರದಲ್ಲಿ ಅನ್ನವನ್ನು ಕಸಿದು ಹಾಕುತ್ತದೆ. ಎಂಜಲೆಲೆಗಳ ಮೇಲೆ ಉರುಳಿಸುತ್ತದೆ. ನೀನು ಅನರ್ಹ ಎಂದು ಹೇಳಿ ಕಾಲೇಜಿಗೆ ಪ್ರವೇ ನಿರಾಕರಿಸುತ್ತದೆ. ಕೈ ಬೆರಳು ಕತ್ತರಿಸುತ್ತದೆ. ತಲೆ ಕಡಿಯುತ್ತದೆ. ಸುಟ್ಟು ಕರಕಲಾಗಿಸುತ್ತದೆ. ಬಡವ ನೀ ಮಡುಗಿದ ಒಳಿತು ಇಲ್ಲದಿದ್ದರೆ ನಿಷೇಧಿಸುತ್ತೇನೆ ಎನ್ನುತ್ತದೆ. ಹೀಗಿರುವಾಗ ನಮ್ಮ ಕೂಗುಗಳು ಹೆಚ್ಚಾಗಬೇಕು. ಆ ಕೂಗು ಎದೆ ನಡುಗಿಸುವಂತಿರಬೇಕು.

■ ವಿಕಾಸ ಆರ್ ಮ

ದೇವರು ದೊಡ್ಡವನು



ಆಯುರಾರೋಗ್ಯಭಾಗ್ಯ ಕೊಡೆಂದು
ಪ್ರಾರ್ಥಿಸಲೆಂದೇ
ಅವರು ತೀರ್ಥಯಾತ್ರೆ ಹೊರಟಿದ್ದರು;
ಆ ಪೂಜೆ ಈ ಪೂಜೆ
ಸಾಲದೆಂಬಂತೆ
ಹುಂಡಿಗೂ ಧಾರಾಳ ತುಂಬಿ
ದೇವರನ್ನು ಸಂಪೂರ್ಣ ತೃಪ್ತಿಪಡಿಸಿದ್ದರು;
ಮನೆಮಂದಿಗೆ ಮಾತ್ರವಲ್ಲ
ನೆರೆಹೊರೆಯವರಿಗೂ ಪ್ರಸಾದ ಕಟ್ಟಿಕೊಂಡು
ಊರ ದಾರಿ ಹಿಡಿದವರು
ಭೀಕರ ಅಪಘಾತದಲ್ಲಿ
ಒಬ್ಬರೂ ಉಳಿಯದಂತೆ ಸತ್ತುಹೋದರು;
ಸತ್ತುಹೋದದಲ್ಲ,
ಭಕ್ತಿ ಮೆಚ್ಚಿ
ದೇವರು ಅವರೆಲ್ಲರನ್ನೂ ಬಳಿಗೆ ಕರೆಸಿಕೊಂಡ!
ದೇವರು ದೊಡ್ಡವನು
* * * *

ಅಪಘಾತದಲ್ಲಿ
ಅವನೊಬ್ಬನನ್ನುಳಿದು ಎಲ್ಲರೂ
ಇಹಲೋಕಯಾತ್ರೆ ಮುಗಿಸಿದರು;
ಬದುಕುಳಿದಾತ ಖುಷಿಯಿಂದ ಘೋಷಿಸಿದ-
'ದೇವರು ನಿಜಕ್ಕೂ ಇದ್ದಾನೆ
ಆತ ಕರುಣಾಮಯಿ
ನನ್ನನ್ನಾತ ಉಳಿಸಿದ್ದಾನೆ!'
ದೇವರು ದೊಡ್ಡವನು
* * * *

ಭಕ್ತರು ಒಪ್ಪಿಸಿದ
ರತ್ನಹಾರವನ್ನು
ಅರ್ಚಕರೇ ಅಪಹರಿಸಿದರು;
ಗೊತ್ತಿದ್ದರೂ
ದೇವರು ಸುಮ್ಮನಿದ್ದರು!
ದೇವರು ದೊಡ್ಡವನು
* * * *

ದೇವರನ್ನೂ ಕ್ಯಾರೇ ಅನ್ನದ
ಕಳ್ಳರ ಕಾಟ ಅತಿಯಾಗಿ
ಕಳ್ಳರನ್ನು ತಡೆಯಲು
ಸರ್ವಶಕ್ತನಿಗೂ ಕಷ್ಟವಾಗಿ
ಇದೀಗ
ದೇವರನ್ನು ಹೇಗಾದರೂ ರಕ್ಷಿಸಲು
ಹುಲುಮಾನವರೇ ನಿರ್ಧರಿಸಿದ್ದಾರೆ
ಗುಡಿಯ ಮೂಲೆಮೂಲೆಯಲ್ಲೂ
ಸಿಸಿ ಟಿವಿ ಅಳವಡಿಸಿದ್ದಾರೆ
ಸರ್ವಾಂತರ್ಯಾಮಿಯ ಮೇಲೆ
24 x7 ಕಣ್ಗಾವಲು!
ದೇವರು ದೊಡ್ಡವನು
* * * *

ಭೂಕಂಪದಲ್ಲಿ
ನಾಶವಾಗಿ ಹೋಯಿತು ನೇಪಾಳ
ಸತ್ತದ್ದು ಕೇವಲ ಹತ್ತು ಸಾವಿರ
ದೇವರ ಮಹಿಮೆ
ಪಶುಪತಿನಾಥನಿಗೆ ಏನೂ ಆಗಲಿಲ್ಲ!
ದೇವರು ದೊಡ್ಡವನು

■ ಶ್ರೀನಿವಾಸ ಕಾರ್ಕಳ

ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?

ನ ಬಿಟ್ಟು ಲಿಂಗವನೊಲಿಸಬೇಕೆಂಬರು,
ಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಬಿಟ್ಟು ಲಿಂಗವನೊಲಿಸಬೇಕೆಂಬರು,
ಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಬಿಟ್ಟು ಲಿಂಗವನೊಲಿಸಬೇಕೆಂಬರು,
ಣ್ಣಿಗೆಯೂ ಲಿಂಗಕ್ಕೆಯೂ ವಿರುದ್ಧವೆ?
ವ ಬಿಟ್ಟು ಲಿಂಗವನೊಲಿಸಬೇಕೆಂಬರು,
ಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ?
ಯಂಗಳ ಬಿಟ್ಟು ಲಿಂಗವನೊಲಿಸಬೇಕೆಂಬರು,
ಯಂಗಳಿಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಕ ಬಿಟ್ಟು ಲಿಂಗವನೊಲಿಸಬೇಕೆಂಬರು,
ಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ?
ಕಾರಣ, ಪರಂಜ್ಯೋತಿ ಪರಮಕರುಣಿ ಪರಮಶಾಂತನೆಂಬ ಲಿಂಗವು
ಪದ ಮುನಿಸಾರಿದಡೆ ಕಾಣಬಹುದು, ಮರೆದಡೆ ಕಾಣಬಾರದು.
ಯದ ಕಂಡೊದಗಿದ ಸುಖವು ಮಸಣಯ್ಯಪ್ರಿಯ ಗಜೇಶ್ವರಾ.

– ಗಜೇಶಮಸಣಯ್ಯಗಳ ಪುಣ್ಯಸ್ತ್ರೀ





ಗಜೇಶಮಸಣಯ್ಯಗಳ ಪುಣ್ಯಸ್ತ್ರೀ ಹೆಸರು ಗೊತ್ತಾಗಿಲ್ಲ, [illegible] ವಚನಗಳ ಹಸ್ತಪ್ರತಿಗಳಲ್ಲಿ ಹೆಸರು ಇಲ್ಲ. ಯಾವ [illegible]ಕಾರರೂ ಅವರ ಹೆಸರನ್ನು ಹೇಳಿಲ್ಲ. ಮಸಣಯ್ಯನವರ [illegible]ಸ್ತ್ರೀ ಆಗಿದ್ದರಿಂದ ಮಸಣಮ್ಮ ಎಂದು ಕೆಲವರು [illegible]ಯುವುದರಿಂದ ಆ ಹೆಸರು ರೂಢಿಯಲ್ಲಿದೆ. ಮಸಣಮ್ಮನ [illegible] ವಚನ ಅನುಭಾವದ ನೆಲೆಯ ಮೇಲೆಯೆ ಜೀವನ್ಮುಖಿ[illegible]ಗಿದೆ. ನಿರ್ಭಯ ಮತ್ತು ಸಂಯಮದಿಂದ ಕೂಡಿದ [illegible]ಪ್ರಧಾನ ವಚನವಿದು. ಸರಳ ಸಹಜ ಶಬ್ದಗಳ ಮೂಲಕ [illegible]ಣಮ್ಮ ಶಕ್ತಿಶಾಲಿಯಾದ ವಚನ ರಚಿಸಿದ್ದಾಳೆ. ದೈನಂದಿನ [illegible]ಕೆಗೆ ಅವಶ್ಯವಾಗಿ ಬೇಕಾಗಿರುವಂಥ ಎಲ್ಲವನ್ನೂ ನೈತಿಕದ [illegible]ಯಲ್ಲಿ ಪಡೆಯುವುದರಲ್ಲಿ ತಪ್ಪಿಲ್ಲ ಎಂದು ಮಸಣಮ್ಮ [illegible]ಸುತ್ತಾಳೆ. ದೇವರು ಕೂಡ ಅವುಗಳ ಸದ್ಬಳಕೆಯನ್ನು [illegible]ರೋಧಿಸಲಾರ ಎಂಬುದು ಅವಳ ನಿಲುವಾಗಿದೆ.

[illegible] ಅವಳ ವಿಚಾರ ವಾಸ್ತವದ ತಳಹದಿಯ ಮೇಲೆ ನಿಂತಿದೆ. [illegible]ವಧರ್ಮವು ಸಂಸಾರಧರ್ಮ ಆಗಿರುವ ಕಾರಣ [illegible]ಣಮ್ಮ ಲೌಕಿಕ ಜಗತ್ತಿನ ಯಾವುದನ್ನೂ ನಿರಾಕರಿಸಲಿಲ್ಲ. [illegible]ಹಕ್ಕೆ ಮತ್ತು ಜೀವಕ್ಕೆ ಬೇಕೆನಿಸಿದ್ದನ್ನು ಪಡೆಯುವುದರಲ್ಲಿ [illegible]ನಿದೆ? ದೇವರನ್ನು ಒಲಿಸಿಕೊಳ್ಳಲು ಹೊನ್ನು, ಹೆಣ್ಣು ಮಣ್ಣು ಮತ್ತು ಇಂದ್ರಿಯ ಸುಖಗಳನ್ನು ಏಕೆ ತ್ಯಜಿಸಬೇಕು? ಜಗತ್ತಿಗೆ ವಿಮುಖವಾಗಿ ಹಿಮಾಲಯ ಸೇರಬೇಕಿಲ್ಲ. ವಚನದಲ್ಲಿ ತಿಳಿಸಿದ ವಸ್ತುಗಳಿಗೆ ಮತ್ತು ಸಂಬಂಧಗಳಿಗೆ ದೇವರ ವಿರೋಧವಿಲ್ಲ ಎಂದು ಮಸಣಮ್ಮ ಪ್ರತಿಪಾದಿಸುತ್ತಾಳೆ. ಪ್ರಶ್ನಿಸುವುದರ ಮೂಲಕವೇ ತಿಳಿಸುವ ಕ್ರಮ ಅವಳ ಜೀವನಾನುಭವಕ್ಕೆ ಸಾಕ್ಷಿಯಾಗಿದೆ. ಮಸಣಮ್ಮ ಇದಿಷ್ಟೇ ಹೇಳಲಿಲ್ಲ. ತಾನು ಹೇಳಿದ ವಸ್ತುಗಳ ಬಳಕೆ ಮತ್ತು ಸಂಬಂಧಗಳು ದೇವಸಮ್ಮತವಾಗಿರಬೇಕು ಎಂದು ಎಚ್ಚರಿಸುತ್ತಾಳೆ.

ಪರಂಜ್ಯೋತಿ, ಪರಮಕರುಣಾಳು ಮತ್ತು ಪರಮಶಾಂತ ದೇವರು ಹೊನ್ನು ಹೆಣ್ಣು ಮತ್ತು ಮಣ್ಣನ್ನು ವಿರೋಧಿಸುವುದಿಲ್ಲ. ಆದರೆ ಅವುಗಳ ಜೊತೆಗಿನ ನಮ್ಮ ಸಂಬಂಧ ಅಪವಿತ್ರವಾಗಿದ್ದರೆ ಆತನಿಗೆ ಕೋಪ ಬರುವುದು. ಆತನ ಕೋಪಕ್ಕೆ ಕಾರಣವಾಧುದನ್ನು ಅರಿತು ನಮ್ಮ ಬದುಕನ್ನು ಸರಿಪಡಿಸಿಕೊಂಡರೆ, ಅಂದರೆ ಆತ್ಮಸಾಕ್ಷಿಯಂತೆ ನಡೆದುಕೊಂಡರೆ ದೇವರ ದರ್ಶನವಾದಂತೆಯೆ.


ಬಸವಧರ್ಮವು ಸಂಸಾರಧರ್ಮವಾದ ಹಾಗೆ ಸ್ತ್ರೀವಾದಿ ಧರ್ಮವೂ ಆಗಿದೆ. ಇಡೀ ಮಾನವಕುಲ ಸಸ್ತನಿ ವರ್ಗಕ್ಕೆ ಸೇರಿದ್ದು. ಸಸ್ತನಿ ವರ್ಗದ ಜೀವಿಗಳೆಲ್ಲ ತಾಯಿಯ ಹಾಲು ಕುಡಿದೇ ಬೆಳೆದವುಗಳಾಗಿವೆ. 'ಶರಣಸತಿ ಲಿಂಗಪತಿ' ಪರಿಕಲ್ಪನೆಯು ಸ್ತ್ರೀವಾದವನ್ನು ಎತ್ತಿ ಹಿಡಿಯುವಂಥದ್ದೇ ಆಗಿದೆ. ಶರಣರು ಸತಿಯಾಗಿ ಲಿಂಗಪತಿಯನ್ನು ನೋಡುವ ಮೂಲಕ ಇಡೀ ಸ್ತ್ರೀವರ್ಗಕ್ಕೆ ಗೌರವ ಸೂಚಿಸಿದ್ದಾರೆ. ಈ ಜಗತ್ತಿನಲ್ಲಿ ಮಾತೃಹೃದಯದ ವಿಜಯವಾಗಬೇಕು. ಅಂದಾಗ ಮಾತ್ರ ಸರ್ವರಿಗೂ ನ್ಯಾಯ ಮತ್ತು ಸಮಾನತೆ ಸಹಜವಾಗಿಯೇ ಲಭಿಸುವವು ಎಂಬುದು ಶರಣರ ದೃಢನಂಬಿಕೆಯಾಗಿತ್ತು. ಶರಣರು ಲಿಂಗದ ಸತಿಯಾದಾಗ ಸಹಜವಾಗಿಯೇ ಜಗನ್ಮಾತೆಯರಾಗುವರು. ಅಂದರೆ ವಿಶಾಲವಾದ ಮಾತೃಹೃದಯ ಹೊಂದುವರು. ಜಗತ್ತಿನ ಪ್ರತಿಯೊಂದು ಜೀವಿಯನ್ನು ಆಯಾ ಜೀವಿಯ ತಾಯಿಯಂತೆ ನೋಡುವರು. ಯಾವ ಜೀವಿಯ ತಾಯಿ ತನ್ನ ಮಗುವಿನ ರಕ್ಷಣೆಯನ್ನು ಕಡೆಗಣಿಸುವಳು? ಹಾಗೆಯೆ ಶರಣರು ತಾಯಿ ಸ್ವರೂಪದಲ್ಲಿ ನಿಂತು ಎಲ್ಲ ಜೀವಿಗಳ ರಕ್ಷಣೆಯನ್ನು ಬಯಸಿದರು. ಅಂತೆಯೆ ಶರಣ ಸಂಕುಲದಲ್ಲಿ ಮಹಿಳೆಯರಿಗೆ ಮಾತನಾಡುವ ಸಾಮರ್ಥ್ಯ ಬಂದಿತು. ಪ್ರಶ್ನಿಸುವ ಧೈರ್ಯ ಬಂದಿತು. ಭಾರತದ ಪುರುಷ ಪ್ರಧಾನ ಸಮಾಜದಲ್ಲಿ ಯುಗಯುಗಗಳಿಂದ ಅಭಿಪ್ರಾಯ ಸ್ವಾತಂತ್ರ್ಯವೂ ಇಲ್ಲದೆ ಬದುಕಿದ ಮಹಿಳೆ, ಶರಣರ ಸಮೂಹದಲ್ಲಿ ಎಷ್ಟು ಅದ್ಭುತವಾಗಿ ಮಾತನಾಡತೊಡಗಿದಳು ಎನ್ನುವುದಕ್ಕೆ ವಚನಕಾರ್ತಿಯರ ವಚನಗಳೇ ಸಾಕ್ಷಿಯಾಗಿವೆ.

ವಚನಕಾರ್ತಿಯರು ಸಾತ್ವಿಕವಾದ ಸಾಂಸಾರಿಕ ಬದುಕಿಗೆ ಬಹಳ ಬೆಲೆ ಕೊಟ್ಟಿದ್ದಾರೆ. ವ್ರತಪ್ರಜ್ಞೆಯ ಮೂಲಕ ಅನೈತಿಕ ಬದುಕನ್ನು ಸಿಕ್ಷಷ್ಟವಾಗಿ ಖಂಡಿಸಿದ್ದಾರೆ. ವಚನಕಾರ್ತಿಯರು ಜೀವನಮೌಲ್ಯಗಳ ಸಾಕಾರರೂಪವಾಗಿದ್ದಾರೆ. ಈ ಬದುಕನ್ನು ಪವಿತ್ರವಾಗಿ ಬದುಕಬೇಕು ಎಂಬುದು ಅದರ ಛಲವಾಗಿದೆ. ಈ ಛಲದಿಂದಲೇ ಗಜೇಶ ಮಸಣಯ್ಯನವರ ಪುಣ್ಯಸ್ತ್ರೀ ಇಂಥ ವಚನಗಳನ್ನು ಬರೆದಿದ್ದಾಳೆ.

ಹೆಣ್ಣು, ಹೊನ್ನು, ಮಣ್ಣು, ಅಂಗ, ಇಂದ್ರಿಯ ಮತ್ತು ಜಗತ್ತು ಲಿಂಗತತ್ವಕ್ಕೆ ವಿರುದ್ಧವಾಗಿಲ್ಲ ಎಂಬುದನ್ನು ಈಕೆ ಪ್ರತಿಪಾದಿಸುವ ಕ್ರಮ ಪ್ರಾಂಜಲ ಮನಸ್ಸಿನಿಂದ ಮತ್ತು ದೃಢನಿರ್ಧಾರದಿಂದ ಕೂಡಿದೆ. ಅವಳು ಹಾಕುವ ಎಲ್ಲ ಪ್ರಶ್ನೆಗಳಲ್ಲೇ 'ಇಲ್ಲ' ಎಂಬ ಉತ್ತರ ಧ್ವನಿಸುತ್ತದೆ. ಆ ಧ್ವನಿ ನಮಗೆ ಅರಿವಾಗದಂತೆಯೆ ನಮ್ಮ ಅಂತಃಕರಣಕ್ಕೆ ಮುಟ್ಟುತ್ತದೆ. ಈ ಸತ್ಯವನ್ನು ಅರಿತುಕೊಂಡು ನಾವು ಅವಳ ಮುಂದೆ ಮೌನವಾಗಿ ನಿಲ್ಲುವುದೊಂದೇ ಗೌರವಯುತವಾದ ನಿಲುವು.

ಈ ಪುಣ್ಯಸ್ತ್ರೀ ಹಾಕುವ ಪ್ರಶ್ನೆಗಳು ಮಾನವ ಸಂಸ್ಕಾರದ ಪರಿಧಿಯಲ್ಲಿವೆ. ಭೌತಿಕ ಮತ್ತು ಇಂದ್ರಿಯ ಸಂಬಂಧಗಳು ಮರ್ಯಾದೆಯ ನೆಲೆಯಲ್ಲೇ ಇರಬೇಕು ಎಂಬುದು ಆಕೆಯ ಷರತ್ತಾಗಿದೆ. ಹಾಗೆ ಆಗದಿದ್ದರೆ ಜನ ಸ್ವೇಚ್ಛಾಚಾರಿಗಳಾಗುವರು ಮತ್ತು ವಸ್ತುಮೋಹಿಗಳಾಗಿ ಕಂಡದ್ದೆಲ್ಲವೂ ತಮಗೇ ಬೇಕು ಎಂಬ ದುರಾಸೆಗೆ ಒಳಗಾಗುವರು. ಆಗ ಜಗತ್ತು ಎಲ್ಲ ತೆರನಾದ ಅನೈತಿಕ ವಾತಾವರಣದಿಂದ ಕಲುಷಿತಗೊಂಡು ಸಾತ್ವಿಕ ಬದುಕನ್ನು ಬದುಕಲು ಅನರ್ಹವಾಗುವುದು. ಅಂಥ ಬದುಕು ದೇವಸಮ್ಮತವಾದುದಲ್ಲ. ಆದ್ದರಿಂದ ಲಿಂಗ ಮೆಚ್ಚುವಂತೆ ಬದುಕಬೇಕು. ಲೈಂಗಿಕ ದಾಹ ಮತ್ತು ಭೌತಿಕ ದುರಾಸೆಗಳಿಂದ ಅಸಹ್ಯವಾಗಿ ಬದುಕಿದರೆ, ಶಾಂತಲಿಂಗಕ್ಕೆ ಕೋಪತಾಪಗಳುಂಟಾಗುವವು.


ಆದ್ದರಿಂದ ಹೀಗಾಗದಂತೆ ಎಚ್ಚರಿಕೆ ವಹಿಸಿ ಅರಿವನ್ನು ಗುರುವಾಗಿಸಿಕೊಂಡು ಸಾತ್ವಿಕವಾಗಿ ಭೌತಿಕ ಜಗತ್ತನ್ನು ಅನುಭವಿಸುವುದರಲ್ಲಿ ತಪ್ಪಿಲ್ಲ ಎಂಬುದನ್ನು ಈ ವಚನಕಾರ್ತಿ ಮನಕ್ಕೆ ನಾಟುವಂತೆ ತಿಳಿಸಿದ್ದಾಳೆ.



"ಇಂದ್ರಿಯ ನಿಗ್ರಹವ ಮಾಡಿದರೆ ಕಾಡುವವು ದೋಷಂಗಳು" ಎಂಬ ಬಸವಣ್ಣನವರ ಮಾತು ಮಸಣಮ್ಮನ ಈ ವಚನಕ್ಕೆ ರಕ್ಷಾ ಕವಚದಂತಿದೆ.

■ ರಂಜಾನ್ ದರ್ಗಾ

[illegible]ತಮಾನದ ಅತಿ ದೊಡ್ಡ ಬೂಸಿ



[illegible]ತ್ತನ್ನು ಚುನಾಯಿಸಿದರೆ ಬೆಲೆ ಏರಿಕೆಯನ್ನು ತಕ್ಷಣ [illegible]ಸುವೆ, ನೂರು ದಿನಗಳೊಳಗಾಗಿ ವಿದೇಶಗಳಲ್ಲಿ ಬಚ್ಚಿಟ್ಟ [illegible]ಹಣವನ್ನೆಲ್ಲ ತಂದು ಜನರ ಜೇಬಿಗೆ ಸುರಿಯುವೆ [illegible]ಇತ್ಯಾದಿ ನೂರಾರು ಸುಳ್ಳುಗಳನ್ನು ಹೊಸೆದ ಮೋದಿಯ [illegible]ಲಿಯತ್ತು ಏನೆಂದು ಜನಸಾಮಾನ್ಯರಿಗೆ ಅರ್ಥವಾಗ[illegible]ಡಗಿದೆ. ಇನ್ನು ಮೋದಿಯನ್ನು ಗೆಲ್ಲಿಸಿದವರಲ್ಲಿ [illegible]ವರಿಗಾದರೂ ಅಲ್ಪಸ್ವಲ್ಪ ಜ್ಞಾನೋದಯ ಆಗಿರಬಹು[illegible]ದು ಆಶಿಸೋಣ. ನಿಜ ಹೇಳಬೇಕೆಂದರೆ ಈ ಮೋದಿ [illegible]ಂಥ ಬೂಸಿಗಳನ್ನು ಬಿಡಬಲ್ಲ ಎಂಬುದು ಊಹೆಗೂ [illegible]ಕದ ವಿಷಯವಾಗಿದೆ! ಉದಾಹರಣೆಗೆ ಸಕಲ [illegible]ಜಾಬಜಂತ್ರಿಗಳೊಂದಿಗೆ ಆರಂಭವಾದ 'ನಮಾಮಿ ಗಂಗೆ' [illegible] ನದಿ ಶುದ್ಧೀಕರಣ ಯೋಜನೆಯನ್ನು ತೆಗೆದು ಕೊಳ್ಳಿ. [illegible]ಷಣೆಗೆ ಒಂದು ವರ್ಷವಾದರೂ ಗಂಗಾಮ ಯ್ಯಾಗೆ [illegible]ಮಿ' ಭಾಗ್ಯ ಇನ್ನೂ ಒದಗಿಬಂದಿಲ್ಲ. ಹಾಗಾಗಿ [illegible]ಗ ಮೋದಿಯ ಸಹಾಯಕ್ಕೆ ಧಾವಿಸಿರುವ ಸಚಿವೆ [illegible]ಮಾಭಾರತಿ, ಇದಕ್ಕೆ ಯೋಜನೆಯ ಸಮಸ್ತ ವೆಚ್ಚವನ್ನೂ [illegible]ದ್ರ ಸರ್ಕಾರವೇ ಭರಿಸಲು ನಿರ್ಧರಿಸಿರುವುದೇ [illegible]ಣವೆಂಬ ಸಮಜಾಯಿಷಿಯನ್ನು ಕೊಟ್ಟಿದ್ದಾಳೆ. ಜೊತೆಗೆ [illegible]ಗಾನದಿ ಶುದ್ಧಗೊಂಡಿರುವ ಪ್ರಥಮ ಚಿಹ್ನೆಗಳು 2016ರ [illegible]ಕ್ಟೋಬರ್ ಒಳಗಾಗಿ ಕಂಡುಬರಲಿವೆ ಎಂಬ ಭರವಸೆ [illegible]ಯನ್ನೂ ನೀಡಿದ್ದಾಳೆ. ಉಮಾಭಾರತಿಯ ಕಣಿ ಸಹಜವಾಗಿ [illegible] ಅಪಹಾಸ್ಯಕ್ಕೀಡಾಗಿದೆ. ಆದರೆ ಆಕೆಯನ್ನು ಗೇಲಿ [illegible]ಮಾಡಿದವರ ಪೈಕಿ ಮುಂಚೂಣಿಯಲ್ಲಿರುವವರು [illegible]ತಿಪಕ್ಷದವರಲ್ಲ, ಸ್ವತಃ ಬಿಜೆಪಿಯ ಎದುರಾಳಿ[illegible]ದವರಲ್ಲೊಬ್ಬನಾದ ಮುರಳಿ ಮನೋಹರ ಜೋಶಿ! [illegible]ಜೋಶಿ ಹೇಳಿದ್ದಾದರೂ ಏನು? "ಇದು ಹೀಗೇ [illegible]ಮುಂದುವರಿದರೆ ಇನ್ನು 50 ವರ್ಷಗಳಾದರೂ ಈ [illegible]ಜನೆ ಮುಗಿಯದು"!!

ಈ ಸಂದರ್ಭದಲ್ಲಿ ಹೆಚ್ಚುಕಡಿಮೆ ಇದೇ ರೀತಿಯ [illegible]ಂದು ಮಹತ್ವಾಕಾಂಕ್ಷಿ ನಿರ್ಮಲೀಕರಣ ಯೋಜನೆ [illegible] ಹೇಳಲೇಬೇಕು. ಅದುವೆ ಅಹಮದಾಬಾದಿನ [illegible]ಮತಿ ನದಿ ಯೋಜನೆ. ಗುಜರಾತಿನ ಮುಖ್ಯಮಂತ್ರಿ[illegible] ನಗರ ಸುಂದರೀಕರಣ ಕ್ಷೇತ್ರದಲ್ಲಿ ತಾನು ಮಾಡಿರುವ [illegible] ಸಾಧನೆ ಇದೆಂದು ಮೋದಿಯ ಬಡಾಯಿ [illegible] ಸಬರಮತಿ ಯೋಜನೆಗೆ ಗೃಹ ಹಾಗೂ ನಗರ [illegible]ಅಭಿವೃದ್ಧಿ ಸಂಸ್ಥೆಯ ಮೆಚ್ಚುಗೆಯಷ್ಟೆ ಅಲ್ಲ [illegible] ಅಂತಾರಾಷ್ಟ್ರೀಯ ಪ್ರಶಸ್ತಿ ಕೂಡ ಸಿಕ್ಕಿರುವ ಕತೆಯನ್ನೂ ನೀವು ಕೇಳಿರಬಹುದು. ಆದರೆ ಯಥಾಪ್ರಕಾರ ವಾಸ್ತವ ಬೇರೆಯೇ ಇದೆ.

ಮೊದಲು ಸಬರಮತಿ ಶುದ್ಧೀಕರಣ ಯೋಜನೆಯ ವಿವರಗಳನ್ನೊಂದಿಷ್ಟು ನೋಡೋಣ. ಸಬರಮತಿ ನದಿ ಅಹಮದಾಬಾದ್ ಶಹರನ್ನು ಪ್ರವೇಶಿಸುವುದು ಸುಭಾಷ್ ಸೇತುವೆಯ ಬಳಿ. ಅಲ್ಲಿಂದ ಅದು ಸುಮಾರು 11 ಕಿಲೊಮೀಟರ್‌ನಷ್ಟು ದೂರ ಹರಿದು ವಾಸ್ನಾ ಅಣೆಕಟ್ಟಿನ ಬಳಿ ಅಹಮದಾಬಾದನ್ನು ನಿರ್ಗಮಿಸುತ್ತದೆ. ಅಷ್ಟರೊಳಗಾಗಿ ಶಹರದ ಟನ್‌ಗಟ್ಟಳೆ ಕೊಳಚೆಯನ್ನೆಲ್ಲ ತನ್ನ ಒಡಲಲ್ಲಿ ಹೊತ್ತುಕೊಂಡಿರುತ್ತದೆ. ಅಹಮದಾಬಾದಿನಲ್ಲಿ ಉತ್ಪತ್ತಿಯಾಗುವ ಅಪಾರ ಪ್ರಮಾಣದ ಮಾನವ ತ್ಯಾಜ್ಯ ಮತ್ತು ಅಲ್ಲಿನ ಉದ್ದಿಮೆಗಳು ಹೊರಬಿಡುತ್ತಿರುವ ಭಾರಿ ಪ್ರಮಾಣದ ಕಲುಷಿತ ನೀರೆಲ್ಲವೂ ಒಳಚರಂಡಿ ಮತ್ತು ಕಾಲುವೆಗಳ ಮೂಲಕ ಹೋಗಿಸೇರುವುದು ಸಬರಮತಿಗೆ. ಮೋದಿಯ ಬಂಡವಾಳ ಹೂಡಿಕೆ ಸಮಾವೇಶಗಳಿಗೆ ಗಣ್ಯಾತಿಗಣ್ಯರು ಆಗಮಿಸುವ ಸಂದರ್ಭದಲ್ಲಿ ಇಂಥಾ ದುರ್ವಾಸನೆ ಬೀರುವ ನದಿಯಿಂದಾಗಿ ಕೆಟ್ಟ ಸಂದೇಶ ರವಾನೆಯಾಗುವ ಸಾಧ್ಯತೆ ಇರುವುದರಿಂದ ಒಂದು ವಿಶಿಷ್ಟ ಶುದ್ಧೀಕರಣ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಅದರ ಮುಖ್ಯಾಂಶಗಳೆಂದರೆ ನದಿಯಲ್ಲಿ ಅಲ್ಲಲ್ಲಿ ನಿರೋಧಕಗಳನ್ನು ನಿರ್ಮಿಸುವುದು ಮತ್ತು ವಾಸ್ನಾ ಅಣೆಕಟ್ಟಿನ ಕೆಳಗಡೆ ಪಿರಾವ ಎಂಬಲ್ಲಿ ಶುದ್ಧೀಕರಣ ಸ್ಥಾವರವೊಂದನ್ನು ಸ್ಥಾಪಿಸುವುದು. ನಿರೋಧಕಗಳಲ್ಲಿ ಸಂಗ್ರಹವಾಗುವ ಕೊಳಚೆ ನೀರನ್ನು ಸ್ಥಾವರಕ್ಕೆ ಪಂಪ್ ಮಾಡಿದಾಗ ಸ್ಥಾವರ ಅದನ್ನು ಶುದ್ಧೀಕರಿಸಿ ಮತ್ತೆ ನದಿಗೆ ಪಂಪ್ ಮಾಡುತ್ತದೆ. ಪರಿಣಾಮವಾಗಿ ಶಹರದ ಮೂಲಕ ಹರಿಯುವ ನದಿ ನಿರಂತರವಾಗಿ ಶುದ್ಧವಾಗಿರುತ್ತದೆ. ಸ್ಥಾವರಕ್ಕೆ ಬೇಕಾಗುವ ವಿದ್ಯುತ್ತನ್ನು ಸ್ಥಾವರದ ಉಪ ಉತ್ಪನ್ನಗಳಾದ ಅನಿಲ ಮತ್ತು ಒಣ ರೊಚ್ಚಿನಿಂದಲೇ ತಯಾರಿಸಿ ಪಿರಾನವನ್ನೊಂದು ಸ್ವಾವಲಂಬಿ ಘಟಕವಾಗಿ ಮಾಡುವ ಉದ್ದೇಶವೂ ಇತ್ತು.

ಈ ಯೋಜನೆಗೆ ಅಪಾರ ದುಡ್ಡು ಬೇಕಾಗಿತ್ತು. ಅದನ್ನೆಲ್ಲಿಂದ ತರೋಣ? ಆಗ ಹೊಳೆದದ್ದೇ ಭೂಮಿ ಮಾರಾಟದ ಪ್ಲಾನ್. ಸರಾಸರಿ 380 ಮೀಟರ್ ಅಗಲವಿರುವ ನದಿಯನ್ನು 275ಕ್ಕಿಳಿಸಿದಾಗ ಎರಡೂ ದಡಗಳಲ್ಲಿ ಸಾಕಷ್ಟು ಖಾಲಿ ಭೂಮಿ ಸಿಗುತ್ತದಲ್ಲವೇ? ಅಂತೆಯೆ 275 ಮೀಟರ್ ಅಗಲದಲ್ಲಿ ಇಕ್ಕೆಲಗಳಲ್ಲಿ ಪ್ರವಾಹಗಳನ್ನು ಎದುರಿಸಬಲ್ಲಷ್ಟು ಎತ್ತರದ ಕಾಂಕ್ರೀಟ್ ದಂಡೆಗಳನ್ನು ಕಟ್ಟಲು ನಿರ್ಧರಿಸಲಾಯಿತು. ಭೂಮಿಯ ಒಂದು ಪಾಲನ್ನು ಗೃಹನಿರ್ಮಾಣ ಮತ್ತು ವಾಣಿಜ್ಯ ಉದ್ದೇಶಗಳಿಗೆ ಬಳಸಿ ಉಳಿದ ಜಾಗದಲ್ಲಿ ಉದ್ಯಾನ ಮತ್ತು ವಿಹಾರಪಥಗಳನ್ನು ನಿರ್ಮಿಸುವುದೆಂದಾಯಿತು. ಇಂಥಾ ದ್ದೊಂದು ಯೋಜನೆ ವಿಶ್ವದಲ್ಲೇ ಪ್ರಥಮವಾಗಿ ದ್ದುದರಿಂದ ಸ್ವಾಭಾವಿಕವಾಗಿ ಅದು ಅಂತಾರಾಷ್ಟ್ರೀಯ ಗಮನವನ್ನೂ ಸೆಳೆದಿತ್ತು. ಬಳಿಹಾಳೆಯ ಮೇಲಂತೂ ಯೋಜನೆ ಅದ್ಭುತವಾಗಿ ಮೂಡಿಬಂದಿತ್ತು. ಆದರೆ ಎಡವಟ್ಟುಗಳೆಲ್ಲ ಶುರುವಾದದ್ದು ಕಾರ್ಯಗತ ಮಾಡುವಾಗ. ಹಣದ ಅಭಾವದಿಂದಾಗಿ ನಿರೋಧಕಗಳನ್ನು ಮತ್ತು ಸ್ಥಾವರಕ್ಕೆ ಮಲಿನ ನೀರನ್ನು ಸಾಗಿಸುವ ಪೈಪುಗಳನ್ನು ಅಳವಡಿಸದೆ ಕಾಂಕ್ರೀಟ್ ದಂಡೆಗಳನ್ನು ನಿರ್ಮಿಸಲಾಯಿತು. ಕೊನೆಗೆ ಆಗಬೇಕಾದ್ದೇ ಆಗಿದೆ. ಸಬರಮತಿ ಎಂದಿನಂತೆ ದುರ್ನಾತ ಬೀರುತ್ತಾ ಹರಿಯುತ್ತಿದೆ. ಸ್ಥಾವರಕ್ಕೆ ಸಾಕಷ್ಟು ಕೊಳಚೆ ನೀರು ಬರದ ಕಾರಣ ವಿದ್ಯುತ್ ಉತ್ಪಾದನೆಯ ಪ್ರಮಾಣವೂ ಉದ್ದೇಶಿತ ಮಟ್ಟಕ್ಕಿಂತ ಬಹಳ ಕಡಿಮೆ ಇದೆ.

ಒಟ್ಟಾರೆಯಾಗಿ ಇಡೀ ಯೋಜನೆಯ ಲೆಕ್ಕಾಚಾರವೆಲ್ಲ ತಲೆಕೆಳಗಾಗಿದೆ. ಅಹಮದಾಬಾದಿನ ಜನರ ಪಾಲಿಗಂತೂ ದುರ್ವಾಸನೆ ಬೀರುವ ಸಬರಮತಿ ಹಾಗೇ ಉಳಿದಿದೆ. ಇನ್ನೇನು ಮಾಡುವುದೆಂದು ತಲೆಕೆರೆದುಕೊಂಡವರಿಗೆ ಕೊನೆಗೊಂದು ಐಡಿಯಾ ಹೊಳೆದಿದೆ. ನರ್ಮದಾ ನದಿಗಡ್ಡವಾಗಿ ನಿರ್ಮಿಸಿರುವ ಸರ್ದಾರ್ ಸರೋವರ ಅಣೆಕಟ್ಟಿನ ನೀರು ಬೇಸಾಯಕ್ಕೆಂದು ಕೊಳಾಯಿಗಳ ಮೂಲಕ ರವಾನೆ ಆಗುತ್ತಿದ್ದು ಒಂದು ಕೊಳಾಯಿ ಸುಭಾಷ್ ಸೇತುವೆಗಿಂತ 1 ಕಿ.ಮೀ ಮೊದಲು ಸಬರಮತಿ ನದಿಯನ್ನು ದಾಟುತ್ತದೆ. ತಾತ್ಕಾಲಿಕ ಪರಿಹಾರವಾಗಿ ಆ ಕೊಳಾಯಿಯಿಂದ ನೀರನ್ನು ಪಡೆದು ಸಬರಮತಿಗೆ ಸರಬರಾಜು ಮಾಡಿದರೆ ಹೇಗೆ ಎಂದು ಯೋಚಿಸಿದ ಕೂಡಲೆ ಅದನ್ನು ಕಾರ್ಯಗತ ಮಾಡಿಯೂ ಆಗಿದೆ. ಆದರೆ ಅಣೆಕಟ್ಟಿನ ನಿರ್ಮಾಣಕ್ಕೆ ಸಹಸ್ರಾರು ಕೋಟಿ ರೂಪಾಯಿಗಳು ವೆಚ್ಚವಾಗಿದೆ ಎಂದು ಖ್ಯಾತೆ ತೆಗೆದ ಸರ್ದಾರ್ ಸರೋವರ ನಿಗಮ ಈ ನೀರಿಗೆ ತುಂಬಾ ದುಬಾರಿ ಬೆಲೆಯನ್ನು ವಿಧಿಸುತ್ತಾ ಇದೆ. ಹೀಗಾಗಿ ಇಕ್ಕಟ್ಟಿಗೆ ಸಿಲುಕಿದ ಸರ್ಕಾರವೀಗ ಏನು ಮಾಡುತ್ತಿದೆ ಎಂದರೆ ಯಾರಾದರೂ ವಿಐಪಿ, ವಿವಿಐಪಿಗಳು ಬಂದಾಗಲಷ್ಟೆ ಸರ್ದಾರ್ ಸರೋವರದ ನೀರನ್ನು ಸಬರಮತಿ ಮೂಲಕ ಹರಿಸಿ ದುರ್ನಾತ ಇರದಂತೆ ನೋಡಿಕೊಳ್ಳುತ್ತಿದೆ. ಅವರಿಗೆಲ್ಲ ಇದನ್ನೇ ತೋರಿಸುತ್ತಾ ತನ್ನ ಶುದ್ಧೀಕರಣ ಯೋಜನೆಯ ಯಶೋಗಾಥೆಯನ್ನು ಹೇಳುತ್ತಿದೆ. ಮಂಜಿಲ್ ಪುರೋಹಿತ್ ಎಂಬಾತ 2012ರಷ್ಟು ಹಿಂದೆಯೆ ಇದನ್ನು ಚಿತ್ರೀಕರಿಸಿದ್ದಾನೆ.

ಇತ್ತ ಇಕ್ಕೆಲದ ಭೂಮಿ ಖರೀದಿಸಲು ಯಾರೂ ಅಷ್ಟೊಂದು ಆಸಕ್ತಿ ತೋರುತ್ತಿಲ್ಲವಾಗಿ ರಿಯಲ್ ಎಸ್ಟೇಟ್‌ನವರಿಗೆ ಮಾರಾಟಮಾಡುವ ಪ್ಲಾನ್ ಕೂಡ ಉಲ್ಟಾ ಹೊಡೆದಿದೆ. ಅದೇನೋ ಸರ್ಕಾರ ನೀಡುತ್ತಿರುವ ಅಲ್ಪಸ್ವಲ್ಪ ಅನುದಾನದಿಂದಾಗಿ ಯೋಜನೆ ಬದುಕುಳಿದಿದೆ. ಆದರೆ ಮೋದಿಯ ಈ ಡಾಂಭಿಕ ಯೋಜನೆಯ ಬಲಿಪಶುಗಳು ಯಾರು? ಸಬರ್ಮತಿಯ ದಂಡೆಗಳಲ್ಲಿ ಕೊಳಚೆಗೇರಿಗಳಲ್ಲಿ ವಾಸಿಸುತ್ತಿದ್ದ 70,000ಕ್ಕೂ ಅಧಿಕ ಬಡಜನರು. ಅವರು ನದಿಯನ್ನು ಗಲೀಜು ಮಾಡುತ್ತಿದ್ದರೆಂದು ಆರೋಪಿಸಿ ಆ ಬಡಪಾಯಿಗಳನ್ನೆಲ್ಲ ಎತ್ತಂಗಡಿ ಮಾಡಿ ಎಲ್ಲೋ ದೂರದ ಕಾಲೋನಿಗಳಿಗೆ ಸ್ಥಳಾಂತರಿಸಲಾಗಿದೆ. ಇದರಿಂದ ನದಿಯ ದುರ್ವಾಸನೆ ಏನಾದರೂ ತೊಲಗಿತೇ? ಇಲ್ಲ, ಅದು ಹಾಗೇ ಇದೆ. ಮತ್ತೊಂದು ವಿಷಯ ಏನೆಂದರೆ ಕಾಂಕ್ರೀಟ್ ದಂಡೆಗಳ ಎತ್ತರ ಇರಬೇಕಾದಷ್ಟು ಇಲ್ಲ, ಸೆಕೆಂಡಿಗೆ 9000 ಘನಮೀಟರ್‌ಗಿಂತ ಜಾಸ್ತಿ ನೀರೇನಾದರೂ ಬಂದುಬಿಟ್ಟರೆ ಹೊಳೆ ಮೇಲಕ್ಕೆ ಉಕ್ಕಿ ಹರಿದು ಎರಡೂ ದಡಗಳಲ್ಲಿ ನೆರೆಯಾಗುವುದು ಖಚಿತ. ಇದು ಆಧಾರರಹಿತ ಊಹಾಪೋಹವಲ್ಲ, ಹಿಂದೆ ಸೆಕೆಂಡಿಗೆ 16000 ಘನಮೀಟರ್ ನೀರು ಹರಿದಿರುವ ದಾಖಲೆಗಳಿವೆ.

ಗುಜರಾತ್ ಮಾದರಿ ಅಭಿವೃದ್ಧಿ ಬಗ್ಗೆ ಇದುವರೆಗೂ ಬಿಡಲಾಗಿರುವ ಬೂಸಿಗಳಲ್ಲಿ ಬಹುಶಃ ಇದೇ ಅತ್ಯಂತ ದೊಡ್ಡದೆಂದು ತೋರುತ್ತದೆ. ಇದನ್ನು ಶತಮಾನದ ಅತಿ ದೊಡ್ಡ [illegible]


(ಆಧಾರ: [illegible]anar-kali.blogspot.in)

ಅನುರಣನ

ಡಾ. ಟಿ.ಎಸ್. ಚನ್ನೇಶ್
channesht[illegible]

ಆಪಲ್ ಅಜ್ಜ ಮತ್ತು ಸೇಬು ಹಣ್ಣು

ಕೆಲ ದಿನಗಳ ಹಿಂದೆ ಸಸ್ಯ ಪ್ರಪಂಚದ ವಿಸ್ತಾರ ಮತ್ತು ಹರಡಿಕೊಂಡಿರುವ ಸಂಬಂಧಗಳಲ್ಲಿ ಬೀಜಗಳ ತಾಂತ್ರಿಕ ವಿಚಾರಗಳ ಬಗ್ಗೆ ಹುಡುಕಾಟ ನಡೆಸುವಾಗ ಕೆಲವು ವಿಶೇಷ ಸಂಗತಿಗಳು ಗಮನಕ್ಕೆ ಬಂದವು. ಬೀಜದ ಸುತ್ತಲೂ ಹರಡಿಕೊಂಡಿರುವ ಸಂಗತಿಗಳ ಐತಿಹಾಸಿಕ ಸಂದರ್ಭಗಳನ್ನು ಗಮನಿಸುತ್ತಿರುವಾಗ ಒಂದು ವಿಚಾರ ತುಂಬಾ ಆತ್ಮೀಯವಾಗಿ ಮನಸ್ಸನ್ನು ತಟ್ಟಿತ್ತು. ಇದೀಗ ಸಾವಿರಾರು ಬೀಜದ ಕಂಪನಿಗಳು ಜಗತ್ತಿನಲ್ಲಿ ಕೋಟ್ಯಾಂತರ ರೂಪಾಯಿಗಳ ವಹಿವಾಟು ನಡೆಸುತ್ತಿವೆ. ಆದರೆ ಇವೆಲ್ಲಾ ಹೀಗೆ ಕೋಟ್ಯಾಂತರ ರೂಪಾಯಿಗಳ ಲಾಭದಲ್ಲಿ ಬಂದು ನಿಲ್ಲಬೇಕಾದರೆ ಹಿಂದೆ ಕೆಲವೇ ಪೈಸೆಗಳ ಆಸೆಯೂ ಇಲ್ಲದೆ ಬೀಜಗಳ ಹೆಕ್ಕಿ ಸಮಾಜದ ಒಳಿತಿಗೆ ಬಳಸಿದವರ ಕಥನಗಳೂ ಇದ್ದವು. ಅವುಗಳಲ್ಲಿ ಜಾನಿ ಆ್ಯಪಲ್‌ಸೀಡ್ ಎಂಬ ವ್ಯಕ್ತಿಯೂ ಒಬ್ಬರು ಎಂಬುದು ತಿಳಿಯಿತು. ಜಾನಿ ಆ್ಯಪಲ್‌ಸೀಡ್ ಅವರ ನಿಜ ನಾಮಧೇಯವಲ್ಲ, ಆತನ ಹೆಸರು ಜಾನ್





ಚಾಪ್‌ಮನ್. ಆತನ ಸೇಬು ಕುರಿತ ಪ್ರೀತಿ ಮತ್ತು ಅದನ್ನು ಅಮೆರಿಕೆಯಲ್ಲಿ ಪರಿಚಯಿಸಿದ ಮಾದರಿಗೆ ಹೀಗೆ ಹೊಸ ಹೆಸರು ಆತನೊಂದಿಗೆ ನೆಂಟಸ್ತನ ಹೊಂದಿತ್ತು, ಏಕೆಂದರೆ ತನ್ನ ಜೀವಮಾನದ ಸುಮಾರು ನಲವತ್ತೊಂಭತ್ತು ವರ್ಷ ಕೇವಲ ಸೇಬು ಬೀಜವನ್ನು ಹಂಚುತ್ತಾ ಸಸಿಗಳ ನಾಟಿ ಮಾಡುತ್ತಲೇ ಕಳೆದ ವ್ಯಕ್ತಿ ಈತ. ಅದಕ್ಕಾಗಿ ನಮ್ಮ ಹೆಸರಿಸುವಿಕೆಗೆ ಒಗ್ಗುವ ಆ್ಯಪಲ್ ಅಜ್ಜನೆಂದರೂ ಆದೀತು. ಅಲ್ಲಿನ ಸಂಸ್ಕೃತಿಯಲ್ಲಿ ಜಾನ್ ಚಾಪ್‌ಮನ್ -ಜಾನಿ ಆ್ಯಪಲ್‌ಸೀಡ್ ಆಗಿದ್ದವರು.

ಆರೇ ಇದೇನು ಈ ಆ್ಯಪಲ್ ಅಜ್ಜ ತನ್ನ ಜೀವಮಾನದ ಬಹುಭಾಗವನ್ನು ಕೇವಲ ಸೇಬುಹಣ್ಣಿನ ಬೀಜ ಮತ್ತು ಸಸಿಗಳ ನಾಟಿ ಮಾಡುತ್ತಾ ಮನುಕುಲದ ಸೇವೆ ಮಾಡಿದ್ದರು ಎಂದು ತಿಳಿದು ಚಕಿತನಾಗಿದ್ದೆ. ಮನಸ್ಸಿನಲ್ಲಿ ಉಳಿದಿದ್ದ ಆ್ಯಪಲ್ ಅಜ್ಜ ಕಾಲಾನಂತರ ಇಂಟರ್‌ನೆಟ್ ಜಾಲಾಟದ ಬಲೆಯಲ್ಲಿ ಸಿಕ್ಕಿಬಿದ್ದರು. ಹತ್ತು ಹಲವು ವೆಬ್‌ಪುಟಗಳಲ್ಲಿ ಹಂಚಿಹೋಗಿದ್ದ ಹತ್ತೆಂಟು ಕಥನಗಳು ಅಲ್ಲಿನ ಜನಪದವೆಂಬಂತೆ ಕಂಡವು. ಅವೆಲ್ಲವು ಆ ಸೇಬಿನ ಸೌಂದರ್ಯದಷ್ಟೇ ಚೆಲುವಾಗಿಯೂ ಇದ್ದವು. ನಮ್ಮಲ್ಲೂ ಇಂತಹವೇ ವಿಸ್ಮಯಗಳು ನಡೆದಿವೆಯಲ್ಲವೇ? ಅಥವಾ ಇದನ್ನು ಹೋಲುವ ಅನೇಕ ಸಂಗತಿಗಳೂ ಇಲ್ಲದಿಲ್ಲ, ಹಲವು ಹಳ್ಳಿಗಳಲ್ಲಿ ಇಂದಿಗೂ ಬೀಜ ಸಂಸ್ಕರಣೆಯನ್ನೇ ಮುಡುಪಾಗಿಟ್ಟುಕೊಂಡು ಬಂದ ರೈತರಿದ್ದಾರೆ, ರೈತ ಮಹಿಳೆಯರೂ ಇದ್ದಾರೆ. ಹೀಗೆ ನಮ್ಮ ಸಂಸ್ಕೃತಿಗೆ ಸಹಜವಾಗಿ ದುಬಾರಿಯಾದ ಹಣ್ಣೊಂದು ತನ್ನ ಹಿಂದೆ ಮಾನವೀಯತೆಯ ಮುಖದ ಕಥನವನ್ನು ಹೊತ್ತಿದೆಯಲ್ಲ ಅಂತಹದ್ದು ನಮ್ಮ ತಿಳಿವಿನ ಭಾಗವಾಗಬೇಕು.

ಕನ್ನಡದ ಓದುಗರಿಗೆ ಬೀಜದ ವಹಿವಾಟಿನ ಲೆಕ್ಕದಲ್ಲಿ ರಾಣೆಬೆನ್ನೂರು, ಹಾವೇರಿ ಹಾಗೂ ಹಿರೇಕೆರೂರು ಪ್ರದೇಶಗಳ ಜಮೀನುಗಳಲ್ಲಿ ಕಂಡರಿಯದ ಬೆಳೆಗಳ ಬೀಜೋದ್ಯಮ ತಿಳಿದಿರಲು ಸಾಧ್ಯವಿದೆ. ಅದರ ಜತೆಗೆ ಇಡೀ ಬೀಜದ ವಹಿವಾಟಿನ ಸಾಮ್ರಾಜ್ಯದ ಹಿನ್ನೆಲೆಯಲ್ಲಿ ಹೀಗೊಬ್ಬ ಅಜ್ಜನಿದ್ದ, ಜೀವಮಾನವಿಡೀ ಇಷ್ಟೊಂದು ಸುಂದರವಾದ ಹಣ್ಣೊಂದು ಜನರ ಹಸಿವನ್ನೂ ನೀಗಿಸಬಲ್ಲದ್ದೆಂದರೆ ಸೌಂದರ್ಯದ ಜತೆಗಿರುವ ಮಾನವೀಯ ಗುಣವನ್ನು ಮನುಕುಲಕ್ಕೆ ಸಾಗಿಸಿದ್ದ ಎಂಬುದನ್ನು ಹಂಚುವ ನೆಪವಾದ ಆಶಯಗಳನ್ನು ಈ ಟಿಪ್ಪಣಿಗಳು ಹೊತ್ತಿವೆ.

ಜಾನ್ ಚಾಪ್‌ಮನ್ ಮದುವೆಯಾಗಲೇ ಇಲ್ಲ, ಜೀವಮಾನವಿಡೀ ಬ್ರಹ್ಮಚಾರಿಯಾಗಿದ್ದರು. ಆದರೆ ತನ್ನ ಸಮುದಾಯದಲ್ಲಿನ ಜನರಲ್ಲಿ ಅದರಲ್ಲೂ ಮಕ್ಕಳಲ್ಲಿ ಅಪಾರ ಪ್ರೀತಿಯಿರಿಸಿಕೊಂಡಿದ್ದವರು. ಕಾಡುಮೇಡುಗಳನ್ನು ಸುತ್ತುತ್ತಲೇ ಕಾಲಕಳೆಯುತ್ತಿದ್ದ ಆ್ಯಪಲ್ ಅಜ್ಜ ಎಲ್ಲೆಂದರಲ್ಲಿ ಮಲಗಿ ರಾತ್ರಿಯನ್ನು ಕಳೆಯುತ್ತಿದ್ದರು. ಸರಳ ಊಟದಿಂದ ರಾತ್ರಿಯನ್ನು ಕಳೆಯುತ್ತಿದ್ದ ಜಾನ್ ಹತ್ತಿರದಲ್ಲಿರುವವರಿಗೆ ಕಾಡಿನ ಕಥೆಗಳನ್ನು ಹೇಳುತ್ತಾ, ಕೆಲವೊಮ್ಮೆ ಬೈಬಲ್ಲಿನ ಓದಿನಿಂದ ತಿಳಿದ ಸಂಗತಿಗಳನ್ನು ಹೇಳಿ ಜನರನ್ನು ಮಕ್ಕಳನ್ನೂ ತನ್ನ ಸ್ನೇಹದಲ್ಲಿ ಒಂದು ಮಾಡಿಕೊಳ್ಳುತ್ತಿದ್ದರು. ಸೇಬಿನಿಂದ ಮತ್ತು ಇಂತಹ ಜೀವಪರ ಕಥನಗಳಿಂದ ಜಾನ್ ಚಾಪ್‌ಮನ್ ಜನರಲ್ಲಿ ಜಾನಿ ಆ್ಯಪಲ್‌ಸೀಡ್ ಎಂದೇ ಹೆಸರಾಗಿದ್ದರು.

ಜಾನಿ ಆ್ಯಪಲ್‌ಸೀಡ್ 1774ರ ಸೆಪ್ಟೆಂಬರ್ 26ರಂದು ಜನಿಸಿದ್ದರೆಂದು ನಂಬಲಾಗಿದೆ. ಮೆಸಾಚುಸೆಟ್ಸ್‌ನ ಲಿಯೊಮಿನ್‌ಸ್ಟರ್ ಹತ್ತಿರ ಹುಟ್ಟಿದ್ದರು. ಆತನ ಬಾಲ್ಯದ ಬಗ್ಗೆ ಹೆಚ್ಚೇನೂ ತಿಳಿದಿಲ್ಲ, ಆತನ ಮುಂದಿನ ಮಾನವೀಯ ಕೆಲಸಗಳನ್ನು ಗಮನಿಸಿದರೆ ಅಷ್ಟರಮಟ್ಟಿಗೆ ತಿಳಿವಳಿಕೆಯನ್ನು ಗಳಿಸುವಷ್ಟು ವಿದ್ಯಾಭ್ಯಾಸ ಮಾಡಿರಬಹುದೆಂದೂ ಅಥವಾ ತನ್ನ ಜೀವನದ ಸದಭಿರುಚಿಯ ಕಲಿಕೆಯನ್ನು ಗಳಿಸಿರಬಹುದೆಂದೂ ಅಂದಾಜು. ಅಮೆರಿಕೆಯ ನಾಲ್ಕಾರು ರಾಜ್ಯಗಳಲ್ಲಿ ಸುತ್ತುತ್ತಾ, ಸೇಬು ನರ್ಸರಿಗಳ ಬೆಳೆಸುತ್ತಾ ಅಂತಹ ಹಣ್ಣನ್ನು ಜನತೆ ತಿನ್ನಬೇಕು ಎಂಬ ಬಯಕೆಯನ್ನು ಪ್ರಚಾರ ಮಾಡುತ್ತಾ ಜೀವನ ಸವೆಸಿದ್ದವರು. ಆತ ಹೋಗಿದ್ದ ಕಡೆಗಳೆಲ್ಲಾ ಗೆಳೆಯರೇ ತುಂಬಿದ್ದರು. ಇಡೀ ಓಡಾಟವನ್ನು ಬರಿಗಾಲಿನಲ್ಲಿಯೇ ಮಾಡುತ್ತಿದ್ದು ತನ್ನ ಜೀವಿತದ ಸುಮಾರು 70 ವರ್ಷವನ್ನು ಆರೋಗ್ಯಪೂರ್ಣವಾಗಿಯೇ ಕಳೆದವರು. 1845ರಲ್ಲಿ ತೀರಿಕೊಂಡ ಜಾನ್ ಆ ದಿನಗಳಲ್ಲಿ ಮಾತ್ರವೇ ಕೊಂಚ ಅನಾರೋಗ್ಯದಿಂದ ಇದ್ದರಂತೆ. ಅದರ ಹೊರತು ಇಡೀ ಜೀವಮಾನದಲ್ಲಿ ಒಳ್ಳೆಯ ಆರೋಗ್ಯವನ್ನು ಕಾಪಾಡಿಕೊಂಡ ಬಗ್ಗೆ ದಂತಕತೆಗಳಿವೆ. ಜಾನಿ ಆ್ಯಪಲ್‌ಸೀಡ್ ಅಮೆರಿಕೆಯ ಮಹಾ ಸರೋವರಗಳ ಹತ್ತಿರ, ಓಹಿಯೋ, ಮಿಸಿಸಿಪ್ಪಿ ನದಿಗಳ ಕಣಿವೆಯಲ್ಲೂ ಓಡಾಡಿ ನರ್ಸರಿಗಳ ನಿರ್ಮಿಸಿ ಮನುಕುಲಕ್ಕೆ ಸೇಬು ಎಂಬ ಸುಂದರ ಹಾಗೂ ಆರೋಗ್ಯಕ್ಕೆ ಒಗ್ಗುವ ಹಣ್ಣನ್ನು ಪರಿಚಯಿಸಿದ್ದರು.

ಜಾನಿ ಆ್ಯಪಲ್‌ಸೀಡ್ ಸದಾ ನಡಿಗೆಯನ್ನೇ ಇಷ್ಟಪಡುತ್ತಿದ್ದ ವ್ಯಕ್ತಿ, ತನ್ನ ನಡಿಗೆಯ ಉದ್ದಕ್ಕೂ ಸೇಬಿನ ಬೀಜಗಳನ್ನು ಜತೆಗೇ ಕೊಂಡೊಯ್ಯುತ್ತಿದ್ದರು. ಬೆನ್ನಮೇಲೆ ಇಳಿ ಬಿಟ್ಟ ಚೀಲದಲ್ಲಿ ಇಂತಹದ್ದೊಂದು ಸದಾ ಇರುತ್ತಿದ್ದುದೇ ಹೆಚ್ಚು, ಬಿತ್ತನೆಯ ಕಾಲಕ್ಕೆ ಸರಿಯಾಗಿ ಬೀಜಗಳು ತನ್ನಲ್ಲಿ ಇರುವಂತೆ ಕಾಲದ ಹಿಂದೆ ಓಡುತ್ತಿದ್ದ ಈತ ಅದಕ್ಕೆಲ್ಲಾ ಸಾಕಷ್ಟು ತಯಾರಿಯನ್ನು ನಿಸರ್ಗದ ಜತೆಗೇ ನಿರ್ವಹಿಸಲು ಕಲಿತಿದ್ದರು. ಬೀಜಗಳ ಹೆಕ್ಕಿ, ಅವನ್ನೆಲ್ಲಾ ಜೋಪಾನವಾಗಿ ಬಿತ್ತಿ ನರ್ಸರಿಯನ್ನೂ ಮಾಡಿ ಸಸಿ ಮಡಿಗಳನ್ನು ಒಪ್ಪವಾಗಿ ಮಾಡಿ ಹಂಚುವಲ್ಲಿ ಜಾನಿ ಆ್ಯಪಲ್‌ಸೀಡ್ ಕಾಯಕ ಎತ್ತಿದ ಕೈ. ಹಾಗಾಗಿ ತನ್ನ ಜೀವಮಾನದಲ್ಲಿ ಅದೆಷ್ಟು ಲಕ್ಷ ಬೀಜಗಳನ್ನು, ಜತೆಗೆ ಸಸಿಗಳನ್ನೂ ಹಂಚಿ ಪುಣ್ಯಕಟ್ಟಿಕೊಂಡರೋ ಲೆಕ್ಕ ಹಾಕಲು ಆಗದು. ಲಕ್ಷಾಂತರ ಬೀಜಗಳ ಹಾಗೂ ನೂರಾರು ನರ್ಸರಿಗಳನ್ನು ನಿಭಾಯಿಸುತ್ತಿದ್ದ ಬಗ್ಗೆ ಕತೆಗಳು ಹಬ್ಬಿರುವುದಂತೂ ನಿಜ.

ಆ್ಯಪಲ್ ಅಜ್ಜನ ಬಗ್ಗೆ ಅನೇಕ ದಂತಕತೆಗಳಿವೆ. ಆತ ಸದಾ ಕಾಡುಮೇಡೆನ್ನದೆ ಸುತ್ತುತ್ತಾ ಇರುತ್ತಿದ್ದುದರಿಂದ ಆತನಿಗೆ ಹಾವು ಮುಂತಾದ ವಿಷಜೀವಿಗಳು ಕಚ್ಚಲಾರವೆಂದು ಜನರು ನಂಬಿದ್ದರು. ಒಮ್ಮೆ ಒಂದು ಹಾವು ಕಚ್ಚಲು ಪ್ರಯತ್ನಿಸಿ ಆನೆಯಂತಹ ದಪ್ಪಚರ್ಮವನ್ನು ದಾಟಿ ಅದರ ಹಲ್ಲು ಒಳಹೋಗಲಿಲ್ಲವಂತೆ. ಆತ ಕರಡಿಗಳೊಂದಿಗೆ ಸರಸವಾಡುವವನಂತೆ... ಹೀಗೆ ಹತ್ತೆಂಟು ಸಂಗತಿಗಳು ಹರಡಿದ್ದವು. ಅದೇನೇ ಇರಲಿ, ಒಂದು ಅದ್ಭುತವಾದ ಹಣ್ಣನ್ನು ಒಂದೇ ದೇಶದಲ್ಲಿ ಜನಪರಗೊಳಿಸಿ ಹಂಚುವ ಕೆಲಸ ಮಾಡಿದ್ದು ದೊಡ್ಡ ಕೆಲಸ. ಏಕೆಂದರೆ ಅಮೆರಿಕೆಯಾದ್ಯಂತ ಹಬ್ಬಿರುವ ಇಂದಿನ ಸೇಬು ತೋಟ ಹಾಗೂ ತಳಿಗಳ ಅಭಿವೃದ್ಧಿಗೆ ಜಾನಿ ಆ್ಯಪಲ್‌ಸೀಡ್ ಅವರ ಕೆಲಸ ತುಂಬಾ ಸಹಾಯ ಮಾಡಿದೆ.

ಸುಂದರ ಹಾಗೂ ಪೋಷಕಾಂಶ ತುಂಬಿದ ಸೇಬು

ಪ್ರಸ್ತುತ ಬೀಜಗಳ ವಹಿವಾಟು ಹೇಗಿದೆ ಎಂದರೆ ಅದರ ಮೂಲಕ ಇಡೀ ಮನುಕುಲದ ಆಹಾರದ ವ್ಯವಸ್ಥೆಯನ್ನು ಕಂಪನಿಗಳು ತಮ್ಮ ಕೈಗೆ ತೆಗೆದುಕೊಳ್ಳುವಂತೆ ಆಗಿದೆ. ಬೀಜದಿಂದ ಅದನ್ನು ಬೆಳೆಸಲು ಬೇಕಾಗುವ ಎಲ್ಲಾ ಪರಿಕರಗಳನ್ನೂ ಕಂಪನಿಗಳೇ ಮಾರುತ್ತಾ ತಮ್ಮ ಲಾಭದ ಮೇಲೆಯೇ ಸದಾ ಕಾಳಜಿಯುಳ್ಳ ಸನ್ನಿವೇಶ ಉಂಟಾಗಿದೆ. ಅಂತಹುದರ ಹಿಂದೆ ಇಂತಹ ಸಂಗತಿಗಳೂ ಇರುವುದು ಅಚ್ಚರಿಯೆನಿಸದೇ ಇರದು. ಇರಲಿ ಬಹುಶಃ ಎಲ್ಲರಿಗೂ ತಿಳಿದಿರುವ ಗಾದೆಯೂ ಒಂದಿದೆ. "ದಿನಕ್ಕೊಂದು ಸೇಬು ತಿಂದು ಡಾಕ್ಟರನ್ನು ದೂರವಿಡು" ಎಂದು! ನಿಜ, ಸೇಬು ದುಬಾರಿಯ ಹಣ್ಣಾದರೂ ಅದಕ್ಕೆ ಇಂತಹ ಆರೋಗ್ಯದ ಜವಾಬ್ದಾರಿಯ ಕನಸುಗಳನ್ನು ಹೊರಿಸಲಾಗಿದೆ. ಜಾನ್‌ರ ಕಾಲದಲ್ಲಿ ಆದರ ವೈಜ್ಞಾನಿಕ ಸಂಗತಿಗಳ ತಿಳಿವಳಿಕೆಯಿಲ್ಲವಾದರೂ ಅದರ ತಿನ್ನುವ ತಿಳಿವಳಿಕೆಯಂತೂ ಇತ್ತು, ಅದೇ ಜೀವ ಜಗತ್ತಿನ ಅದ್ಭುತ ಸಂಗತಿ. ಎಂತೆಂತಹ ಹಣ್ಣು, ಕಾಯಿ, ಬೀಜ, ಸೊಪ್ಪುಗಳನ್ನು ತಿನ್ನಬಹುದೆಂಬ ಅತಿದೊಡ್ಡ ಸಂಶೋಧನೆಯನ್ನು ಮನುಕುಲ ಮಾಡಿಕೊಂಡಿದೆ. ಆಧುನಿಕ ವಿಜ್ಞಾನ ಅವನ್ನೆಲ್ಲಾ ತರ್ಕಕ್ಕೆ ಒಳಪಡಿಸಿ ಅದು ಹೀಗೆ ಇದು ಹೀಗೆ ಎಂಬೆಲ್ಲಾ ವಿವರಗಳನ್ನು ಮಾತ್ರವೇ ಕೊಟ್ಟಿದೆ.

ನಮ್ಮ ಪರಿಚಯದ ಸುಂದರವಾದ ಹಣ್ಣು ಸೇಬು ವೈವಿಧ್ಯಮಯವಾದ ಹಾಗೂ ನಮ್ಮ ದೇಹಕ್ಕೆ ಅಗತ್ಯವಾದ ಅನೇಕ ಸತ್ವಗಳನ್ನು ಹೊಂದಿದೆ. ಸುಮಾರು 100 ಗ್ರಾಂ ತೂಗುವ ಸೇಬು ಹಣ್ಣಿನಲ್ಲಿರುವ ವಿವಿಧ ಸತ್ವಗಳನ್ನು ನೋಡೋಣ. ಒಂದು ನೂರು ಗ್ರಾಂ ತೂಕದ ಹಣ್ಣನ್ನು ತಿನ್ನುವುದರಿಂದ ನಮಗೆ ಸುಮಾರು ಹತ್ತರಿಂದ ಹನ್ನೊಂದು ಗ್ರಾಂನಷ್ಟು ಸಕ್ಕರೆ ದೊರೆತು 52 ಕಿಲೋ ಕ್ಯಾಲರಿ ಶಕ್ತಿಯು ದೊರಕುತ್ತದೆ. ಇದರಲ್ಲಿ ಅಷ್ಟು ಹೆಚ್ಚಾಗಿ ನಾರಿನ ಅಂಶವಿಲ್ಲ, ಕೇವಲ 2 ಗ್ರಾಂನಷ್ಟು ಮಾತ್ರವೇ ನಾರು ಇದೆ. ಅಷ್ಟು ಹಣ್ಣಿನಲ್ಲಿ ನೀರಿನ ಅಂಶ ಸುಮಾರು 85 ಭಾಗ ತುಂಬಿರುವುದುಂಟು. ಕೊಬ್ಬು ಕಾಲು ಗ್ರಾಂ ಮಾತ್ರವೇ ಇದೆ. ಹಾಗೆಯೇ ಪ್ರೊಟೀನ್ ಕೂಡ ಕಾಲು ಗ್ರಾಂನಷ್ಟು ಇದೆ. ಉಳಿದಂತೆ ಇದರಲ್ಲಿ ಅನೇಕ ವಿಟಮಿನ್ನುಗಳು ತುಂಬಿಕೊಂಡಿವೆ. ವಿಟಮಿನ್ ಎ, ಬಿ ಹಾಗೂ ಸಿ ಇದರಲ್ಲಿ ಸಮೃದ್ಧವಾಗಿವೆ. ಬಿ ವಿಟಮಿನ್ನುಗಳಾದ ಥೈಯಾಮಿನ್, ರಿಬೋಫ್ಲೆವಿನ್, ನಿಯಾಸಿನ್ ಪೆಂಟೊತೇನಿಕ್ ಆಮ್ಲ ಮುಂತಾದವು ಇವೆ. ನಮಗೆ ಸೇಬನ್ನು ಹೆಚ್ಚಿ ಇಟ್ಟು ಸ್ವಲ್ಪ ತಡೆದು ತಿನ್ನುವಾಗ ಅದರ ಬಣ್ಣ ಬದಲಾಗಿ ಕಂದು ಬಣ್ಣಕ್ಕೆ ತಿರುಗಿರುವುದರ ಅನುಭವ ಇದ್ದೇ ಇರುತ್ತ[illegible] ಇದರ ಪ್ರಮುಖ ಕಾರಣ ಅದರಲ್ಲಿರುವ ಕಬ್ಬಿಣದ ಅಂ[illegible] ಸಾಕಷ್ಟು ಕಬ್ಬಿಣವನ್ನು ಹೊಂದಿರುವುದರಿಂದ ಹೆಚ್ಚಿದ ಮೇ[illegible] ಹೊರ ಗಾಳಿಗೆ ತೆರೆದುಕೊಂಡು ಕಬ್ಬಿಣದ ಆಕ್ಸೈಡಿನಿಂದಾ[illegible] ಕಂದು ಬಣ್ಣಕ್ಕೆ ತಿರುಗುತ್ತದೆ. ಅದಕ್ಕಿಂತಲೂ ಜೀ[illegible] ಕ್ಯಾಲ್ಸಿಯಂ ಹಾಗೂ ಮೆಗ್ನಿಸಿಯಂಗಳನ್ನು ಸೇಬಿನಿಂ[illegible] ಪಡೆಯಬಹುದು. ಕ್ಯಾಲ್ಸಿಯಂ-ಮೆಗ್ನಿಸಿಯಂಗಳ ಜತೆ[illegible] ಮತ್ತೂ ಹೆಚ್ಚೂ ಪೊಟ್ಯಾಸಿಯಂ ಕೂಡ ಆಹಾರವಾ[illegible] ಲಭ್ಯವಾಗಲಿದೆ. ಜತೆಯಲ್ಲಿ ಸ್ವಲ್ಪ ಅಗತ್ಯವಾದ ಸತು ಕೂ[illegible] ಈ ಸೇಬಿನಿಂದ ಸಿಗಲಿದೆ. ಹೀಗೆ ಅಂದದ ಮೈಬ[illegible] ಜತೆಗೆ ಒಳಹಣ್ಣಿನ ರಸಭರಿತ-ಸತ್ವಭರಿತ ಆಹಾರದ ಅಗತ್ಯ[illegible] ತುಂಬಿಕೊಂಡು ಸೇಬು ನಮ್ಮ ಆರೋಗ್ಯದ ಸೇವೆಯನ[illegible] ಮಾಡುತ್ತಿದೆ.

ಹೂಗಳಲ್ಲಿ ಗುಲಾಬಿಗೆ ನಾವು ಸೌಂದರ್ಯದ ಸ[illegible] ಕೊಟ್ಟಿದ್ದೇವಲ್ಲವೇ? ಸಸ್ಯಶಾಸ್ತ್ರೀಯವಾಗಿ ಗುಲಾಬಿ ಮ[illegible] ಸೇಬು ಒಂದೇ ಕುಟುಂಬಕ್ಕೆ ಸೇರಿದವು. ಈ ಸೇಬನ[illegible] ತಿನ್ನಲು ಮೊದಲು ಪತ್ತೆ ಹಚ್ಚಿದ್ದು ಮಧ್ಯ ಏಷಿಯಾ[illegible] ಪ್ರದೇಶಗಳ ಜನರು. ಅಲ್ಲಿನ ಮೂಲನಿವಾಸಿಗಳು ಪ[illegible] ಹಚ್ಚಿ ಹಾಗೇ ಮನುಕುಲಕ್ಕೆ ಸೌಂದರ್ಯದ ಹಣ್ಣಾಗಿ ಸಿಕ್ಕಿ[illegible] ಇಂದಿಗೂ ಅತಿಹೆಚ್ಚು ಸೇಬುಬೆಳೆಯುವ ದೇಶವೆಂದ[illegible] ಚೀನಾ. ಹೆಚ್ಚೂಕಡಿಮೆ ಜಗತ್ತಿನ 35% ನಷ್ಟು ಹಣ್ಣುಗಳ[illegible] ಚೀನಾ ಒಂದೇ ಒದಗಿಸುತ್ತದೆ. ನಂತರದ ದೇಶಗಳ[illegible] ಕ್ರಮವಾಗಿ ಅಮೆರಿಕ, ಇರಾನ್, ಟರ್ಕಿ, ಇಟಲಿ ಹಾಗ[illegible] ಭಾರತಗಳು ಬರುತ್ತವೆ. ಅಮೆರಿಕ ಕೂಡ ಸುಮಾ[illegible] 8ರಿಂದ 9% ಸೇಬನ್ನು ಬೆಳೆಸುತ್ತದೆ. ಜಗತ್ತಿನಾದ್ಯಂ[illegible] 50 ರಿಂದ 60 ದಶಲಕ್ಷ ಟನ್ನುಗಳ ಉತ್ಪಾದನೆಯ[illegible] ಹೆಚ್ಚೂಕಡಿಮೆ 7ರಿಂದ 8 ಸಾವಿರ ತಳಿಗಳು ನಿರ್ವಹಿಸುತ್ತ[illegible] ನಮ್ಮ ಕಣ್ಣಿಗೆ ಕಾಶ್ಮೀರ್ ಸೇಬು, ಹಿಮಾಚಲ, ಫ್ಯೂ[illegible] ಇತ್ಯಾದಿ ಒಂದೆರಡು ಕಂಡರೂ ಸಾವಿರಾರು ಬಗೆಯ ತಳಿಗ[illegible] ಜಗತ್ತಿನಾದ್ಯಂತ ಹಬ್ಬಿವೆ. ಇಂಗ್ಲೆಂಡಿನ ರಾಷ್ಟ್ರೀಯ ಹ[illegible] ಸಂರಕ್ಷಣಾ ತೋಟವೊಂದರಲ್ಲೇ ಸುಮಾರು 2100 ಸೇಬ[illegible] ತಳಿಗಳನ್ನು ಸಂಗ್ರಹಿಸಲಾಗಿದೆ. ಅಂದಂತೆ ಸ್ವಲ್ಪ ಹುಳಿಮಿಶ್ರ[illegible] ವಾದ ಜತೆಗೆ ಹೆಚ್ಚೇ ಸಿಹಿಯನ್ನೂ ಹೊಂದಿರು[illegible] ಸೇಬುಗಳೆಂದರೆ ನಮ್ಮ ದೇಶದವೇ! ನಮ್ಮ ಜನರು ಸಿ[illegible] ಸೇಬುಪ್ರಿಯರು. ಅಚ್ಚರಿಯಾಗುವ ಸಂಗತಿ ಎಂದರೆ ಬೇಯಿ[illegible] ತಿನ್ನುವ ಸೇಬಿನ ತಳಿಗಳೂ ಇವೆ. ನಮ್ಮಲ್ಲಿ ಹಲಸಿ[illegible] ಹಣ್ಣೂ ಹಾಗೇ ಅಲ್ಲವೇ? ಸಾಂಬಾರಿಗೆ ಹಲಸಿನ ಕಾಯಿ[illegible] ತಳಿಗಳು ನಮ್ಮ ಮಲೆನಾಡಿನಲ್ಲಿ ಜನಪ್ರಿಯ.

ಇಷ್ಟೊಂದು ಅಂದ, ಆಕಾರ, ಸತ್ವಭರಿತ ಹಣ[illegible] ಪುರಾಣಗಳಲ್ಲಿ ಪಾಪದ ಹಣ್ಣಾಗಿತ್ತು ಪಾಪ! ಪಾಪದ ಹ[illegible] ಸೇಬನ್ನು ತಿಂದ ಆ್ಯಡಂ ಮತ್ತು ಈವ್ ಭೂಮಿ[illegible] ಬರಬೇಕಾಯಿತು ಇತ್ಯಾದಿ. ಬಹುಶಃ ಅವರು ಹಣ್ಣನ್ನೂ ಜೊ[illegible] ತಂದರೇನೋ, ಏಕೆಂದರೆ ಮನುಕುಲದ ಎಲ್ಲ ಕೆಲಸಗ[illegible] ಪಾಪ ನಿರಂತರವಾಗಿಯೇ ಮುಂದುವರೆದಿದೆ. ಹೀಗೆ ಅನ[illegible] ಜನಾಂಗೀಯ ಪುರಾಣಗಳಲ್ಲಿ ಹಲವು ಬಗೆಯ ಕಥನಗಳ[illegible] ಈ ಹಣ್ಣು ಪಡೆದುಕೊಂಡಿದೆ. ಅದೆಲ್ಲದರ ಜತೆಗೆ ನಿರಂತರವ[illegible] ನಮ್ಮ ಟೇಬಲ್ಲಿನ ಆಕರ್ಷಣೆಯನ್ನು ಉಳಿಸಿಕೊಂಡ ಹಣ್ಣಾಗಿ[illegible] ಜಾನಿ ಆ್ಯಪಲ್‌ಸೀಡ್ ಅವರ ಜತನದಿಂದ ಅಮೆರಿಕಾದ್ಯ[illegible] ಸೇಬು ಹರಡಿಕೊಂಡಿದ್ದಂತೂ ನಿಜ. ಅದೇನೂ ಕುತೂಹಲವೆಯ[illegible] ಈಗಲೂ ಅವರು ಬೆಳೆಸಿದ ನರ್ಸರಿಗಳಲ್ಲಿ ಹಳೆಯ ಸೇ[illegible] ಮರಗಳು ಇವೆಯಂತೆ. ಇಲ್ಲದಿದ್ದರೂ ಆತ ನೆಟ್ಟು ಬೆಳೆ[illegible] ಮರಗಳಿಂದ ಫಲಿತಗೊಂಡ ಬೀಜದಿಂದ ಪುನರ್ಗೊಂ[illegible] ಹಬ್ಬಿದ್ದವಂತೂ ಆಗಿರುತ್ತವೆ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಪೌರಾಣಿಕ ಬುದ್ಧನಿಗೆ ಬೌದ್ಧ ಪೌರೋಹಿತ್ಯ

2,500 ವರ್ಷಗಳ ಹಿಂದೆ, ಸುಮಾರು ಕ್ರಿಸ್ತಪೂರ್ವ ...ತಿನಲ್ಲಿ, ಹಿಮಾಲಯದ ತಪ್ಪಲಿನ ಕಪಿಲವಸ್ತುವಿನ ರಾಜ ...ದ್ಧೋದನ. ಅವನ ಹೆಂಡತಿ ಮಹಾ ಮಾಯ. ಶಾಕ್ಯ ...ರೆಯಾದ ಈತ ಬಹಳ ಶ್ರೇಷ್ಠವಾದ ಆಳ್ವಿಕೆಯನ್ನು ...ಸುತ್ತಿದ್ದ. ಅವನ ಹೆಂಡತಿ ಹುಣ್ಣಿಮೆಗೆ ಮೊದಲು ...ವುದೇ ಮಾದಕವಸ್ತುಗಳನ್ನೂ ಸೇವಿಸದೇ, ಸಮೃದ್ಧ ...ರಗಳು ಮತ್ತು ಸುಗಂಧ ದ್ರವ್ಯಗಳೊಂದಿಗೆ ಹಬ್ಬವನ್ನು ...ು ದಿನ ಆಚರಿಸಿದಳು. ಏಳನೆಯ ದಿನ ಆಕೆಯು ...ಂಜಾನೆಯೇ ಎದ್ದು ಪನ್ನೀರಿನಲ್ಲಿ ಸ್ನಾನ ಮಾಡಿ, ನಾನೂರು ...ವಿಧ ನಾಣ್ಯಗಳನ್ನು ಭಿಕ್ಷೆಯನ್ನಾಗಿ ದಾನ ನೀಡಿ, ಚೆನ್ನಾಗಿ ...ಗರಿಸಿಕೊಂಡು, ಉಪೋಸಥ ವ್ರತವನ್ನು ಕೈಗೊಂಡಳು. ...ಪೋಸಥಕ್ಕೆ ತಕ್ಕುದಾದ ತಿಂಗಳ ನಾಲ್ಕು ದಿನಗಳೆಂದರೆ, ...ಣ್ಣಿಮೆ, ಅಮಾವಾಸ್ಯೆ ಮತ್ತು ಆ ಎರಡು ದಿನಗಳ ...ತರ ಬರುವ ಅಷ್ಟಮಿಗಳು ಅಂದರೆ, ಎಂಟನೆಯ ...ನಗಳು. ಒಟ್ಟು ಈ ನಾಲ್ಕು ದಿನಗಳು ಪವಿತ್ರವಾದ ...ನಗಳೆಂದು ಪರಿಗಣಿಸಲಾಗುವುದು. ನಂತರ ಶಯ್ಯಾಗೃಹಕ್ಕೆ ...ವೇಶಿಸಿ ನಿದ್ರಿಸಿದಳು.

ಆಗ ಅವಳಿಗೆ ಒಂದು ಅನುಪಮವಾದ ಕನಸೊಂದು ...ತ್ತು. ಅದೇನೆಂದರೆ, ನಾಲ್ವರು ದೇವರು (ದೇವರು ಅಲ್ಲ ...ವ ಬಹುವಚನ) ಅವಳನ್ನು ಹಾಸಿಗೆಯ ಸಮೇತ ...ತ್ತಿದರು. ಹಿಮಾಲಯದ ಅನೋತತ್ತ ಸರೋವರಕ್ಕೆ ...ಯ್ದರು. ಆ ಸರೋವರದಲ್ಲಿ ಮನುಷ್ಯ ಕಲೆಗಳು ...ಳಿದುಹೋಗುವಂತೆ ಸ್ನಾನಾದಿಗಳನ್ನು ಮುಗಿಸಿದ ನಂತರ ...ರ್ಗೀಯವಾದ ಉಡುಗೆಯನ್ನು ತೊಡಿಸಿದರು. ...ಗಂಧವನ್ನು ಪೂಸಿದರು. ದೈವೀಪುಷ್ಪಗಳಿಂದ ...ಲಂಕರಿಸಿದರು. ಹತ್ತಿರದಲ್ಲಿಯೇ ಬೆಳ್ಳಿ ಬೆಟ್ಟವಿದ್ದು ...ಲ್ಲೊಂದು ಬಂಗಾರದ ಅರಮನೆ. ಅಲ್ಲಿ ಅವರು ಆಕೆಗಾಗಿ ...ಂದು ದೈವಿಕ ಹಾಸಿಗೆಯನ್ನು ಸಿದ್ಧಪಡಿಸಿ, ಅದರ ತಲೆಯ ...ಗವನ್ನು ಪೂರ್ವಕ್ಕಿಟ್ಟು ಆಕೆಯನ್ನು ಅದರ ಮೇಲೆ ...ಲಗಿಸಿದರು. ನಂತರ ಬೋಧಿಸತ್ವನು ಒಂದು ...ಳಿಯಾನೆಯಾದನು. ಸೊಂಡಿಲಿನಲ್ಲಿ ಒಂದು ಬಿಳಿಯ ...ಮಲವನ್ನು ಹಿಡಿದಿದ್ದನು. ಹಾಗೆಯೇ ಅವನು ಬರುವಾಗ ...ನ್ನದ ಪರ್ವತವನ್ನು ಹತ್ತಿಳಿದು, ಉತ್ತರದಿಕ್ಕಿನಿಂದ ಆ ...ಳ್ಳಿ ಪರ್ವತವನ್ನೇರಿದನು. ನಂತರ ಅವನು ಘೀಳಿಡುತ್ತಾ ...ಂಗಾರದ ಅರಮನೆಯನ್ನು ಪ್ರವೇಶಿಸಿದನು. ಅವನ ...ಯಿಯ ಹಾಸಿಗೆಗೆ ಮೂರು ಬಾರಿ ಪ್ರದಕ್ಷಿಣೆ ಬಂದನು. ...ನಳ ಬಲಭಾಗವನ್ನೊತ್ತಿ ಅವಳ ಗರ್ಭವನ್ನು ಪ್ರವೇಶಿಸಿದನು.

ಮರುದಿನ ರಾಣಿಯಿಂದ ಈ ವಿಷಯವನ್ನು ತಿಳಿದ ...ಜನು ಅರವತ್ತ ನಾಲ್ಕು ಜನ ಪ್ರಮುಖ ಪುರೋಹಿತರನ್ನು ...ಬ್ರಾಹ್ಮಣರನ್ನು) ಅಥವಾ ಜ್ಞಾನಿಗಳನ್ನು ಕರೆಸಿ ಕನಸಿನ ...ಷಯವನ್ನು ಹೇಳಿದಾಗ, ಅವರು ತಮ್ಮ ಲೆಕ್ಕಾಚಾರಗಳಿಂದ ...ನಗೆ ಹುಟ್ಟುವ ಮಗನು ಅರಮನೆಯಲ್ಲಿಯೇ ಇದ್ದರೆ ...ಡ್ಡ ಸಾಮ್ರಾಜ್ಞನಾಗುತ್ತಾನೆ. ಮನೆಯನ್ನು ಬಿಟ್ಟು ...ೂರಟುಹೋದರೆ ಅವನು ಬುದ್ಧನಾಗುತ್ತಾನೆ. ಅಂದರೆ, ...ರಮಜ್ಞಾನಿಯಾಗಿ ಜಗತ್ತಿನ ಅಜ್ಞಾನದ ತೆರೆಗಳನ್ನು ...ಸುತ್ತಾನೆ" ಎಂದು ಹೇಳುತ್ತಾರೆ.

ಬುದ್ಧ ಹುಟ್ಟಿದ

ನಂತರ ತಿಂಗಳುಗಳು ತುಂಬಿದ ಮಾಯಾ ಪ್ರಸವಕ್ಕಾಗಿ ...ಶ್ನ ತವರುಮನೆಗೆ ನಡೆದಳು. ಅತ್ಯಂತ ವೈಭವವಾಗಿ ...ಕೆ ಹಾಗೆ ಹೋಗುತ್ತಿದ್ದಾಗ ತನ್ನ ತವರು ಮತ್ತು ಗಂಡನ ...ನಗಳ ಮಧ್ಯೆ ಸಾಲವೃಕ್ಷಗಳ ಲುಂಬಿನಿ ಎಂಬ ತೋಪಿತ್ತು. ...ಲ್ಲಿ ಅವಳು ವಿರಮಿಸಲು ಇಚ್ಛಪಟ್ಟಳು. ಅದರಂತೆ ...ಲ್ಲಿ ತಂಗಿದಾಗ, ಒಂದು ಮಹಾ ಸಾಲ ವೃಕ್ಷದ ಬುಡಕ್ಕೆ ...ೋದಳು. ಅವಳು ಆ ಮರದ ಗೆಲ್ಲನ್ನು ಹಿಡಿಯಲು ...ಷ್ಟಪಟ್ಟಾಗ ಆ ಗೆಲ್ಲು ಬಾಗುವ ಕೋಲಿನಂತೆ ಆಕೆಯ ...ಮುಳಕೆಯಲ್ಲಿ ಬಂದು ನಿಂತಿತು. ಆಕೆಯು ಗೆಲ್ಲನ್ನು ...ಡಿದಾಗ ಪ್ರಸವವೇದನೆಯಿಂದ ನಡುಗಿದಳು. ಆಕೆಯ ...ರಿವಾರದವರು ಆಕೆಯ ಸುತ್ತ ಪರದೆಯನ್ನು ಕಟ್ಟಿ ದೂರ ...ೆದರು. ಗೆಲ್ಲನ್ನು ಹಿಡಿದು ನಿಂತಲ್ಲೇ ಆಕೆ ಪ್ರಸವಿಸಿದಳು. ...ೋಧಿಸತ್ವನು, ತತ್ವ ಸಿಂಹಾಸನದಿಂದ ಇಳಿದುಬಂದು ...ಪ್ಪೋಧಕನಂತೆ ಮೆಟ್ಟಿಲುಗಳನ್ನು ಇಳಿದು, ತನ್ನೆರಡೂ ...ಗಳನ್ನೂ ಕಾಲುಗಳನ್ನೂ ಚಾಚಿ ಮತ್ತು ಯಾವುದೇ ...ಸ್ವಚ್ಛತೆಯಿಂದಾಗಲಿ ರಕ್ತದಕಲೆಗಳಿಂದಾಗಲಿ ಬಾಧಿಸಲ್ಪಡದೇ ...ಂತವು, ಬನಾರಸ್ ಬಟ್ಟೆಯ ಮೇಲಿಟ್ಟ ಆಭರಣದಂತೆ ...ತ, ತಾಯಿಂದ ಆವಿರ್ಭವಿಸಿದನು. ಅದು ಕ್ರಿ ಪೂ ...23ರ ಸುಮಾರು.


ಐತಿಹ್ಯಗಳ ಪ್ರಕಾರ ಮಗುವು ಹುಟ್ಟುತ್ತಿದ್ದಂತೆ ...ದೆಸಲಾರಂಭಿಸಿತು. ಮೊಟ್ಟ ಮೊದಲಾಗಿ ಏಳು ...ಜ್ಜೆಗಳನ್ನು ಇಟ್ಟಿತು. ಒಂದೊಂದು ಹೆಜ್ಜೆಗೂ ಒಂದೊಂದು ಕಮಲದ ಹೂವು ಅರಳಿತು. ಏಳನೆಯ ಹೆಜ್ಜೆಗೆ ಅವನು ನಿಂತು ಘನವಾದ ಮತ್ತು ದೃಢವಾದ ಸ್ವರದಲ್ಲಿ ಹೇಳಿದ:

"ನಾನು ವಿಶ್ವದ ಅಧಿಪತಿ (ಪ್ರಮುಖ?), ವಿಶ್ವದಲ್ಲಿ ನಾನೇ ಹಿರಿಯ, ಹಾಗೆಯೇ ವಿಶ್ವದಲ್ಲಿ ನಾನು ಮುಂದಿರುವವನು, ಇದು ನನ್ನ ಕೊನೆಯ ಜನ್ಮ ಹಾಗೂ ಈಗಲಷ್ಟೇ ಬಂದಿರುವುದು ಮುಂದೆಂದೂ ಮತ್ತೆ ಬರುವುದಿಲ್ಲ."

ಇಂಥದ್ದೊಂದು ಅದ್ಭುತವಾದ ಮಗುವೊಂದು ಹುಟ್ಟಿ ಇಡೀ ರಾಜ್ಯಕ್ಕೆಲ್ಲಾ ಸಂತೋಷವನ್ನು ಹಂಚಿದ ಶುದ್ಧೋದನ. ಅತ್ಯಂತ ವೈಭವಾದ ಉತ್ಸವಾಚರಣೆಗಳು ಆದವು.

ಪೌರಾಣಿಕ ಬುದ್ಧನ ಆವಿರ್ಭಾವ

ಬುದ್ಧ ಹುಟ್ಟಿದಾಗ ಆಕಾಶದಲ್ಲಿ ಒಂದು ದಿವ್ಯಜ್ಯೋತಿ ಕಾಣಿಸಿತು. ಮೂಕರು ಮಾತಾಡಿದರು, ಗೂನುಳ್ಳವರು ನೆಟ್ಟಗಾದರು, ದೇವರುಗಳು ಅವನಿಗೆ ನೆರವಾಗುವುದಕ್ಕಾಗಿ ಸ್ವರ್ಗದಿಂದ ಬಾಗಿದರು ಮತ್ತು ದೂರದೂರಿನ ರಾಜರುಗಳು ಅವನನ್ನು ಸ್ವಾಗತಿಸಲು ಬಂದರು. ಐತಿಹ್ಯವು ಅವನ ಯೌವನವನ್ನು ಮತ್ತು ಅವನಿದ್ದ ವೈಭವ ಹಾಗೂ ಪ್ರಭೆಯನ್ನು ವರ್ಣಮಯವಾಗಿ ಚಿತ್ರಿಸಿದೆ. ಅವನು ಒಬ್ಬ ಸಂತೋಷದ ರಾಜಕುಮಾರನಾಗಿ 'ದೇವರಂತೆ' ಮೂರು ಅರಮನೆಗಳಲ್ಲಿ ವಾಸ ಮಾಡಿದನು ಮತ್ತು ಮನುಷ್ಯ ಜೀವನದ ಎಲ್ಲಾ ದುಃಖ ಮತ್ತು ಸಂಕಟಗಳ ಸಂಪರ್ಕವು ಅವನಿಗೆದುರಾಗದಂತೆ ಅವನ ತಂದೆಯು ಅವನನ್ನು ರಕ್ಷಿಸಿದನು. ನಲವತ್ತು ಸಾವಿರ





ನರ್ತಕಿಯರು ಅವನನ್ನು ಸಂತೋಷವಾಗಿಟ್ಟರು. ವಯಸ್ಕನಾದಾಗ ಅವನ ಪತ್ನಿಯಾಗಿ ಆಯ್ಕೆಯಾಗುವುದಕ್ಕೆ ಐನೂರು ತರುಣಿಯರನ್ನು ಅವನ ಆಯ್ಕೆಗೆ ಕಳುಹಿಸಲಾಯಿತು. ಕ್ಷತ್ರಿಯ ಕುಲದ ವ್ಯಕ್ತಿಯಾಗಿ ಅವನಿಗೆ ಯುದ್ಧ ಕಲೆಯಲ್ಲಿ ವಿಶೇಷ ತರಬೇತಿಯನ್ನು ನೀಡಲಾಯಿತು.

ವಿಲ್ ಡ್ಯುರಾಂಟ್ ಪ್ರಚಲಿತದಲ್ಲಿರುವ ಸಾಮಾನ್ಯ ಐತಿಹ್ಯಗಳನ್ನು ಆಧರಿಸಿ 'ನಮ್ಮ ಪ್ರಾಚ್ಯ ಪರಂಪರೆ' ಪುಸ್ತಕಗಳ ಸರಣಿಯೊಂದರಲ್ಲಿ ಹೀಗೆ ವಿವರಿಸಿದ್ದಾರೆ. ವಿಲ್ ಡ್ಯುರಾಂಟ್ ಏನೂ ವಿಶ್ಲೇಷಣೆ ಮಾಡದೇ ಬರಿದೇ ದಾಖಲು ಮಾಡುತ್ತಾ ಹೋಗುತ್ತಾರೆ.

ನಂತರ ಸಂಪ್ರದಾಯಗಳಲ್ಲಿ ಹೇಳುವಂತೆ, ಗೌತಮನು ವೃದ್ಧನನ್ನೂ, ಕಾಯಿಲೆ ಬಿದ್ದಿರುವವನನ್ನೂ ಮತ್ತು ಶವವನ್ನೂ



ನೋಡಿ, ಚಿಂತನೆ ಮತ್ತು ತುಮುಲಕ್ಕೆ ಒಳಗಾಗಿ ತನಗೆ ಮಗು ಹುಟ್ಟಿದ ಸಂದರ್ಭದಲ್ಲಿ ರಾಜ್ಯ ಮತ್ತು ಲೌಕಿಕ ವೈಭವವನ್ನು ಬಿಟ್ಟು ಅಲ್ಲಿಂದ ಹೊರಟನು. ಮುಂದಿನ ಪ್ರಯಾಣ ಮತ್ತು ಸತ್ಯಾನ್ವೇಷಣೆ ಅತ್ಯಂತ ಕುತೂಹಲಕರ ಮತ್ತು ಆಧ್ಯಾತ್ಮಿಕ. ಅದು ನಂತರಕ್ಕಿರಲಿ. ಹಾಗೆಯೇ ಬುದ್ಧನ ಕುಟುಂಬದ ಬಗ್ಗೆ, ಹುಟ್ಟಿನ ಐತಿಹ್ಯದ ಬಗ್ಗೆ ಮತ್ತು ರಾಜ್ಯವನ್ನು ತೊರೆದುದರ ಬಗ್ಗೆ ಸ್ವಲ್ಪ ಗಮನ ಹರಿಸಬೇಕಾದ ಅಗತ್ಯವಿದೆ, ಅದನ್ನು ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ನೋಡೋಣ.

ಎಡವಟ್ಟಿನ ಕಾರಣ

ಅತ್ಯಂತ ಸರಳ, ಪ್ರಾಕೃತಿಕ ಮತ್ತು ಸೂಕ್ಷ್ಮ ಪ್ರಜ್ಞಾವಸ್ಥೆಯನ್ನೊಳಗೊಂಡ ವೈಚಾರಿಕ ಸ್ವಭಾವವನ್ನು ಒಳಗೊಂಡ ಬುದ್ಧನನ್ನೂ ಮತ್ತು ಅವನ ಜೀವನವನ್ನೂ ಯಾವುದೇ ವಿಶ್ವದ ಪೌರಾಣಿಕ ಉತ್ಪ್ರೇಕ್ಷೆಯ ಮೆರಗನ್ನು ಹಚ್ಚಿದಂತೆ ವೈಭವೀಕರಣ ಮಾಡುತ್ತಾ ಸೂಕ್ಷ್ಮತೆ, ಸರಳತೆ ಮತ್ತು ಪ್ರಾಜ್ಞತೆಗಳನ್ನು ಹಾಳುಗೆಡವಿದ ಕೀರ್ತಿ ಉತ್ಪ್ರೇಕ್ಷಾಪ್ರಿಯ ಬೌದ್ಧರಿಗೆ ಸೇರುತ್ತದೆ. ಬುದ್ಧನ ಅನುಯಾಯಿಗಳು ಬೌದ್ಧರಾದರೇ ಹೊರತು, ಬುದ್ಧನ ಅಭಿಲಾಷೆಯಂತೆ ಬುದ್ಧರಾಗಲಿಲ್ಲದಿರುವುದೇ ಈ ಎಡವಟ್ಟಿನ ಕಾರಣ.

ಬೌದ್ಧರಾಗುವ ಹಂತದಿಂದ ಬುದ್ಧರೇ ಆಗುವುದು ಬೌದ್ಧ ಪ್ರಕ್ರಿಯೆಯ ಸ್ಥಿತಿ. ಆದರೆ, ಬುದ್ಧನ ಬೋಧನೆಗಳನ್ನು ಅನುಸರಿಸುತ್ತಾ, ಪಂಚಶೀಲವೇ ಆಗಲಿ, ಅಷ್ಟಾಂಗ ಮಾರ್ಗವೇ ಆಗಲಿ, ಯಾವುದೇ ವೈದಿಕ ವಿಧಿವಿಧಾನದಂತೆ ಪಾಲಿಸಿಕೊಂಡು, ವಿಷ್ಣುವಿನ ಜಾಗದಲ್ಲಿ ಬುದ್ಧನ ಮೂರ್ತಿ ಕೂರಿಸಿ ಆರಾಧಿಸಿಕೊಂಡು ಕುಳಿತರೆ ಅಲ್ಲಿಗೆ ಯಾರೊಳಗೇ ಆಗಲಿ, ಇರುವಂತಹ ಬುದ್ಧ ಸತ್ತ!

ಬುದ್ಧನಾಗಬೇಕೇ ಅಥವಾ ಬೌದ್ಧನಾಗಬೇಕೇ?

ಬೌದ್ಧನಾಗುವುದು ಸುಲಭವೇ. ಬುದ್ಧನಾಗಲಿಕ್ಕೆ ಬುದ್ಧನಷ್ಟೇ ಶ್ರಮಪಡುವ ಅಗತ್ಯವಿದೆ. ಆದರೆ, ಆ ಶ್ರಮವನ್ನು ವಿಶ್ರಾಮಗೊಳಿಸಿಕೊಳ್ಳುವಷ್ಟು ಅಗದಿದ್ದರೂ, ದಾರಿ ತಪ್ಪಿದವರಾಗದಿರಲು ಬುದ್ಧನ ಬೋಧನೆಗಳು ನೆರವಾದಾವು.

ಬುದ್ಧನ ಗುರಿ, ತನ್ನ ಸಂಘದಲ್ಲಿರುವವರನ್ನು ಬುದ್ಧರನ್ನಾಗಿ ಮಾಡುವುದೇ ಹೊರತು, ಬೌದ್ಧರನ್ನಾಗಿ ಮಾಡಿ, ತನ್ನದೊಂದು ಧರ್ಮಸ್ಥಾಪನೆ ಮಾಡಿ, ತಾನಲ್ಲಿ ಆರಾಧನಾಮೂರ್ತಿಯಾಗಿ ಪ್ರತಿಷ್ಠಾಪಿತನಾಗುವುದೇನೂ ಬೇಕಾಗಿರಲಿಲ್ಲ, ಬೌದ್ಧನಾಗುವುದು ಬುದ್ಧನಾಗುವುದಕ್ಕೆಯೇ ಹೊರತು, ಬೌದ್ಧನಾಗಿದ್ದು ಬುದ್ಧನ ಪೂಜಾರಿಯಾಗಿರುವುದಕ್ಕೇನಲ್ಲ, ಬೌದ್ಧನಾಗುವುದು ಮಾರ್ಗ ಹಾಗೂ ಬುದ್ಧನಾಗುವುದು ಗುರಿ.

ಜ್ಞಾನೋದಯವಾದ ಮೇಲೆ ಹಾಗೆ ಬಯಸುವಂತಹ ಲೌಕಿಕ ಚೈತನ್ಯವೇ ಆಗಿದ್ದಲ್ಲಿ ಗೋತಮನೆಂಬಾತನು ತನ್ನನ್ನು ತಾನು ಅಷ್ಟು ದಂಡಿಸಿಕೊಂಡು ತನ್ನ ಸಮಯ ಮತ್ತು ಕಸುವನ್ನು ವ್ಯರ್ಥ ಮಾಡಿಕೊಳ್ಳುವಷ್ಟೇನಿರಲಿಲ್ಲ, ಅವೇನೂ ಮಾಡದೆಯೇ ತನಗಿರುವ ಅಧಿಕಾರ ಮತ್ತು ವರ್ಚಸ್ಸಿನಿಂದ ಒಂದು ಸೀಮಿತ ವಲಯದ್ದಲ್ಲಾದರೂ ತನ್ನ ಅಹಂಕಾರದ ಆಸೆಯನ್ನು ಪೂರ್ಣಗೊಳಿಸಿಕೊಳ್ಳಬಹುದಿತ್ತು, ಆತನ ಅಪಾರ ಕರುಣೆ, ನಿರ್ಮೋಹ ಮತ್ತು ಸೂಕ್ಷ್ಮಾತಿಸೂಕ್ಷ್ಮ ಪ್ರಜ್ಞಾವಂತಿಕೆಯ ಸಂವೇದನೆಯಿಂದ ತಾನು ಏನನ್ನು ಹೇಳಲು ಹೊರಟಿದ್ದನೋ ಅದನ್ನು ಹಾಳುಗೆಡವಲು ಉತ್ಪ್ರೇಕ್ಷೆ ಮತ್ತು ವೈಭವದ ಮೆರಗುಗಳನ್ನು ಧಾರಾಳವಾಗಿ ಹಚ್ಚಲಾಯಿತು. ತಮ್ಮ ಪ್ರೀತಿಪಾತ್ರರನ್ನು, ಅಭಿಮಾನದ ವ್ಯಕ್ತಿ ಅಥವಾ ಶಕ್ತಿಗಳನ್ನು ಇತರರಿಗೆ ಒಪ್ಪಿಸಲೇಬೇಕೆಂಬ ಧಾವಂತದ ಎಡವಟ್ಟುಗಳ ಪ್ರತಿಫಲವೇ ಈ ಪೌರಾಣಿಕ ಬುದ್ಧನ ಆವಿರ್ಭಾವ ಮತ್ತು ಬೌದ್ಧ ಪೌರೋಹಿತ್ಯಾಚರಣೆ.

ಅಂಬೇಡ್ಕರ್‌ರವರ ಬುದ್ಧ

ನಿಜ ಹೇಳಬೇಕೆಂದರೆ, ಬುದ್ಧನು ಹಾಗಲ್ಲದಿರುವುದರ ಕಾರಣವೇ ಬಾಬಾ ಸಾಹೇಬ್ ಅಂಬೇಡ್ಕರ್ ಬುದ್ಧನಿಗೆ ಮಾರುಹೋಗಿದ್ದು. ತಮ್ಮ 'ಬುದ್ಧ ಆ್ಯಂಡ್ ಫ್ಯೂಚರ್ ಆಫ್ ಹಿಸ್ ರಿಲಿಜಿಯನ್' ಲೇಖನದಲ್ಲಿ ಹೇಳುತ್ತಾರೆ, "ಯೇಸು ತಾನು ದೇವರ ಮಗನೆಂದು ಸಾರುತ್ತಾನೆ, ಯಾರು ಅವನನ್ನು ಒಬ್ಬ ಕ್ರೈಸ್ತನಾಗಿ ದೇವರ ಮಗನೆಂದು ಒಪ್ಪದೇ ಹೋದರೆ ಅವನಿಗೆ ಸ್ವರ್ಗ ಸಾಮ್ರಾಜ್ಯವಿಲ್ಲ, ಹಾಗೆಯೇ ಮಹಮದ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಾನೆ. ತಾನೇ ಕೊನೆಯ ಪ್ರವಾದಿ ಎನ್ನುತ್ತಾ ಇನ್ನಾರಿಗೂ ದೇವರ ಸಂದೇಶವಾಹಕರಾಗುವ ಅವಕಾಶವನ್ನೇ ಕೊಡುವುದಿಲ್ಲ, ಇನ್ನು ಕೃಷ್ಣ ಇನ್ನೂ ಮುಂದುವರೆದು ಹೇಳುತ್ತಾ ತಾನು ದೇವರ ಮಗನಾಗಿಯೋ, ದೇವರ ಸಂದೇಶವಾಹಕನಾಗಿಯೋ ಗುರುತಿಸಿಕೊಳ್ಳದೇ, ತಾನೇ ದೇವಾಧಿದೇವ, ಪರಮೇಶ್ವರನೆಂದು ಕರೆದುಕೊಂಡು ದೇವರುಗಳ ದೇವರು ಎಂದು ಘೋಷಿಸಿಕೊಂಡುಬಿಡುತ್ತಾನೆ.

ಆದರೆ ಬುದ್ಧನಲ್ಲಿ ಇದ್ಯಾವ ಪ್ರತಿಗಾಮಿತನವೂ ಇಲ್ಲದೇ, ತನ್ನ ಶಿಷ್ಯ ಆನಂದನ ಮೂಲಕ ಮಹಾಪರಿನಿಬ್ಬಾನ ಸುತ್ತದಲ್ಲಿ ಸ್ಪಷ್ಟೀಕರಿಸುತ್ತಾನೆ, ತನ್ನ ಧಮ್ಮವು ವೈಚಾರಿಕತೆ ಮತ್ತು ಅನುಭವದ ಆಧಾರಿತವಾಗಿರುವಂತಹದ್ದು. ಅವನ ಅನುಯಾಯಿಗಳು ಬುದ್ಧನು ಇಂಥದ್ದೊಂದು ಹೇಳಿದನೆಂದು ಅನುಸರಿಬೇಕೆಂದೇನಿಲ್ಲ. ಅವನ ಬೋಧನೆಗಳನ್ನು ಯಾವಾಗಲಾದರೂ ಅಪ್ರಸ್ತುತವೆಂದು ತೋರಿದ ಪಕ್ಷದಲ್ಲಿ ಅದನ್ನು ತಿರಸ್ಕರಿಸಬಹುದು. ಬುದ್ಧನಿಗೆ ಅವನ ಧಮ್ಮವು ಭೂತಕಾಲದ ಒಂದು ಸತ್ತ ಮರದ ಕೊರಡಾಗಕೂಡದೆಂದು ಬಯಸಿದ್ದ ಅವನ ಅನುಯಾಯಿಗಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ಸರಿಪಡಿಸುವ ಅವಕಾಶವನ್ನೂ ಸಹಜವಾಗಿ ನೀಡಿದ್ದ. ಆದರೆ ನೆನಪಿಡಿ, ಇದು ಅಧಿಕಾರಯುತವಾಗಿ 'ನೀವು ಹೀಗೆ ಮಾಡಿ' ಎಂದಲ್ಲ!

ಯಾವುದೇ ಧಾರ್ಮಿಕ ನಾಯಕರು ಇಂತಹದ್ದೊಂದು ಸ್ವಾತಂತ್ರ್ಯವನ್ನು ಉಲ್ಲೇಖಿಸಿರಲಿಲ್ಲ. ಬುದ್ಧನಿಗೆ ಅಂತಹದ್ದೊಂದು ಭಯವೂ ಇರಲಿಲ್ಲ, ತನ್ನ ಸೈದ್ಧಾಂತಿಕ ಬುನಾದಿಯ ಮೇಲೆ ಆತನಿಗೆ ನಂಬುಗೆಯಿತ್ತು, ಅವನಿಗೆ ಚೆನ್ನಾಗಿ ಗೊತ್ತಿತ್ತು, ಯಾವುದೇ ಅತ್ಯಂತ ಕ್ರೂರ ಆಕ್ರಮಣವು ಆತನ ಧಾರ್ಮಿಕ ಸತ್ವವನ್ನು ನಿಸ್ಸಾರಗೊಳಿಸದು ಎಂದು ಅರಿವಿತ್ತು.

ಹೌದು, ಕ್ರೈಸ್ತರಾಗಬೇಕಿರುವುದು ಓರ್ವ ಕ್ರಿಸ್ತನಾಗಲು, ಬೌದ್ಧನಾಗಬೇಕಿರುವುದು ಓರ್ವ ಬುದ್ಧನಾಗಲು, ಮಹಮದ್ದೀಯನಾಗುವುದು ಓರ್ವ ಮಹಮದನೇ ಆಗಲು. ಯಾವುದೇ ಧರ್ಮವು ಮಾರ್ಗವೇ ಹೊರತು ಗುರಿಯಲ್ಲ, ಅದು ಧರ್ಮನಿಷ್ಠೆಗೆ ಮಾರಕವೆಂದು ಯಾರೇ ಭಾವಿಸಿದರೂ ಅವರು ಮಾರ್ಗ ನಿಷ್ಠರೇ ಹೊರತು, ಗುರಿಕಾರರಲ್ಲ!"

ಆದರೆ ಬುದ್ಧನು ಪೌರಾಣಿಕ ಮೂರ್ತಿಯಾಗಿ ಏಕೆ ನಿಂತ? ಬೌದ್ಧರು ಪುರೋಹಿತರಂತೆಯೇ ಏಕೆ ವರ್ತಿಸ ತೊಡಗಿದರು? ಪೌರಾಣಿಕ ಬುದ್ಧನ ರೂಪಕವೇನಿರಬಹುದು? ಬುದ್ಧನ ಹುಟ್ಟಿನ ರಹಸ್ಯವನ್ನೂ ಮತ್ತು ಅವನು ರಾಜ್ಯವನ್ನು ಬಿಟ್ಟ ಸಂದರ್ಭವನ್ನೂ ಸಮಚಿತ್ತದಿಂದ ನೋಡುವ ಅಗತ್ಯ ಬುದ್ಧನ ಗೌರವಿಸುವ ಪ್ರತಿಯ ಭಾಗವಾಗಿದೆ. ಅದನ್ನು ಮುಂದೆ ನೋಡೋಣ.

ಬ್ಯಾಂಕ್ ದರೋಡೆಕೋರರು ಮತ್ತು ರಾಜಕಾರಣಿಗಳ

ಹೊಗಳಿಕೆ ತೆಗಳಿಕೆ

ಓದಿದವರೆಲ್ಲ ಬೆಚ್ಚಿಬೀಳುವಂತಹ ಭಾರೀ ಬ್ಯಾಂಕ್ ದರೋಡೆಗಳ ಬಗ್ಗೆ ದೊಡ್ಡಿಪಾಳ್ಯ ನರಸಿಂಹಮೂರ್ತಿಯವರ ಲೇಖನ ಸಕಾಲಿಕವಾಗಿದೆ. ಯುಪಿಎ ಸರಕಾರವಿದ್ದಾಗಲೇ ಬ್ಯಾಂಕ್ ದರೋಡೆ ನಡೆದಿತ್ತು, ಆದರೆ ಮೋದಿ ಪ್ರಧಾನಿಯಾದ ಮೇಲೆ ಅದು ನಿರ್ಲಜ್ಜವಾಗಿ ನಡೆಯುತ್ತಿದೆ. ಬ್ಯಾಂಕ್ ದರೋಡೆ ಮಾಡಿದ ಉದ್ಯಮಿಗಳಲ್ಲಿ ಗುಜರಾತಿ, ಮಾರ್ವಾಡಿ ಹಾಗೂ ಪಂಜಾಬಿಗಳೇ ಅತಿಹೆಚ್ಚು, ದೇಶದೆಲ್ಲೆಡೆ ಮೀಟರ್ ಬಡ್ಡಿಯಲ್ಲಿ ಲೇವಾದೇವಿ ಮಾಡಿ



ಬಡವರ ರಕ್ತ ಹೀರುವವರಲ್ಲೂ ಈ ಉತ್ತರ ಭಾರತೀಯ ಜೈನ ಬನಿಯಾಗಳೇ ಹೆಚ್ಚು ಹಾಗೂ ಬ್ಯಾಂಕುಗಳನ್ನು ಭಾರೀ ಸುಸ್ತಿ ಸಾಲಗಳ ಮೂಲಕ ದರೋಡೆ ಮಾಡುವ ಉದ್ಯಮಿಗಳಲ್ಲೂ ಇವರೇ ಮಂಚೂಣಿಯಲ್ಲಿದ್ದಾರೆ.

ತ್ಯಾಗ ಅಹಿಂಸೆ ಕರ್ಮಫಲ ಇವೆಲ್ಲಾ ಧರ್ಮಗ್ರಂಥಗಳ ಬದನೆಕಾಯಿ ಅಷ್ಟೇ. ನಿಜಜೀವನದಲ್ಲಿ ಅವರೆಲ್ಲ ಅತ್ಯಂತ ಲೋಭಿ ಹಾಗೂ ಸ್ವಾರ್ಥಿಗಳಿವರು. ಗೌತಮ್ ಅದನಿ, ವಿನ್ಸಮ್ ಡೈಮಂಡಿನ ಜತಿನ್ ಮೆಹ್ತಾ ಹಾಗೂ 1990ರ ದಶಕದಲ್ಲಿ ಮುಂಬೈ ಸ್ಟಾಕ್ ಎಕ್ಸ್ಚೇಂಜಿನಲ್ಲಿ ಫ್ರಾಡ್ ಮಾಡಿ ಇಡೀ ದೇಶದ ಷೇರು ಮಾರ್ಕೆಟ್ ವಲಯವನ್ನು ಅಲ್ಲೋಲಕಲ್ಲೋಲ ಮಾಡಿ ಲಕ್ಷಾಂತರ ಸಣ್ಣ ಹೂಡಿಕೆದಾರರನ್ನು ಬೀದಿಗೆ ಬೀಳಿಸಿದ ಹರ್ಷದ್ ಮೆಹ್ತಾ ಮತ್ತು ಕೇತನ್ ಪಾರೀಕ್, ಜತೆಗೆ ಇತ್ತೀಚೆಗೆ ಎನ್‌ಎಸ್‌ಈಎಲ್ ಮುಳುಗುವಂತೆ ಮಾಡಿದ ಜಿಗ್ನೇಶ್ ಶಹಾ ಇವರೆಲ್ಲರೂ ಒಂದೇ ಗುಂಪಿನ ಗುಜರಾತಿಗಳು. ಮೋದಿಯವರ ಬಲಗೈ ಬಂಟ ಅಮಿತ್ ಶಹಾ ಸಹ ಇದೇ ಗುಂಪಿನವ.


ಈ ಉದ್ಯಮಿಗಳ ಸುಸ್ತಿ ಸಾಲಗಳಿಂದ ಬಸವಳಿದಿರುವ ಮುಂಬೈ ಮೂಲದ ಸೆಂಟ್ರಲ್ ಬ್ಯಾಂಕಿನಂತಹ ಆರ್ಥಿಕವಾಗಿ ದುರ್ಬಲವಾದ ರಾಷ್ಟ್ರೀಕೃತ ಬ್ಯಾಂಕು ತಮ್ಮ ನಿವೃತ್ತಿಯಾಗುವ ನೌಕರರಿಗೆ ಕೊಡಲು ಹಣವಿಲ್ಲದೇ ಪಿಎಫ್-ಗ್ರಾಚುಯಿಟಿಗಳ ಬಿಡುಗಡೆಯನ್ನು ಐದಾರು ತಿಂಗಳು ತಡ ಮಾಡಿ ಪ್ರತಿಯೊಂದು ನಿವೃತ್ತ ನೌಕರರಿಗೆ 40-50 ಸಾವಿರ ರೂಪಾಯಿ ನಷ್ಟ ಆಗುವಂತೆ ಮಾಡುತ್ತಿದೆ. ಖೋಟಾ ಡಿಡಿ ಮೂಲಕ ಯಾರೋ ಉತ್ತರ ಭಾರತೀಯರು ಫ್ರಾಡ್ ಮಾಡಿದರೆ ಅದನ್ನು ಇನ್ಯಾವುದೋ ನಿರಪರಾಧಿ ಕೆಳ ಹಂತದ ಬ್ಯಾಂಕ್ ಅಧಿಕಾರಿಗಳಿಂದ ವಸೂಲು ಮಾಡಿ ಈ ಮೇಲಧಿಕಾರಿಗಳು ತಾವು ಬಹಳ ಪ್ರಾಮಾಣಿಕರಂತೆ ಪೋಸ್ ಕೊಡುತ್ತಾರೆ. ಆದರೆ ಇದೇ ಮೇಲಧಿಕಾರಿಗಳೆಲ್ಲ ಸುಸ್ತೀ ಸಾಲದ ಮೂಲಕ ಬ್ಯಾಂಕ್ ದರೋಡೆಯಲ್ಲಿ ಪಾಲ್ಗೊಂಡವರೇ ಆಗಿದ್ದಾರೆ.

ಬ್ಯಾಂಕ್ ಅಧ್ಯಕ್ಷ, ಸಿಇಓ ಮತ್ತು ಜನರಲ್ ಮ್ಯಾನೇಜರ್ ಆಗಬೇಕಾದರೆ ಸಂಬಂಧಪಟ್ಟ ರಾಜಕಾರಣಿಗೆ ಮತ್ತು ಸೆಕ್ರೆಟರಿಗೆ ಲಕ್ಷಾಂತರ ರೂಪಾಯಿ ಲಂಚ ಕೊಟ್ಟರೇನೇ ಈ ಉನ್ನತ ಹುದ್ದೆ ಸಿಗುವುದು. ಹೀಗೆ ಲಂಚ ಕೊಟ್ಟು ಪಡೆದ ಉನ್ನತ ಹುದ್ದೆಯಲ್ಲಿ ಕುಳಿತು ಅವರು ತಾವು ಕೊಟ್ಟ ಲಂಚದ ಹಣಕ್ಕಿಂತ ಹತ್ತು ಪಟ್ಟು ಹೆಚ್ಚು ಮರಳಿ ಗಳಿಸಲು ಪ್ರಯತ್ನಿಸುವುದು ಸ್ವಾಭಾವಿಕ. ಅದಕ್ಕಾಗಿ ಕಿಂಗ್‌ಫಿಶರ್, ವಿನ್‌ಸಮ್ ಡೈಮಂಡ್, ಭೂಷಣ್ ಸ್ಟೀಲ್ ಇಂತಹವರಿಗೆ ಸಾಲ ಕೊಟ್ಟು ಬ್ಯಾಂಕನ್ನು ಮುಳುಗಿಸುವುದು ಇವರಿಗೆ ಅನಿವಾರ್ಯ. ಕೇವಲ ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಎಸ್.ಕೆ.ಜೈನ್ ದುರದೃಷ್ಟದಿಂದ ಸಿಕ್ಕಿ ಬಿದ್ದಿದ್ದು ಆದರೆ ಉಳಿದ ಬ್ಯಾಂಕ್ ಮೇಲಧಿಕಾರಿಗಳೂ ಇಷ್ಟೇ ಭ್ರಷ್ಟರಿದ್ದರೂ ಸಿಕ್ಕಿಬೀಳದಂತೆ ನೋಡಿಕೊಳ್ಳಲು ಪ್ರಬಲ ರಾಜಕಾರಣಿಗಳಿದ್ದಾರೆ. ಹಾಗಾಗಿ ಸಾವಿರಾರು ಬಡ ರೈತರು ಬ್ಯಾಂಕ್ ಕೃಷಿಸಾಲ ಮರಳಿಸಲಾಗದೇ ಆತ್ಮಹತ್ಯೆ ಮಾಡಿಕೊಂಡರೆ ಬ್ಯಾಂಕುಗಳ ಈ ಭ್ರಷ್ಟ ಮೇಲಧಿಕಾರಿಗಳಿಗೆ ಹಾಗೂ ಅವರ ರಾಜಕೀಯ ಗಾಡ್‌ಫಾದರ್‌ಗಳ ಮನಸ್ಸಿಗೆ ಸ್ವಲ್ಪವೂ ನೋವಾಗುವುದಿಲ್ಲ.

- ಜಿ.ರವಿಕಿರಣ ರೈ, ಮೈಸೂರು

ಮೋದಿ-ಶಾ ತಂಡದ ವಂಚನೆ

ಮೋದಿ ಪ್ರಧಾನಮಂತ್ರಿಯಾಗಿ ಆಡಳಿತ ನಡೆಸಿದ ಒಂದು ವರ್ಷದ ಕೊನೆಯಲ್ಲಿ ಅವರ ಪಾರ್ಟಿಯಲ್ಲಿಯೇ



ಬಹಳಷ್ಟು ಅಸಮಾಧಾನ ಇರುವುದು ಎಲ್ಲರಿಗೂ ಗೊತ್ತಾಗಿದೆ. ಸಂಘ ಪರಿವಾರವಂತೂ ತನ್ನ ಮುನಿಸು ಬಹಿರಂಗವಾಗಿ ತೋರಿಸುತ್ತಿದೆ. ವೈಯಕ್ತಿಕವಾಗಿ ಮೋದಿ ಹಾಗೂ ಬಿಜೆಪಿ ಅಧ್ಯಕ್ಷ ಅಮಿತ್ ಶಾ ಇವರಿಬ್ಬರ ಕಾರ್ಯವೈಖರಿ ಬಗ್ಗೆ ಹೆಚ್ಚು ಟೀಕೆ ವ್ಯಕ್ತವಾಗುತ್ತಿವೆ. ಅದರಲ್ಲೂ ಅಮಿತ್ ಶಾ ಮೂಲಕ ಅವರದೇ ಜಾತಿಯ ಗುಜರಾತಿ, ಪಾಲನ್‌ಪುರಿ ಹಾಗೂ ಮಾರ್ವಾಡಿ ಜೈನರಿಗೆ ಸಿಗುತ್ತಿರುವ ಸರ್ಕಾರದ ರಾಜಾತಿಥ್ಯ ಹಾಗೂ ವಿಶೇಷ ಸವಲತ್ತುಗಳು ಅವರದೇ ಪಕ್ಷದ ಇತರ ಜಾತಿಗಳವರನ್ನು ಕೆರಳಿಸಿದೆ.

ಈಗ ಅಮಿತ್ ಶಾ ಇವರ ಪಾಳೇಗಾರಿಕೆಯಲ್ಲಿ ಜೈನ್ ಉದ್ಯಮಿಗಳು ರಾಷ್ಟ್ರೀಕೃತ ಬ್ಯಾಂಕುಗಳನ್ನು ಯಾವ ರೀತಿ ಸುಲಿಗೆ ಮಾಡುತ್ತಿದ್ದಾರೆ ಎಂದರೆ ಮುಂಬೈ ಮೂಲದ ಒಂದು ರಾಷ್ಟ್ರೀಕೃತ ಬ್ಯಾಂಕ್ ದಿವಾಳಿ ಅಂಚು ತಲುಪಿದೆ ಎಂದು ಬ್ಯಾಂಕಿನೊಳಗಿನ ನೌಕರ ಸಂಘದವರೇ ಆರೋಪಿಸುತ್ತಿದ್ದಾರೆ. 1969 ರಲ್ಲಿ ಬ್ಯಾಂಕುಗಳು ರಾಷ್ಟ್ರೀಕರಣ ವಾದಾಗ ಒಟ್ಟು ವ್ಯವಹಾರದ ಲೆಕ್ಕದಲ್ಲಿ ಒಂದನೇ ಸ್ಥಾನದಲ್ಲಿದ್ದ ಪಾರ್ಸಿಗಳಿಂದ ಪ್ರವರ್ತಿತ ಈ ಬ್ಯಾಂಕು ನಂತರದ ದಿನಗಳಲ್ಲಿ ಉನ್ನತಾಧಿಕಾರಿಗಳ ಭ್ರಷ್ಟಾಚಾರದಿಂದಾಗಿ ನಷ್ಟ ಅನುಭವಿಸುತ್ತಾ ಸಾಗಿ ಕ್ರಮೇಣ ಏಳನೇ ಸ್ಥಾನಕ್ಕೆ ಜಾರಿದೆ.

ಇತ್ತೀಚೆಗೆ ಈ ಬ್ಯಾಂಕಿನ ಮುಂಬೈ ಹೆಡ್‌ಆಫೀಸಿನಲ್ಲಿರುವ ಕಾರ್ಯನಿರ್ವಾಹಕ ನಿರ್ದೇಶಕ (ಇ.ಡಿ.) ಕಚೇರಿ ಮತ್ತೂ ದಕ್ಷಿಣ ಕನ್ನಡ ಮೂಲದ ಜನರಲ್ ಮ್ಯಾನೇಜರ್‌ರ ಮುಂಬೈ ವಲಯ ಕಚೇರಿಯ ಮೇಲೆ ಹಾಗೂ ಅವರಿಬ್ಬರ ಮನೆಗಳ ಮೇಲೆ ಸಿಬಿಐ ದಾಳಿ ನಡೆದು ಅವರಿಬ್ಬರು ನಡೆಸಿದ ಬ್ರಹ್ಮಾಂಡ ಭ್ರಷ್ಟಾಚಾರ ಹಾಗೂ ಕಪಟಿ ಗುಜರಾತಿ ಉದ್ಯಮಿಗಳಿಗೆ ಅರ್ಹತೆಯಿಲ್ಲದೇ ಕೊಟ್ಟು ಮುಳುಗಿದ ಕೋಟ್ಯಂತರ ಸಾಲದ ದಾಖಲೆಗಳು ಹಾಗು ಅಕ್ರಮ ಆಸ್ತಿಪಾಸ್ತಿಗಳ ದಾಖಲೆ ಸಿಬಿಐಗೆ ಸಿಕ್ಕಿದರೂ ಅಮಿತ್ ಶಾನ ಕೈಚಳಕದಿಂದ ಎಲ್ಲವನ್ನೂ ಮುಚ್ಚಿ ಹಾಕಿ ಆ ಬ್ಯಾಂಕಿನ ಇ.ಡಿ. ಹಾಗೂ ಭ್ರಷ್ಟ ಕನ್ನಡಿಗ ಜನರಲ್ ಮ್ಯಾನೇಜರ್‌ರನ್ನು ಬಚಾವು ಮಾಡಿ ಅದೇ ಸ್ಥಾನಗಳಲ್ಲಿ ಮುಂದುವರೆಸಲಾಯಿತು.

ಈ ಬ್ಯಾಂಕಿನ ನೌಕರ ಸಂಘಟನೆಗಳಿಗೆ ಇವೆಲ್ಲಾ ಗೊತ್ತಿದ್ದರೂ ಅವರು ಈ ಭ್ರಷ್ಟ ವ್ಯವಸ್ಥೆಯಲ್ಲಿ ನಿಸ್ಸಹಾಯಕರು. ಗುಜರಾತಿ-ಮಾರ್ವಾಡಿ ಜೈನ್ ಉದ್ಯಮಿಗಳು ಇದ್ದಲ್ಲಿ ಸುಸ್ತಿ ಸಾಲ ಹಾಗೂ ಸಿ.ಡಿ.ಆರ್ ಮೂಲಕ ಬ್ಯಾಂಕುಗ[...] ಸುಲಿಗೆ ಇರಲೇಬೇಕು ಎನ್ನುವುದು ಭಾರತದೆಲ್ಲೆಡೆಯ ಬ್ಯಾ[...] ನೌಕರರ ಸಾಮಾನ್ಯ ಅಭಿಪ್ರಾಯ. ಅಮಿತ್ ಶಾನ ಇನ್[...] ಇರುವ ನಾಲ್ಕು ವರ್ಷದಲ್ಲಿ ದೊಡ್ಡ ಉದ್ಯಮಿಗಳಿಗೆ ಕ[...] ಸಾಲುಗಳು ಸಾಲಮನ್ನಾ, ಬಡ್ಡಿಮನ್ನಾ ಮತ್ತೂ ಕಾರ್ಪೋರೇ[...] ಸಾಲ ಪುನರ್‌ರಚನೆ (ಸಿಡಿಆರ್) ಇವೆಲ್ಲವುಗಳ ಮುಖಾಂ[...] ಎಷ್ಟೆಲ್ಲಾ ಬ್ಯಾಂಕ್ ದರೋಡೆ ನಡೆಯಲಿದೆಯೇ ಕಾ[...] ನೋಡಬೇಕು!

- ರಾಜ್‌ಮೋಹನ್ ಜಿ. ರಾಯ್ಕರ್, ಬೆಳಗಾ[...]

ಕಾಂಗ್ರೆಸ್ ಮತ್ತು ಬಿಜೆಪಿಯ ಅವಕಾಶವಾದಿತನ

ರಾಜ್ಯ ಸರ್ಕಾರವು ಮೈಸೂರು ಮತ್ತು ಶಿವಮೊಗ್ಗ[...] ನಡೆದ ಕೋಮುಗಲಭೆ ಪ್ರಕರಣಗಳಲ್ಲಿ ಕೇ[...] ಜಡಿಸಿಕೊಂಡಿದ್ದ ಅಮಾಯಕರನ್ನು ಸಚಿವ ಸಂಪುಟ[...] ನಿರ್ಧಾರದ ಮೂಲಕ ಕೇಸನ್ನು ಹಿಂಪಡೆದಿದ್ದು ಇದಿ[...] ಚರ್ಚೆ ಗ್ರಾಸವಾಗಿರುವ ವಿಷಯ ಎನ್ನುವುದು ಎಲ್ಲರಿಗ[...] ತಿಳಿದ ವಿಚಾರ.

ಆದರೆ ಇಲ್ಲಿ ಕೇವಲ ಮುಸ್ಲಿಮರ ಕೇಸುಗ[...] ಮಾತ್ರವಲ್ಲದೇ ಹಿಂದೂಗಳು ಹಾಗೂ ರೈತ ಸಂಘಟನೆ[...] ಮೇಲಿದ್ದ ಕೇಸುಗಳನ್ನೂ ಹಿಂಪಡೆಯಲಾಗಿದೆ. ಆದರೆ ಇ[...] ವಿಚಾರವನ್ನು ಮುಂದಿಟ್ಟುಕೊಂಡು ಇದೀಗ ಕಾಂಗ್[...] ಸರ್ಕಾರ ಹಾಗೂ ಬಿಜೆಪಿ ಪಕ್ಷವು ಒಡೆದು ಆಳ[...] ನೀತಿಯನ್ನು ಅನುಸರಿಸುತ್ತಿರುವುದು ಖಂಡನೀಯ. ಒಂ[...] ಕಡೆಯಲ್ಲಿ ಕಾಂಗ್ರೆಸ್ ಅಮಾಯಕ ಮುಸ್ಲಿಮರ ಮೇ[...] ಕೇಸುಗಳನ್ನು ಹಿಂಪಡೆದಿದ್ದೇವೆ ಎಂದು ಘಂಟಾಘೋಷವಾ[...] ಸಾರುವುದರ ಹಿಂದೆ ಮುಸ್ಲಿಮರ ಮತಗಳನ್ನು ಸೆಳೆಯು[...] ಪ್ರಯತ್ನ ಮಾಡುತ್ತಿದೆ. ಆದರೆ ಬಿಜೆಪಿ ಪಕ್ಷವೂ ಕೇ[...] ಕೆ.ಎಫ್.ಡಿ. ಹಾಗೂ ಪಿ.ಎಫ್.ಐ. ಕಾರ್ಯಕರ್ತರ ಮೇ[...] ಇದ್ದ ಕೇಸನ್ನು ಮಾತ್ರ ರಾಜ್ಯ ಸಚಿವ ಸಂಪುಟ ಹಿಂಪಡೆ[...] ಎಂದು ಹೇಳುವ ಮೂಲಕ ಹಿಂದೂಗಳಲ್ಲಿ ದ್ವೇ[...] ಬೀಜ ಬಿತ್ತುವ ಕೆಲಸವನ್ನು ಮಾಡುತ್ತಿದೆ.

ಈ ಎರಡೂ ಪಕ್ಷಗಳು ತಿಳಿಯಬೇಕಾ[...] ವಿಚಾರವೇನೆಂದರೆ, ನಾಡಿನಲ್ಲಿ ಅಮಾಯಕರು ಯಾ[...] ಧರ್ಮದಲ್ಲಿದ್ದರೂ ಶಿಕ್ಷೆಗೊಳಗಾಗಬಾರದು; ಇದು [...] ದೇಶದ ಕಾನೂನು ಕೂಡಾ ಪ್ರತಿಪಾದಿಸುವ ವಿಚಾ[...] ಆದರೆ ತಾವುಗಳು ಮಾತ್ರ ತಮಗೆ ಬೇಕಾದವರಿಗೆ ಇಲ್ಲ[...] ಧರ್ಮದ ಆಧಾರದಲ್ಲಿ ಈ ವಿಚಾರವನ್ನು ಎಳೆ[...] ರಾಜಕೀಯ ಲಾಭ ಮಾಡಲು ಪ್ರಯತ್ನಿಸಿ[...] ಖಂಡಿತವಾಗಿಯೂ ಈ ವಿಚಾರಧಾರೆಯನ್[...] ಜನಸಾಮಾನ್ಯರು ತಿರಸ್ಕರಿಸುವುದರಲ್ಲಿ ಆಶ್ಚರ್ಯವಿಲ್ಲ.


- ಇರ್ಷಾದ್ ಮಹಮದ್, ಕಿನ್ನಿಗೋ[...]

ಒಂದು ಪತ್ರ

ಮನಮುಟ್ಟುವ ಪತ್ರ

"ಗಾಂಧೀಜಿಯವರು ಒಂದು ಕಪಾಳಕ್ಕೆ ಹೊಡೆದಿದ್ದರೆ ಮತ್ತೊಂದು ತೋರಿಸುತ್ತಿದ್ದ[...] ಹೊಟ್ಟೆಗೆ ಹೊಡೆದಿದ್ದನ್ನು ಹೇಗೆ ಸಹಿಸುವುದು? ಇಡೀ ಪೀಳಿಗೆಯೇ ತತ್ತರಿಸಿಹೋಗಿದೆ[...] ವಿಕಾಸ್ ಆರ್ ಮೌರ್ಯ ಅವರ ಈ ವಾಕ್ಯಗಳನ್ನು ಓದುವಾಗ (ಪತ್ರಿಕೆಯ ಜೂನ್ 17[...] ಸಂಚಿಕೆಯಲ್ಲಿನ ಲೇಖನ) ಮನಸ್ಸು ಮುಲುಗುಟ್ಟಿತು. ದಲಿತರಿಗೆ ಪ್ರತ್ಯೇಕ ಮತಕ್ಷೇತ್ರ ನೀಡುವಂತೆ ಅಂಬೇಡ್ಕರ[...] ಬ್ರಿಟಿಷ್ ಸರ್ಕಾರದ ಎದುರು ಆಧಾರಸಹಿತ ಪಟ್ಟುಹಿಡಿದು ವಾದಿಸಿ ಗೆದ್ದುಕೊಂಡಿದ್ದ ಹಕ್ಕನ್ನು ದಕ್ಕಗೊಡ[...] (ದುಂಡುಮೇಜಿನ ಪರಿಷತ್ತಿನ ಸಭೆಯ ತೀರ್ಮಾನಕ್ಕೆ ತಾನು ಬದ್ಧವಿರುವುದಾಗಿ ಗಾಂಧಿಯವರು ಮೊದಲು ಒಪ್ಪಿಕೊಂಡಿದ್ದ[...] ಸಹ ನಂತರ ತದ್ವಿರುದ್ಧ ನಿಲುವು ತೆಗೆದುಕೊಂಡು) ದಲಿತ ಸಮುದಾಯದ ಮೇಲೆ ಹೇರಿದ "ಪೂನಾ ಒಪ್ಪಂದ"ದಿ[...] ದಲಿತರಿಗೆ ಆಗಿರುವ, ಇಂದಿಗೂ ಮುಂದುವರಿಯುತ್ತಿರುವ ಚಾರಿತ್ರಿಕ ಅನ್ಯಾಯವನ್ನು ಇದಕ್ಕಿಂತ ಸಮರ್ಪಕವಾ[...] ವರ್ಣಿಸುವುದು ಖಂಡಿತಾ ಅಸಾಧ್ಯವೆಂದು ಅನ್ನಿಸುತ್ತದೆ.

"... ಹೀಗಾದರೂ ಮಾಡಿ, ಗಾಂಧೀಜಿಯವರು ಕಡೆಯ ಕಾಲದಲ್ಲಿ ಕಂಡ ಕನಸುಗಳಿಗೆ ಜೀವ ತುಂಬಿರಿ[...] ಎಂದು 'ಈ ಕಿರಿಯ ಅಂಬೇಡ್ಕರ್‌ವಾದಿ'ಯು ಗಾಂಧೀ ಅನುಯಾಯಿಗಳಲ್ಲಿ 'ಆಗ್ರಹಪೂರ್ವಕವಾಗಿ' ವಿನಂತಿಸಿದ್ದಾ[...] ಅಂಬೇಡ್ಕರರ 125ನೇ ಜಯಂತಿಯ ಹಿನ್ನೆಲೆಯಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಲೇಖನ-ಪತ್ರಗಳ ಸರಣಿಯ[...] ಈ ಮುಂಚಿ ಸ್ವಲ್ಪ ಖಾರವಾದ ಒಂದು ಪತ್ರಕ್ಕೆ ನೊಂದು ಪ್ರತಿಕ್ರಿಯಿಸಿದ್ದ ಹಿರಿಯರಾದ ಸುರೇಂದ್ರ ಕೌಲಗಿಯವ[...] 'ಹಿರಿಯರಿಗೆ ಹಿರಿಯ' ಎಚ್.ಎಸ್.ದೊರೆಸ್ವಾಮಿಯವರು ಮುಂತಾದ ಎಲ್ಲ ಪ್ರಾಮಾಣಿಕ ಗಾಂಧೀ ಅನುಯಾಯಿಗಳೂ ಈ 'ಕಿರಿಯ'ನ ಕಳಕಳಿಯ, ಆಗ್ರಹಪೂರ್ವಕ ವಿನಂತಿಯನ್ನು ಅಷ್ಟೇ ಕಳಕಳಿಯಿಂದ ಮನಸ್ಸಿಗೆ ತೆಗೆದುಕೊಂಡು, ಜಾತೀಯತೆ-ಅಸ್ಪೃಶ್ಯತೆಗಳನ್ನು, ಅವನ್ನಾಧರಿಸಿದ ಅಸಂಖ್ಯ ರೀತಿಯ ದೌರ್ಜನ್ಯ-ಅಪಮಾನ-ತಾರತಮ್ಯಗಳನ್ನು ಸಮಾಜದಿಂದ ತೊಡೆದುಹಾಕಲು ಅರ್ಥಪೂರ್ಣವಾದ, ನಿರ್ಣಾಯಕವಾದ, ಕಣ್ಣಿಗೆ-ಕಾಣುವಂಥ-ಫಲ-ಕೊಡಬಲ್ಲ ಸಾಮೂಹಿಕ ಕ್ರಮಗಳಿಗೆ ಮಾರ್ಗದರ್ಶನ ಮಾಡುತ್ತಾರೆಂದು ಎಲ್ಲ ಹೃದಯವಂತರೂ ಆಶಿಸುತ್ತಿದ್ದೇವೆ.




- ಸಿರಿಮನೆ ನಾಗರಾಜ್, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ [...] ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿ[...] ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗ[...] ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹು[...]

ಸಿನಿಮಾರಂಗ ನನ್ನ ಕನಸಾಗಿರಲಿಲ್ಲ: ವಿನಯ್ ರಾಜ್‌ಕುಮಾರ್

ಡಾ.ರಾಜ್ ಕುಟುಂಬದ ನಾಲ್ಕನೇ ತಲೆಮಾರು ಸಿನಿಮಾ ರಂಗಪ್ರವೇಶ ಮಾಡಿ ವರ್ಷವೇ ಕಳೆಯಿತು. 'ಸಿದ್ಧಾರ್ಥ' ಮೂಲಕ ಸ್ಯಾಂಡಲ್‌ವುಡ್‌ಗೆ ಬಂದ ರಾಘವೇಂದ್ರ ರಾಜ್‌ಕುಮಾರ್ ಅವರ ಪುತ್ರ ವಿನಯ್, ಈಗ ಮತ್ತೊಂದು ಚಿತ್ರಕ್ಕಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಆ ಕುರಿತು ಮಾತನಾಡಿದ್ದಾರೆ.



** ನಿಮ್ಮ ಮೊದಲ ಸಿನಿಮಾ 'ಸಿದ್ಧಾರ್ಥ'ದ ಗೆಲುವಿನ ಬಗ್ಗೆ ಹೇಳಿ.*

'ಸಿದ್ಧಾರ್ಥ' ನನ್ನ ಮೊದಲ ಸಿನಿಮಾ. ಈ ಹೊತ್ತಿನ ಯುವಕರ ಕತೆ ಅಲ್ಲಿತ್ತು ಹೀಗಾಗಿ ಯುವ ಸಮುದಾಯವನ್ನು ಅದು ತಲುಪಿತು. ನನಗೂ ಕೂಡ ಒಳ್ಳೆಯ ಹೆಸರು ತಂದುಕೊಟ್ಟಿತು. ಆ ಗೆಲುವೇ ಮತ್ತೊಂದು ಸಿನಿಮಾ ಮಾಡಲು ಪ್ರೇರೇಪಿಸಿದೆ. ಮೊದಲ ಸಿನಿಮಾ ಅಂದಾಗ ಸಣ್ಣಪುಟ್ಟ ತಪ್ಪುಗಳು ಕಾಣುವುದು ಸಹಜ. ಮುಂದಿನ ಸಿನಿಮಾದಲ್ಲಿ ಅವುಗಳನ್ನು ಮೀರುವ ಪ್ರಯತ್ನ ಮಾಡುವೆ.


** ಸಿನಿಮಾರಂಗಕ್ಕೆ ಬರಲು ಮನೆಯಲ್ಲಿ ಒತ್ತಾಯ ಇತ್ತಾ?*

ನಮ್ಮ ಕುಟುಂಬ ಕಲೆಗಾಗಿಯೇ ಮೀಸಲಾದ ಕುಟುಂಬ. ಆದ್ದರಿಂದ ಇಂತಹ ಪ್ರಶ್ನೆ ಮೂಡುವುದು ಸಹಜವೇ. ಆದರೆ, ನಮ್ಮ ಮನೆಯಲ್ಲಿ ನನಗೆ ಒತ್ತಾಯ ಇರಲಿಲ್ಲ. ನಾನೂ ಕೂಡ ಸಿನಿಮಾರಂಗಕ್ಕೆ ಬರುತ್ತೇನೆ ಎಂದು ಕನಸೂ ಕಂಡಿರಲಿಲ್ಲ. ನನ್ನನ್ನು ನೋಡಿದ ಪ್ರತಿಯೊಬ್ಬರು ಹೀರೋ ಯಾಕೆ ಆಗಬಾರದು ಎಂದು ಕೇಳುತ್ತಿದ್ದರು. ಬಹುಶಃ ಅದೇ ನನ್ನನ್ನು ಸಿನಿಮಾರಂಗಕ್ಕೆ ಕರೆತಂದಿತು.

** ಕಲಾವಿದರ ಕುಟುಂಬದವರು ಅನ್ನುವ ಕಾರಣಕ್ಕೆ ಹೀರೋ ಅಂತ ಜನ ಒಪ್ಪಿಕೊಳ್ಳಬೇಕಾ?*

ನಾನಂತಲ್ಲ, ಯಾರೂ ಕೂಡ ಆ ರೀತಿ ಯೋಚನೆ ಮಾಡಬಾರದು. ಕಲೆ ಎಲ್ಲರಿಗೂ ಒಲಿಯುವುದಿಲ್ಲ ಅಂತ ತಾತ (ರಾಜ್‌ಕುಮಾರ್) ಹೇಳುತ್ತಿದ್ದರು. ಅದಕ್ಕಾಗಿ ಸಾಕಷ್ಟು ಕಷ್ಟ ಪಡಬೇಕು ಎನ್ನುವುದು ಅವರ ವಾದವಾಗಿತ್ತು, ಅದನ್ನು ಅಪ್ಪಾಜಿ, ದೊಡ್ಡಪ್ಪ ಚಿಕ್ಕಪ್ಪ ಎಲ್ಲರೂ ಪಾಲಿಸಿದರು. ನಾನೂ ಕೂಡ ಅದೇ ಹಾದಿಯಲ್ಲೇ ನಡೆದುಬಂದಿದ್ದೇನೆ. ನೇರವಾಗಿ ನಾನು ಕ್ಯಾಮೆರಾ ಮುಂದೆ ನಿಂತಿಲ್ಲ, ಹಲವರಲ್ಲಿ ತರಬೇತಿ ಪಡೆದು ನಟಿಸಿದ್ದೇನೆ.

** ನಾಯಕನಾಗಲು ಏನೆಲ್ಲ ತರಬೇತಿ ಪಡೆದಿದ್ದೀರಿ?*



ಧನು ಮಾಸ್ಟರ್ ಹತ್ತಿರ ನೃತ್ಯ ಕಲಿತೆ. 'ಜಟ್ಟ', 'ಮೈತ್ರಿ' ಖ್ಯಾತಿಯ ನಿರ್ದೇಶಕ ಗಿರಿರಾಜ್ ನನಗೆ ನಟನಾ ಪಾಠ ಹೇಳಿಕೊಟ್ಟರು. ಜಿಮ್‌ನಲ್ಲಿ ದೇಹ ದಂಡಿಸಿದ್ದೇನೆ. ಎರಡನೇ ಸಿನಿಮಾಗಾಗಿ ಬಾಂಬೆಯಲ್ಲಿ ಮತ್ತಷ್ಟು ತರಬೇತಿ ಪಡೆದುಕೊಳ್ಳುತ್ತೇನೆ. ಒಳ್ಳೊಳ್ಳೆ ಸಿನಿಮಾಗಳನ್ನು ನೋಡುತ್ತಿದ್ದೇನೆ. ಅಲ್ಲದೇ ನನ್ನ ಮೊದಲ ಸಿನಿಮಾದ ತಪ್ಪುಗಳನ್ನು ಸರಿಮಾಡಿಕೊಂಡಿದ್ದೇನೆ.

** ಎರಡನೇ ಸಿನಿಮಾ ಬಗ್ಗೆ ಹೇಳಿ.*

ಮೊದಲ ಸಿನಿಮಾದಲ್ಲಿ ನಾನು ಕಾಲೇಜ್ ಹುಡುಗನ ಪಾತ್ರ ಮಾಡಿದ್ದೆ. ಅದೊಂದು ಕ್ಯೂಟ್ ಲವ್ ಸ್ಟೋರಿ. ಕಾಲೇಜ್‌ಗೆ ಹೋಗುವ ಪ್ರತಿ ಹುಡುಗನಿಗೂ ಏನೆಲ್ಲ ಕನಸು ಇರಬಲ್ಲವೋ, ಅವೆಲ್ಲವೂ ಅಲ್ಲಿತ್ತು, ಎರಡನೇ ಸಿನಿಮಾದಲ್ಲಿ ನಾನು ಆ್ಯಕ್ಷನ್ ಹೀರೋ ಆಗಿ ಕಾಣಿಸಿಕೊಳ್ಳುತ್ತಿದ್ದೇನೆ. ಈ ಸಿನಿಮಾವನ್ನು 'ಜೋಗಿ' ಪ್ರೇಮ್ ನಿರ್ದೇಶನ ಮಾಡುತ್ತಿದ್ದಾರೆ. ಈಗಾಗಲೇ ಸಿನಿಮಾದ ಶೀರ್ಷಿಕೆ ಕೂಡ ಲಾಂಚ್ ಆಗಿದೆ. ಇನ್ನಷ್ಟೇ ಶೂಟಿಂಗ್ ಶುರುವಾಗಬೇಕು. ಇದು ಪಕ್ಕಾ ಆ್ಯಕ್ಷನ್ ಚಿತ್ರ. ಹೀಗಾಗಿ ಸಾಹಸ ಸನ್ನಿವೇಶಗಳ ತಯಾರಿಗಾಗಿ ನಾನು ಮುಂಬೈನ ಹೆಸರಾಂತ ಸ್ಟಂಟ್ ಮಾಸ್ಟರ್ ಹತ್ತಿರ ತರಬೇತಿ ಪಡೆದೆ.


** ಮೊದಲ ಸಿನಿಮಾದಲ್ಲಿ ಗಿಟಾರ್ ಹಿಡಿದವರು, ಈಗ ಲಾಂಗ್ ಹಿಡಿಯುತ್ತಿದ್ದೀರಿ. ಇಷ್ಟು ಬೇಗ ಇದು ಬೇಕಿತ್ತಾ?*


ನಾನು ನಟ ಮಾತ್ರ. ನಿರ್ದೇಶಕರು ತಮ್ಮ ಕತೆಗೆ ಹೇಗೆ ಬೇಕೋ ಹಾಗೆ ನಾಯಕರನ್ನು ಉಪಯೋಗಿಸಿಕೊಳ್ಳುತ್ತಾರೆ. ಮೊದಲ ಸಿನಿಮಾದಲ್ಲಿ ನಾನು ಲವ್ವರ್‌ಬಾಯ್ ಆಗಿದ್ದೆ. ಈಗ ರಫ್ ಆ್ಯಂಡ್ ಟಫ್ ರೀತಿಯ ಪಾತ್ರ ಮಾಡುತ್ತಿದ್ದೇನೆ. ಹೀಗಾಗಿ ಲಾಂಗ್ ಅಥವಾ ಗನ್ ಹಿಡಿಯುವ ಪ್ರಸಂಗ ಎದುರಾಗಿದೆ. ಹಾಗಂತ ಕೆಟ್ಟ ಸಂದೇಶ ಸಾರುವ ಸಿನಿಮಾ ಇದಾಗಿರುವುದಿಲ್ಲ.


** ಪ್ರೇಮ್ ಅವರ ಯಾವ ಸಿನಿಮಾ ನಿಮಗೆ ತುಂಬಾ ಇಷ್ಟ?*

'ಜೋಗಿ' ನನಗಿಷ್ಟದ ಸಿನಿಮಾ. ಪ್ರೇಮ್ ಯಾವುದೇ ಕೆಲಸ ಕೈಗೆತ್ತಿಕೊಂಡರೂ, ಅಲ್ಲೊಂದು ಹೊಸತನ ಇರುತ್ತದೆ. ಸಿನಿಮಾಗೆ ಬೇಕಾಗಿರುವ ಅಬ್ಬರತೆ ಇರುತ್ತದೆ. ಪ್ರೇಮ್ ಸಿನಿಮಾಗಳಿಗಾಗಿಯೇ ಕಾಯುವ ಪ್ರೇಕ್ಷಕರು ಇದ್ದಾರೆ. ಇವತ್ತಿಗೂ ಜೋಗಿ ಸಿನಿಮಾವನ್ನು ಪ್ರತಿಯೊಬ್ಬರೂ ನೆನಪಿಸಿಕೊಳ್ಳುತ್ತಾರೆ. ■

'ಮಿತ್ರ'ನನ್ನು ಕಳೆದುಕೊಂಡ ಜಗ್ಗೇಶ್







ನವರಸ ನಾಯಕ ಜಗ್ಗೇಶ್ ತಮ್ಮ ಮುದ್ದಿನ ಮಿತ್ರನನ್ನು ಕಳೆದುಕೊಂಡ ದುಃಖದಲ್ಲಿದ್ದಾರೆ. ಯಾರು ಅವರ ಮುದ್ದಿನ ಮಿತ್ರಾ ಅಂತೀರಾ? ಕಳೆದ ಹದಿನಾಲ್ಕು ವರ್ಷಗಳಿಂದ ಅವರಿಂದ ಪ್ರೀತಿ ಪಡೆದು, ಅವರಿಗೂ ಪ್ರೀತಿ ಕೊಟ್ಟ ನಾಯಿ. ಅರ್ಜುನ್!

ಜಗ್ಗೇಶ್ ಅವರು ತಮ್ಮ ಫೇಸ್‌ಬುಕ್ ಪೇಜಿನಲ್ಲಿ ಅಗಲಿದ ತಮ್ಮ ಮಿತ್ರನ ಬಗ್ಗೆ ಹೀಗೆ ಬರೆದಿದ್ದಾರೆ:


"14 ವರ್ಷದ ಬಾಂಧವ್ಯ ಇಂದು ಕೊನೆಯಾಯಿತು. ಅರ್ಥವಾಗದವರಿಗೆ ಇದು ಸಾಮಾನ್ಯ ನಾಯಿ... ಅರ್ಥವಾದವರಿಗೆ ದೇವರು ನಮಗೆ ಕಲಿಸಿಕೊಟ್ಟ ಅನುಭವಕ್ಕೂ ನಿಲುಕದ ಪ್ರೀತಿಯ ಸಂಕೇತ... ನಾನು ಏಕಾಂಗಿಯಾಗಿ ಇರಲು ಬಯಸುವ ಮನುಷ್ಯ... ಆದರೆ ಇವನು ಈ 14 ವರ್ಷ ನನ್ನ ಏಕಾಂಗಿತನ ನೀಗಿದವ. ರಾಯರೇ ಇವನನ್ನು ನನಗಾಗಿ ಕಳಿಸಿದ್ದು ಎಂದು ನನಗೆ ಅನ್ನಿಸುತ್ತಿದೆ."



ಅರ್ಜುನ್ ಕಣ್ಣುಮುಚ್ಚಿದ ಹಲವೇ ದಿನಗಳ ನಂತರ ಜಗ್ಗೇಶ್ ಅವರ ಪುತ್ರ ಗುರು ಮತ್ತು ಆತನ ಪತ್ನಿ ಕೇಟಿ ಅವರಿಗೆ ಮೊದಲ ಮಗ ಜನಿಸಿದ. ಆಗ ಜಗ್ಗೇಶ್ ಅವರು "ಮಗನಿಗೆ ಏನು ಹೆಸರಿಡೋಣ?" ಎಂದು ಕೇಳಿದರಂತೆ. ಅದಕ್ಕೆ ಅವರ ಮಗ ಗುರು ಉತ್ತರಿಸಿದ್ದು ಹೀಗೆ: "ಅರ್ಜುನ್ ನಮ್ಮನ್ನೆಲ್ಲ ಆವರಿಸಿಕೊಂಡಿದ್ದಾನೆ. ಅವನ ಹೆಸರನ್ನೇ ನನ್ನ ಮಗನಿಗೆ ಇಡುತ್ತೇನೆ."

ತಮ್ಮ ಮಿತ್ರನ ಹೆಸರು ಈಗ ಅವರ ಮನೆಯಲ್ಲಿ ಶಾಶ್ವತವಾಗಿರುವುದರ ಬಗ್ಗೆ ಜಗ್ಗೇಶ್ ಅವರಿಗೆ ತುಂಬಾ ಸಂತೋಷವಾಗಿದೆಯಂತೆ.

"ಅರ್ಜುನ್ ಎಂಬ ಮಿತ್ರನನ್ನು, ನನಗೆ ನೀಡಿದ ರಾಯರಿಗೆ ವಂದನೆ ಅರ್ಪಿಸಿ ಭಾರದ ಹೃದಯದಿಂದ ಅವನನ್ನು ಕಳಿಸುತ್ತೇನೆ... ಐ ಲವ್ ಯೂ ಅರ್ಜುನ್" ಎಂದಿದ್ದಾರೆ ಜಗ್ಗೇಶ್. ನಿಷ್ಕಲ್ಮಶ ಪ್ರೀತಿ ಮತ್ತು ಸ್ನೇಹ ಅಂದರೆ ಇದೇ ಅಲ್ಲವೇ?! ■



Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 24-06-2015 RNI No. KARKAN200

ಟೈಟಲ್ ವಿವಾದದಲ್ಲಿ ನೇಹಾ



ನೇಹಾ ಪಾಟೀಲ್

ವಿವಾದದ ಮೂಲಕವೇ ಫೇಮಸ್ ಆದ ನಟಿ ನೇಹಾ ಪಾಟೀಲ್, ಈಗ ಮತ್ತೊಂದು ವಿವಾದ ಅವರನ್ನು ಸುತ್ತಿಕೊಂಡಿದೆ. ಪ್ರತಿ ಬಾರಿಯಂತೆ ಈ ಸಲವೂ ಸಿನಿಮಾ ಪ್ರಚಾರಕ್ಕಾಗಿಯೇ ಈ ನಟಿಯನ್ನು ವಿವಾದದಲ್ಲಿ ಸಿಲುಕಿಸಲಾಗಿದೆ. ವಿವಾದದ ಹಿಂದಿರುವ ರೂವಾರಿ 'ಟೈಟಲ್ ಬೇಕಾ' ಚಿತ್ರದ ನಿರ್ದೇಶಕ ಆನಂದ್.

ತೀರಾ ಕಡಿಮೆ ಬಜೆಟ್‌ನಲ್ಲಿ ನಿರ್ಮಾಣವಾದ ಈ ಚಿತ್ರಕ್ಕೆ ತುರ್ತಾಗಿ ಪ್ರಚಾರಬೇಕಿದೆ. ಹೀಗಾಗಿಯೇ ಕೀಳುಮಟ್ಟದ ಪೋಸ್ಟರ್ ಬಿಡುಗಡೆ ಮಾಡಿ, ಮಹಿಳಾ ಸಂಘಟನೆಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಮಹಿಳಾ ಸಂಘಟನೆಗಳ ಸದಸ್ಯರು ನಿರ್ದೇಶಕರ ಜತೆ ನೇಹಾರನ್ನೂ ತರಾಟೆಗೆ ತೆಗೆದುಕೊಂಡಿದ್ದಾರೆ.

ಪೋಸ್ಟರ್‌ನಲ್ಲಿರುವ ಭಾವಚಿತ್ರಕ್ಕೂ ಸಿನಿಮಾ ದೃಶ್ಯಕ್ಕೂ ಯಾವುದೇ ಸಂಬಂಧವಿಲ್ಲ. ವಿವಾದ ಮಾಡಲೆಂದೇ ಫೋಟೋಶೂಟ್ ಮಾಡಿ, ಅದನ್ನು ಪೋಸ್ಟರ್‌ನಲ್ಲಿ ಬಳಸಿದ್ದಾರೆ ಎನ್ನುವುದು ನೇಹಾ ಆರೋಪ. ಕತೆಗೂ ಪೋಸ್ಟರ್‌ಗೂ ಸಂಬಂಧವಿದೆ ಅನ್ನುವುದು ನಿರ್ದೇಶಕರ ಮಾತು. ಯಾರ ಮಾತು ಸತ್ಯ, ಯಾರು ಸುಳ್ಳು ಹೇಳುತ್ತಿದ್ದಾರೆ ಎನ್ನುವುದು ಸಿನಿಮಾ ಬಿಡುಗಡೆ ಆದನಂತರವೇ ಗೊತ್ತಾಗಬೇಕು.

ನೇಹಾ ನಟಿಸಿದ ಸಿನಿಮಾ ವಿವಾದಕ್ಕೆ ಗುರಿಯಾಗಿರುವುದು ಇದೇ ಮೊದಲೇನೂ ಅಲ್ಲ. 'ಸಂಕ್ರಾಂತಿ' ಚಿತ್ರ ಕೂಡ ಕಾಂಟ್ರೊವರ್ಸಿಗೆ ಕಾರಣವಾಗಿತ್ತು. 'ಒಲವಿನ ಓಲೆ' ಚಿತ್ರಕ್ಕೂ ವಿವಾದ ಬೆನ್ನುಹತ್ತಿತ್ತು. ಈಗ ಮತ್ತೊಂದು ಕಾರಣಕ್ಕಾಗಿ ನೇಹಾ ಸುದ್ದಿ ಆಗಿದ್ದಾರೆ. ನೇಹಾ ಮುಗ್ಧತೆಯೋ ಅಥವಾ ದಡ್ಡತನವೋ ಪ್ರಚಾರವಂತೂ ಪಡೆಯುತ್ತಿದ್ದಾರೆ.

ರಾಜಕಾರಣಿ ಮಕ್ಕಳ ತ್ರಿಕೋನ ಸ್ಪರ್ಧೆ

ಏಕಕಾಲಕ್ಕೆ ಮೂವರು ರಾಜಕಾರಣಿಗಳ ಮಕ್ಕಳು ಸಿನಿಮಾರಂಗಕ್ಕೆ ಪ್ರವೇಶ ಮಾಡುತ್ತಿದ್ದಾರೆ. ಹೀಗಾಗಿ ಸ್ಯಾಂಡಲ್‌ವುಡ್ ಸದ್ಯ ಕುತೂಹಲದ ಗೂಡಾಗಿದೆ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಪುತ್ರ ನಿಖಿಲ್ ಗೌಡ, ಸಂಸದ ಚೆಲುವರಾಯಸ್ವಾಮಿ ಪುತ್ರ ಸಚಿನ್ ಮತ್ತು ಹೆಚ್.ಎಂ.ರೇವಣ್ಣ ಪುತ್ರ



ಅನೂಪ್‌ರ ಸಿನಿಮಾ ಇದೇ ವಾರದಲ್ಲಿ ಮುಹೂರ್ತ ಕಾಣುತ್ತಿವೆ.

ನಿಖಿಲ್ ಗೌಡ ಚಿತ್ರಕ್ಕೆ ಹೆಸರಾಂತ ನಿರ್ದೇಶಕರು ಆಕ್ಷನ್ ಕಟ್ ಹೇಳಲಿದ್ದಾರೆ ಎಂಬ ಸುದ್ದಿ ಇತ್ತು, ಕೊನೆ ಕ್ಷಣದಲ್ಲಿ ಅದು ಬದಲಾಗಿದೆ. ತೆಲುಗಿನ ಹೆಸರಾಂತ ನಿರ್ದೇಶಕ ರಾಜಮೌಳಿಯ ಶಿಷ್ಯ ಮಹದೇವ ನಿರ್ದೇಶನ ಮಾಡುತ್ತಿದ್ದಾರೆ. ಮತ್ತೊಂದು ವಿಶೇಷವೆಂದರೆ ರಾಜಮೌಳಿ ತಂದೆಯೇ ಈ ಚಿತ್ರಕ್ಕೆ ಕತೆ ಬರೆದಿದ್ದಾರೆ. 'ಜಾಗ್ವರ್' ಹೆಸರಿನ ಸಿನಿಮಾ ಸದ್ಯದಲ್ಲೇ ಸೆಟ್ಟೇರಲಿದೆ.

ರಾಜಕಾರಣಿಗಳ ಜತೆ ಉತ್ತಮ ಬಾಂಧವ್ಯ ಹೊಂದಿರುವ ನಿರ್ದೇಶಕ ಮಹೇಶ್ ಸುಖಧರೆ, ಸಚಿನ್ ಸಿನಿಮಾ ಕೈಗೆತ್ತಿಕೊಂಡಿದ್ದಾರೆ. 'ಹ್ಯಾಪಿ ಬರ್ತಡೇ' ಹೆಸರಿನ ಸಿನಿಮಾ ಜೂನ್ 11ರಂದು ಮುಹೂರ್ತ ಕಾಣಲಿದೆ. ದರ್ಶನ್ ನಟನೆಯ 'ಅಂಬರೀಷ' ಸಿನಿಮಾದ ಮೂಲಕ ಕಳೆದುಕೊಂಡಿದ್ದನ್ನು, ಈ ಸಿನಿಮಾದ ಮೂಲಕ ಪಡೆದುಕೊಳ್ಳುವ ಗುರಿ ನಿರ್ದೇಶಕ ಸುಖಧರೆ ಅವರದ್ದು.

ನಿರ್ದೇಶಕ ಕಂ ನಿರ್ಮಾಪಕ ಆರ್.ಚಂದ್ರು 'ಲಕ್ಷ್ಮಣ' ಸಿನಿಮಾದ ಮೂಲಕ ರೇವಣ್ಣ ಪುತ್ರನನ್ನು ಸ್ಯಾಂಡಲ್‌ವುಡ್‌ಗೆ ಪರಿಚಯಿಸುತ್ತಿದ್ದಾರೆ. ಈವರೆಗೂ ಪ್ರೀತಿ ಪ್ರೇಮ ಕತೆಗೆ ಜೋತು ಬಿದ್ದಿದ್ದ ಚಂದ್ರು, ಈ ಸಿನಿಮಾದ ಮೂಲಕ ಆಕ್ಷನ್ ಕತೆಯತ್ತ ವಾಲಿದ್ದಾರೆ.

ಒಂದೇ ವರ್ಷದಲ್ಲಿ ಈ ಮೂವರು ನಟರ ಸಿನಿಮಾಗಳು ಬಿಡುಗಡೆ ಆಗುವುದರಿಂದ, ಯಾರ ಕೊರಳಿಗೆ ಜಯದ ಮಾಲೆ ಕಾದಿದೆಯೋ ಕಾದು ನೋಡಬೇಕು.

ಸ್ಯಾಂಡಲ್‌ವುಡ್‌ಗೆ ಕೈಗೆಟುಕದ ನಿಧಿ

ಪುನೀತ್ ರಾಜ್‌ಕುಮಾರ್ ಸೇರಿದಂತೆ ಹಲವು ನಟರ ಜತೆ ತೆರೆ ಹಂಚಿಕೊಂಡಿರುವ ನಿಧಿ ಸುಬ್ಬಯ್ಯ ಬಾಲಿವುಡ್‌ಗೆ ಹೋಗಿ ಮೂರು ವರ್ಷಗಳಾಯಿತು. ಆನಂತರ ಸ್ಯಾಂಡಲ್‌ವುಡ್‌ನಲ್ಲಿ ಅವರು ಕಾಣಿಸಿಕೊಂಡಿದ್ದಿರಲಿ, ಅವರ ಹೆಸರೂ ಕೇಳಿಬರಲಿಲ್ಲ. ಈಗ ಮತ್ತೆ ನಿಧಿ ಹೆಸರು ಕನ್ನಡ ಚಿತ್ರೋದ್ಯಮದಲ್ಲಿ ಕೇಳಿಬರುತ್ತಿದೆ. ಅಂದುಕೊಂಡಂತೆ ನಡೆದರೆ ಮತ್ತೆ ಅವರು ಯೋಗರಾಜ್ ಭಟ್ ಸಿನಿಮಾದಲ್ಲಿ ನಟಿಸಲಿದ್ದಾರೆ.

ನಿಧಿ ಬಾಲಿವುಡ್‌ಗೆ ಹಾರಿದರೂ, ಕನ್ನಡ ಸಿನಿಮಾದಲ್ಲಿ ನಟಿಸಲು ಅವಕಾಶ ಕಡಿಮೆ ಆಗಿರಲಿಲ್ಲ. ಸಾಕಷ್ಟು ನಿರ್ಮಾಪಕರು ಬಾಂಬೆಗೂ ಹೋಗಿ ಕತೆ ಹೇಳಿಬಂದಿದ್ದಾರೆ. ಆದರೆ, ಅವರು 'ತ್ರಿ ಮೂವಿ ಡೀಲ್'ಗೆ ಸಹಿ ಮಾಡಿದ್ದರಿಂದ ಅನಿವಾರ್ಯವಾಗಿ ಹಿಂದಿಯಲ್ಲೇ ಉಳಿಯಬೇಕಾಯಿತು. ಅವರ ಬಾಲಿವುಡ್ ಮೊದಲ ಸಿನಿಮಾ 'ಅಜಬ್ ಗಜಬ್ ಲವ್' ಬಿಡುಗಡೆಯಾದರೂ, ಹೇಳಿಕೊಳ್ಳುವಂಥ ಗೆಲುವು ಸಿಗಲಿಲ್ಲ. ಸಿನಿಮಾ ಮಕಾಡೆ ಮಲಗಿತ್ತು. ಆನಂತರ 'ಓ ಮೈ ಗಾಡ್' ಚಿತ್ರದಲ್ಲಿ ಕಾಣಿಸಿಕೊಂಡರೂ, ಅದು ಹಾಗೇ ಬಂದು, ಹೀಗೆ ಹೋಗುವ ಪಾತ್ರವಾಗಿತ್ತು. ಎರಡೂ ಸಿನಿಮಾ ಕೈಕೊಟ್ಟ ನಂತರ ಒಂದು ವರ್ಷ ಅವರು ಮನೆಯಲ್ಲೇ ಉಳಿಯಬೇಕಾಯಿತು. ಈಗ ಮತ್ತೊಂದು ಚಿತ್ರಕ್ಕೆ ಸಹಿ ಮಾಡಿದ್ದಾರೆ ಎಂಬ ಸುದ್ದಿ ಇದೆ.



ನಿಧಿ

ಈ ನಡುವೆ ಕನ್ನಡಕ್ಕೆ ವಾಪಸ್ಸು ಆಗುವ ಮಾತುಗಳನ್ನು ನಿಧಿ ಆಡಿದ್ದಾರೆ. ಹೀಗಾಗಿಯೇ ಕನ್ನಡದ ನಿರ್ಮಾಪಕರು ಮತ್ತೆ ನಿಧಿ ಅವರನ್ನು ಕರೆತರುವ ಪ್ರಯತ್ನಕ್ಕೆ ಕೈ ಹಾಕುತ್ತಿದ್ದಾರೆ. ಸಂಭಾವನೆ ವಿಷಯದಲ್ಲಿ ಹಲವರಿಗೆ ನಿಧಿ ದಕ್ಕಿಲ್ಲ. ಇನ್ನೂ ಕೆಲವರ ಕತೆಯು ನಿಧಿ ಅವರಿಗೆ ಇಷ್ಟವಾಗಿಲ್ಲ. ಹೀಗಾಗಿ ಕರೆತರುವ ಕಸರತ್ತು ತೆರೆಮರೆಯಲ್ಲಿ ನಡೆದಿದೆ.

ನಿಧಿ ಮೊದಲು ಕನ್ನಡದ ಪ್ರೇಕ್ಷಕರಿಗೆ ಪರಿಚಯ ಆಗಿದ್ದು ವಿವಾದದ ಮೂಲಕ. ಕೋಮಲ್ ನಟನೆಯ 'ಚಮ್ಕಾಯ್ಸಿ ಚಿಂದಿ ಉಡಾಯ್ಸಿ' ಸಿನಿಮಾದಲ್ಲಿ ನಾಯಕನ ಜತೆ ಗಲಾಟೆ ಮಾಡಿಕೊಂಡರು. ಸಿನಿಮಾದ ಸಹವಾಸವೇ ಬೇಡ ಎಂದು ಹೊರಟವರಿಗೆ, ಯೋಗರಾಜ್ ಭಟ್ಟ ಕರೆದು 'ಪಂಚರಂಗಿ' ಸಿನಿಮಾದಲ್ಲಿ ಅವಕಾಶ ಕೊಟ್ಟರು. ಅಲ್ಲಿಂದ ನಿಧಿ ನಡೆದದ್ದೇ ಹಾದಿ ಅಂತಾಯಿತು. ಚಿತ್ರದಿಂದ ಚಿತ್ರಕ್ಕೆ ಸಾಕಷ್ಟು ಬೆಳೆದರು. ಗಾಸಿಪ್‌ಗೆ ತುತ್ತಾಗದಂತೆ ಎಚ್ಚರ ವಹಿಸಿದರು. 'ಪಂಚರಂಗಿ'ಯಲ್ಲಿ ಬಬ್ಲಿ ಹುಡುಗಿಯಾಗಿ, 'ಕೃಷ್ಣನ್ ಮ್ಯಾರೇಜ್ ಸ್ಟೋರಿ' ಚಿತ್ರದ ಮೂಲಕ ಮತ್ತಷ್ಟು ಭರವಸೆಯನ್ನು ಮೂಡಿಸಿದ್ದರು. ಪುನೀತ್ ಅಭಿ... 'ಅಣ್ಣಾಬಾಂಡ್' ನಂತರ ಬಾಲಿವುಡ್‌ಗೆ ಹಾರಿದರು.

"ಕನ್ನಡದಲ್ಲಿ ನಟಿಸಬಾರದು ಅಂತೇನೂ ಇಲ್ಲ, ಇಲ್ಲಿ ಅವಕಾಶ ... ಅನ್ನುವ ಕಾರಣಕ್ಕೆ ನಾನು ವಲಸೆ ಹೊರಟಿಲ್ಲ, ಸಾಕಷ್ಟು ಆಫರ್‌ಗಳು ಕನ್ನ... ಬಂದವು. ಬಟ್, ನನಗೆ ಕಥೆಗಳು, ಪಾತ್ರಗಳು ಇಷ್ಟ ಆಗಲಿಲ್ಲ, ಇ... ಸಿನಿಮಾಗಳಿಗೆ ಒಪ್ಪಿ ನಟಿಸಿದ್ದೇನೆ. ನನಗೆ ಒಪ್ಪುವ ಪಾತ್ರಗಳು ಸಿಕ್ಕರೆ ಖ... ನಟಿಸುತ್ತೇನೆ" ಎಂದು ಹೇಳಿಹೊರಟವರು, ಈವರೆಗೂ ವಾಪಸ್ಸು ... ಚಿತ್ರೋದ್ಯಮಕ್ಕೆ ಬಂದಿಲ್ಲ, ಯೋಗರಾಜ್ ಭಟ್ ಸಿನಿಮಾದ ಮ... ಬರುತ್ತಾರೋ ಇಲ್ಲವೋ ಕಾದು ನೋಡಬೇಕು.

ಸುದೀಪ್ ಸಿನಿಮಾ 'ಕೋಟಿಗೊ...

'ರನ್ನ' ಚಿತ್ರದ ಯಶಸ್ಸಿನಲ್ಲಿರುವ ಸುದೀಪ್, ಮುಂದೆ ಯಾವ ಸಿ... ಮಾಡುತ್ತಾರೆ ಎಂಬ ಕುತೂಹಲ ಅವರ ಅಭಿಮಾನಿಗಳದ್ದು. ಅ... ಉತ್ತರ ಸಿಕ್ಕಿದೆ. ಸೂರಪ್ಪ ಬಾಬು ನಿರ್ಮಾಣದ 'ಕೋಟಿಗೊಬ್ಬ - 2' ಚಿ... ಅವರು ನಟಿಸಲಿದ್ದಾರೆ.



ತಮಿಳಿನ 'ಲಿಂಗ' ಚಿತ್ರದ ನಿರ್ದೇಶಕ ಕೆ.ಎಸ್.ರವಿಕುಮಾರ್ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಈಗಾಗಲೇ ಕತೆ ರೆಡಿ ಆಗಿದೆ. 'ರನ್ನ' ಸಿನಿಮಾ ಬಿಡುಗಡೆಗೆ ಕಾಯುತ್ತಿದ್ದ ನಿರ್ಮಾಪಕರು, ಸದ್ಯದಲ್ಲೇ ಮುಹೂರ್ತಕ್ಕೂ ಡೇಟ್ ಫಿಕ್ಸ್ ಮಾಡಲಿದ್ದಾರೆ. ಇದು ವಿಷ್ಣುವರ್ಧನ್ ಅಭಿನಯದ 'ಕೋಟಿ... ಸೂಪರ್ ಹಿಟ್ ಸಿನಿಮಾದ ಶೀರ್ಷಿಕೆ ಹೊತ್ತು ಬರುತ್ತಿರುವುದರಿಂದ ಕುತ... ಮೂಡಿಸಿದೆ.

ಸಿನಿಮಾದ ಮತ್ತೊಂದು ವಿಶೇಷತೆ ಅಂದರೆ, ಕನ್ನಡ ಮತ್ತು ತಮಿ... ಈ ಚಿತ್ರ ನಿರ್ಮಾಣ ಆಗಲಿದೆ. ಕನ್ನಡದಲ್ಲಿ ಟೈಟಲ್ ಫೈನಲ್ ... ತಮಿಳಿನಲ್ಲಿ ಶೀರ್ಷಿಕೆ ಇಡುವ ಕುರಿತು ಚರ್ಚೆ ನಡೆಯುತ್ತಿದೆ.

ಸತೀಶ್ ಹುಟ್ಟುಹಬ್ಬಕ್ಕೆ ಹಾ...

ಸತೀಶ್ ನೀನಾಸಂ ನಟಿಸಿ, ನಿರ್ಮಾಣ ಮಾಡುತ್ತಿರುವ 'ರಾಕೆಟ್' ಚಿತ್ರಕ್ಕೆ ಹಾಡುಗಳ ಚಿತ್ರೀಕರಣ ನಡೆಯುತ್ತಿದೆ. ಈ ನಡುವೆ ಜೂನ್ 20ಕ್ಕೆ ಆ ಹಾಡುಗಳನ್ನು ಲೋಕಾರ್ಪಣೆ ಮಾಡುವ ತಯಾರಿ ನಡೆಸಿದ್ದಾರೆ.

ಅಂದು ಅವರ ಹುಟ್ಟುಹಬ್ಬ. ಹೀಗಾಗಿ ಅದ್ದೂರಿಯಾಗಿ ಸಿನಿಮಾ ಗೀತೆಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ.



'ಲೂಸಿಯಾ', 'ಲವ್ ಇನ್ ಮಂಡ್ಯ' ನಂತರ ಸತೀಶ್‌ಗೂ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಸಹಜವಾಗಿಯೇ ಆಡಿಯೋ ರೈಟ್ಸ್ ಹೆಚ್ಚಿನ ಮೊತ್ತಕ್ಕೆ ಮಾರಾಟವಾಗಿದೆ.

ಪೂರ್ಣಚಂದ್ರ ತೇಜಸ್ವಿ ಅವರ ಸಂಯೋಜನೆಯಲ್ಲಿ ಗೀತೆಗಳು ಮೂಡಿಬ... ಪುನೀತ್ ರಾಜ್‌ಕುಮಾರ್ ಕೂಡ ಒಂದು ... ದನಿಯಾಗಿದ್ದಾರೆ.

ಅಚ್ಯುತ್ ಕುಮಾರ್, ಕಿರಣ್ ನಾಯಕ್ ಸೇ... ಹಲವು ಕಲಾವಿದರು ತಾರಾಬಳಗದಲ್ಲಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com